ಶ್ರೀ ಡಿ ದೇವರಾಜ ಅರಸ್.—ಒಂದೊಂದು ವಿಚಾರ ಸತ್ಯಕ್ಕೆ ದೂರವಾದ ವಿ... ಇರುತ್ತದೆ. ಅವರಿಗೆ ಕೆಲವು ಫ್ಯಾಕ್ಟ್ಸ್ ಗೊತ್ತಿರಾವುದಿಲ್ಲ ಎಂದು ನನಗನಿಸುತ್ತದೆ-ಅವರು ನಿಮ್ಮ ಪಕ್ಷರಾಗಿದ್ದರೂ They have chosen a wrong place to conduct this kind of Satyagraha. ಅದು ಅವರ ಪ್ರೈವೇಟ್ ಪ್ರೊಪರ್ಟಿಯೋ ಅಲ್ಲವೇ ಎಂಬುದನ್ನು ಎಗ್ಸಾಮಿನ್ ಮಾಡಿ ಹೇಳುವುದ ಕ್ಕಾಗುವುದಿಲ್ಲ. ಹಾಗೆ ತೆಗೆದುಕೊಂಡ ಜಮೀನನ್ನು ಫಾರೆಸ್ಟ್ ಇಲಾಖೆಯವರು ಇಟ್ಟುಕೊಳ್ಳಬೇಕೇ ಬೇಡವೇ ಎಂಬುದು ಎರಡನೆಯ ಪ್ರಶ್ನೆ.

ಶ್ರೀ ಕೋಣಂದೂರು ಲಿಂಗಪ್ಪ.—ನಾವು ೨೩ನೇ ಮಾರ್ಚ್ ೧೯೭೩ರಂದು ನಮ್ಮ ಪ...ಯಲ್ಲಿ ಹೇಳಿ ಕೇಳಿಕೊಂಡಿದ್ದೇವೆ.

ಶ್ರೀ ಡಿ, ದೇವರಾಜ ಅರಸ್.—ಅದೇ ರೀತಿ ಒಂದು ಬಿಲ್ ಬಂದಿದೆ. ಅದನ್ನಿಲ್ಲಿ ಇಂಟ್ರೊಡ್ಯೂಸ್ ಮಾಡಲಾಗಿದೆ. ಅದರ ಬಗ್ಗೆ ಈ ಮಾನ್ಯ ಸಭೆ ಏನು ತೀರ್ಮಾನ ತೆಗೆದುಕೊಳ್ಳಲಿ ಅದರಂತೆ ಆಗುತ್ತದೆ. ಉಳಿದ ನಂದಿಹಳ್ಳಿ ಜಮೀನಿನ ಬಗ್ಗೆ ಬೇಕಾದರೆ ಮಾಹಿತಿ ತರಿಸಿ ಸ್ಟೇಟ್‌ಮೆಂಟ್ ಮಾಡುತ್ತೇವೆ.

Statement showing schedule of Additional Demands for 1973-(First instalment) presentation.

SUPPLEMENTARY DEMANDS FOR GRANTS.

SRI M. Y. GHORPADE (Minister for Finance).—I beg to present a Statement showing the Schedule of Additional Demands for the year 1973-74 (from 1st April 1973 to 31st March 1974) first instalment, as required under article 205 (1) of the Constitution of India.

MADAM SPEAKER.—Statement-showing the Schedule of Additional Demands for the year 1973-74 (from 1st April 1973 to 31st March 1974) first instalment, as required under article 205 (1) of the Constitution of India—presented.

MYSORE-PROHIBITION OF BEGGARY BILL, 1973.
MOTION TO CONSIDER (DEBATE CONTINUED)

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು (ಶಾಂತಿ ನಗರ):—ಸನ್ಮಾನ್ಯ ಸಭಾಧ್ಯಕ್ಷರೆ, ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಯವರು ತಂದಿರತಕ್ಕಂತಹ ೧೯೭೩ನೇ ಇಸವಿಯ ಮೈಸೂರು ರಾಜ್ಯದ ಭಿಕ್ಷಾಟನಾ ಅಪರಾಧಕ್ಕೆ ಸಂಬಂಧಪಟ್ಟ ಮಸೂದೆಯನ್ನು ಸ್ವಾಗತ ಮಾಡುತ್ತಾ ಈ ಸಂಧರ್ಭದಲ್ಲಿ ನಾಲ್ಕು ಮಾತುಗಳನ್ನು ಆಡಲಿಚ್ಛಿಸುತ್ತೇನೆ. ಈ ಬಿಲ್ಲಿನಲ್ಲಿ ತಂದಿರತಕ್ಕಂತಹ ಮೂಲ ಉದ್ದೇಶವೇನೋ ಬಹಳ ಚೆನ್ನಾಗಿದೆ. ನಾವು Statement of Objects and Reasons ನ್ನು ನೋಡುವಾಗ 'It is considered necessary to have a uniform law on the subject applicable to the whole of the State of Mysore.' ಎಂದು ಒತ್ತಿ ಹೇಳಿದ್ದಾರೆ.

ಎಂದು ಹೇಳುತ್ತಾರೆ. ಉದ್ದೇಶ ಬಹಳ ಚೆನ್ನಾಗಿದೆ. ಆದರೆ ನನಗೆ ಕೆಲವು ಸಂದೇಹಗಳೂ ಇವೆ. ಅಂದರೆ ಇದನ್ನು ಈಗಿನ ಪರಿಸ್ಥಿತಿಯಲ್ಲಿ ನಿಜವಾಗಿಯೂ ಕಾರ್ಯಗತ ಮಾಡುವುದಕ್ಕೆ ಆಗುತ್ತದೆಯೋ? ಇದಕ್ಕೆ ಮುಖ್ಯ ಕಾರಣ—ಇದರ ಬಗ್ಗೆ ಕೇಂದ್ರದವರು ಮತ್ತು ರಾಜ್ಯ ಸರ್ಕಾರಗಳು ಬೇಕಾದಷ್ಟು ಪ್ರಯತ್ನ ಮಾಡಿದ್ದಾರೆ. ಕೇಂದ್ರದಲ್ಲಿ ೧೯೬೯ನೇ ಇಸವಿಯಲ್ಲಿ ಇದರ ಬಗೆ ಒಂದು ಕಾನೂನನ್ನು

(ಶ್ರೀ ಕೆ. ಶ್ರೀನಿವಾಸುಲುನಾಯ್ಡು)

ಬಂದವು. ೧೯೪೩ನೇ ಇಸವಿಯಲ್ಲಿ ನಮ್ಮ ರಾಜ್ಯದಲ್ಲಿಯೂ ಒಂದು ಕಾನೂನನ್ನು
ತೆಗೆದುಕೊ
ದರೂ ಅಂದಿನಿಂದ ಇಂದಿನ ವರೆಗೆ ಭಿಕ್ಷಾಟನೆ ಮಾತ್ರ ಹಾಗೆಯೇ ಉಳಿದಿದೆ. ಇದಕ್ಕೆ
ತಂದತು
ವೇನು ಎಂಬುದರ ಬಗ್ಗೆ ನನಗೆ ಸಂದೇಹ ಬಂದಿದೆ. ಬಿಲ್ಲಿನ. ಚಾಪ್ಟರ್ ೩ರಲ್ಲಿ ಈ ರೀತಿ
ಮುಖ್ಯ
ಹೇಳುತ

'No person shall beg in the areas in which this Act is in force.'

–30 P.M.

ಈ ಮಸೂದೆಯಲ್ಲಿ ಹೇಳಿರುವ ಹಾಗೆ ಭಿಕ್ಷಾಟನೆಯನ್ನು ನಿರ್ಮೂಲ ಮಾಡಿ ಇದನ್ನು ಕಾರ್ಯಗತ ...ಡುವುದಕ್ಕೆ ಆಗುತ್ತದೆಯೋ ಎಂದು ನನಗೆ ಸಂದೇಹ ಇದೆ. ಈ ರೀತಿ ಜನರು ಭಿಕ್ಷಾಟನೆ ಮಾಡುವುದಕ್ಕೆ ...ಗೆ ಈ ದೇಶದಲ್ಲಿ ಇರತಕ್ಕ ಬಡತನವೇ ಕಾರಣವೋ? ಅಥವಾ ನಿರುದ್ಯೋಗ ಕಾರಣವೋ? ಅಥವಾ ...ನ ಧರ್ಮ ಮಾಡತಕ್ಕ ನಮ್ಮ ಹಿಂದಿನ ಸಂಪ್ರದಾಯ ಕಾರಣವೇ? ಪ್ರಪಂಚದಲ್ಲಿ ಎಲ್ಲಾ ಮತಗಳಲ್ಲೂ ...ನ ಮಾಡತಕ್ಕ ಒಂದು ಪದ್ಧತಿ ಏನಿದೆ ಅದು ನಮ್ಮಲ್ಲೂ ಬೆಳೆದು ಬಂದಿದೆ ಎಂಬುದು ಇದಕ್ಕೆ ಕಾರಣವೇ? ಅಥವಾ ನಮ್ಮಲ್ಲಿರತಕ್ಕ ಸೋಮಾರಿತನವೇ? ಇದನ್ನೆಲ್ಲಾ ಯೋಚನೆ ಮಾಡಿದರೆ ಬಹುಶಃ ಇದನ್ನು ಕಾರ್ಯಗತ ಮಾಡುವುದಕ್ಕೆ ಆಗುತ್ತದೆಯೋ? ಈ ಭಿಕ್ಷಾಟನೆಯನ್ನು ನಿರ್ಮೂಲ ಮಾಡುವುದಕ್ಕೆ ಸುಮಾರು ೩೦ ವರ್ಷಗಳಿಂದ ಸತತವಾಗಿ ಪ್ರಯತ್ನ ಮಾಡಿದರೂ ಕೂಡ ಇದುವರೆಗೆ ಅದನ್ನು ತಡೆಗಟ್ಟಲು ಏಕೆ ಆಗಿಲ್ಲ? ಇದಕ್ಕೆ ಮುಖ್ಯ ಕಾರಣವೇನು ಎನ್ನುವ ಸಂದೇಹ ನನಗೆ ಬಂದಿದೆ. ಇದನ್ನು ಕಾರ್ಯಗತ ಮಾಡುವುದಕ್ಕೆ ಮುಖ್ಯವಾಗಿ ಎರಡು ಏಜೆನ್ಸಿಗಳುಬೇಕು. ಒಂದು ಸರ್ಕಾರದ ವತಿಯಿಂದ ಮಾಡತಕ್ಕದ್ದು, ಎರಡನೆಯದು ಸಾರ್ವಜನಿಕರ ವತಿಯಿಂದ ಮಾಡತಕ್ಕದ್ದು. ಸಾರ್ವಜನಿಕ ಕ್ಷೇತ್ರದಲ್ಲಿ ಎಂದರೆ ಲೋಕಲ್ ಬಾಡೀಸ್ ಏನಿವೆ, ಮತ್ತು ಲೋಕಲ್ ಕಮಿಟಿಗಳು ಏನಿವೆ ಅವುಗಳು ಕೆಲವು ಸಂದರ್ಭದಲ್ಲಿ ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕು. ನಮ್ಮಲ್ಲಿ ದರಿದ್ರ ನಾರಾಯಣನ ಗುಂಪು ಜಾಸ್ತಿ ಇದೆ. ಇಡೀ ದೇಶ ಬಡತನದಲ್ಲೇ ಬೆಂದಿದೆ. ಮತ್ತು ಕುಂದಿದೆ ನಮ್ಮ ದೇಶದಲ್ಲಿ ಭಿಕ್ಷುಕರು ಸಾವಿರಾರು ಜನ ಇದ್ದಾರೆ. ಈ ಭಿಕ್ಷುಕರನ್ನು ನನಗೆ ಗೊತ್ತಿರುವ ಹಾಗೆ ಸುಮಾರು ೫ ಭಾಗಗಳಾಗಿ ವಿಂಗಡಿಸಬಹುದು. ಒಂದನೆಯವರು ಚಿಲ್ಡ್ರನ್ಸ್ ಬೆಗ್ಗರ್ಸ್, ಎರಡನೆಯವರು ಅಡಲ್ಟ್ ಬೆಗ್ಗರ್ಸ್, ಮೂರನೆಯವರು ಏಬಲ್‌ಬಾಡಿಯಡ್ ಬೆಗ್ಗರ್ಸ್, ನಾಲ್ಕನೆಯವರು ನೀಡಿ ಬೆಗ್ಗರ್ಸ್ ೫ ನೆಯವರು ಪ್ರೊಫೆಷನಲ್ ಬೆಗ್ಗರ್ಸ್ ಎಂಬುದಾಗಿ ವಿಂಗಡಿಸಬಹುದು. ನಮ್ಮ ಸಂಸ್ಥಾನದಲ್ಲಿ ೨ ಕೋಟಿ ೯೦ ಲಕ್ಷ ಜನರಿದ್ದಾರೆ. ಇದರಲ್ಲಿ ಎಷ್ಟು ಪರ್ಸೆಂಟ್ ಬೆಗ್ಗರ್ಸ್ ಇದ್ದಾರೆ ಎಂಬುದನ್ನು ನಾವು ನೋಡಬಹುದು. ರೈಲ್ವೆಸ್ಟೇಷನ್‌ನಲ್ಲಿ, ಬಸ್‌ಸ್ಟ್ಯಾಂಡ್‌ಗಳಲ್ಲಿ, ಸಂತೆಯಲ್ಲಿ ಮತ್ತು ಜಾತ್ರೆಗಳಲ್ಲಿ ಭಿಕ್ಷುಕರ ಕಾಟವನ್ನು ಚೆನ್ನಾಗಿ ನೋಡಬಹುದು. ಈ ರೀತಿ ಭಿಕ್ಷಾಟನೆ ಮಾಡುವುದಕ್ಕೆ ಕಾರಣವೇನು ಎಂಬುದು ನನಗೆ ಗೊತ್ತಾಗಲಿಲ್ಲ. ಆದ್ದರಿಂದ ಈ ಸಂದರ್ಭದಲ್ಲಿ ಸರ್ಕಾರದವರು ೧೯ ಜಿಲ್ಲೆಗಳಿಗೂ ಪೂರಾ ಅನ್ವಯಿಸುವ ಈ ಮಸೂದೆಯನ್ನೇನು ಈಗ ಈ ಸಭೆಯಲ್ಲಿ ಮುಂದೆ ತಂದಿದ್ದಾರೆ ಇದು ಬಹಳ ಒಳ್ಳೆಯದು. ಹೈದರಾಬಾದ್ ಕರ್ನಾಟಕ, ಬೊಂಬಾಯಿ ಕರ್ನಾಟಕ, ಮದ್ರಾಸ್ ಕರ್ನಾಟಕ ಮತ್ತು ಹಳೇ ಮೈಸೂರು ಈ ನಾಲ್ಕು ಪ್ರದೇಶಗಳಿಗೂ ಅನ್ವಯಿಸುವಂತೆ ಒಂದು ಕಾಂಪ್ರಹೆನ್ಸೀವ್ ಬಿಲ್ಲನ್ನು ತರಬೇಕಾದ್ದು ಸಹಜವಾಗಿಯೇ ಇದೆ. ಇದಕ್ಕೆ ಎನ್‌ಫೋರ್ಸಿಂಗ್ ಮೆಷನರಿಯನ್ನು ಅಂದರೆ ಸೆಂಟ್ರಲ್ ರಿಲೀಫ್ ಕಮಿಟಿ ಒಂದು ಮಾಡಿದ್ದಾರೆ. ಇದಕ್ಕೆ ಹಣವನ್ನು ಹೇಗೆ ಒದಗಿಸುತ್ತಾರೆ ಎಂದರೆ ಸರ್ಕಾರದ ಡೊನೇಷನ್ ಮುಖಾಂತರ ಹಣಬರುತ್ತದೆಯೋ? ಸಾರ್ವಜನಿಕರ ಡೊನೇಷನ್ ಮುಖಾಂತರ ಹಣ ಬರುತ್ತದೆಯೋ? ಎಂಬುದು ಗೊತ್ತಾಗಲಿಲ್ಲ. ಈ ಭಿಕ್ಷುಕರ ಸಮಸ್ಯೆ ಬಹಳ ಬೃಹದಾಕಾರವಾಗಿದೆ. ಈ ಭಿಕ್ಷುಕ ವೃತ್ತಿ ಏನಿದೆ ಇದರಲ್ಲಿ ನಮ್ಮ ದೇಶದ ಆತ್ಮ ಗೌರವದ ಪ್ರಶ್ನೆ ಮುಖ್ಯವಾಗಿ ಉಳಿದು ನಾವು ನಮ್ಮ ನ್ಯಾಷನಲ್ ಆನರ್ ಕಾಪಾಡಿಕೊಳ್ಳಬೇಕಾಗುತ್ತದೆ. ಪರದೇಶದಲ್ಲಿ ಭಿಕ್ಷುಕರೇ ಇಲ್ಲ ಎಂದು ನಾನು ಕೇಳಿದ್ದೇನೆ. ಆದರೆ ನಮ್ಮದೇಶದಲ್ಲಿ ಭಿಕ್ಷುಕರಿಗೆ ಒಂದು ಆಕ್ಟ್ ಅನ್ನು ತರಬೇಕಾಯಿತು. ಇದು ಬಹಳ ವಿಷಾದಕರವಾದ ಸಂಗತಿ. ಇದರಿಂದ ಬಡತನದ ಬೇಗೆ ಯಾವ ಮಟ್ಟದಲ್ಲಿದೆ ಎಂಬುದು ಗೊತ್ತಾಗುತ್ತದೆ. ಮತ್ತು ಅರ್ಥವಾಗುತ್ತದೆ ಈ ಭಿಕ್ಷೆ ಎನ್ನುವುದು ಸಣ್ಣ ಸಣ್ಣ ಮಕ್ಕಳಿಗೆ ಒಂದು ಕಲೆಯಾಗಿ ಬಿಟ್ಟಿದೆ. ಏಬಲ್ ಬಾಡಿಯವರು ಗಟ್ಟಿಮುಟ್ಟಾಗಿರುತ್ತಾರೆ. ಆದರೆ ಅವರಿಗೆ ಸೋಮಾರಿತನ ಬೆಳೆದು ಬಂದಿರುತ್ತದೆ, ನಮ್ಮ ಹಿಂದೂ ಧರ್ಮ ಶಾಸ್ತ್ರದ ಪ್ರಕಾರ ದಾನ ಕೊಡಬೇಕೆಂಬ ಒಂದು ಪದ್ಧತಿ ನಮ್ಮಲ್ಲಿ ಬೆಳೆದು ಬಂದಿದೆ. ಅವರಿಗೆ ಬರತಕ್ಕ ಆದಾಯದಲ್ಲಿ ಹತ್ತನೇ ಒಂದು ಭಾಗವನ್ನೋ ಅಥವಾ ಎಂಟನೇ ಒಂದು ಭಾಗವನ್ನೋ ದಾನವಾಗಿ ಕೊಡಬೇಕೆಂಬ ಒಂದು ಪದ್ಧತಿ

ಹಿಂದಿನಿಂದಲೂ ಬಂದಿದೆ. ಇದರಿಂದ ಕೆಲವರು ಸಹಜವಾಗಿ ಸೋಮಾರಿಗಳಾಗಿದ್ದಾರೆ. ಪ್ರತಿಯೊಬ್ಬರಿಗೂ ಸುಲಭವಾಗಿ ಜೀವನ ಆಗಬೇಕು ಎನ್ನುವ ಭಾವನೆ ಬೆಳೆದು ಬಂದಿರುವುದರಿಂದ ಕೆಲವರಿಗೆ ಭಿಕ್ಷೆಯನ್ನು ಬೇಡುವುದು ಒಂದು ಕಲೆಸಹ ಆಗಿದೆ ಸಣ್ಣ ಸಣ್ಣ ಮಕ್ಕಳು ಬೇಡುವುದಕ್ಕೆ ಹೋಗುತ್ತಿವೆ. ಮಂಟುವೆ ಮುಂಜಿ ಆಗುವಾಗ ಆ ಸ್ಥಳಕ್ಕೆ ಕೆಲವು ಭಿಕ್ಷುಕರು ಬಂದು ಅನ್ನಕ್ಕಾಗಿ ಗಂದ್ದಾಡುತ್ತಾರೆ. ಇದನ್ನು ಪರದೇಶಗಳವರು ನೋಡಿದ್ದೇ ಆದರೆ ಆಗ ನಮ್ಮದೇಶದ ಮಟ್ಟ ಯಾವ ಮಟ್ಟಕ್ಕೆ ಬರುತ್ತದೆ ಎಂಬುದನ್ನು ಯೋಚನೆ ಮಾಡಬೇಕು.

(Prohibition of begging)

ಚಾಪ್ಟರ್ ಮೂರರಲ್ಲಿ **Begging prohibited :—No person shall beg in the areas in which this Act is in force** ಎಂದು ಹೇಳಿದ್ದಾರೆ. ಇದನ್ನು ಕಾರ್ಯ ರೂಪಕ್ಕೆ ತರುವುದಕ್ಕೆ ಆಗುತ್ತದೆಯೋ ಎಂದು ಯೋಚನೆ ಮಾಡಬೇಕಾಗಿದೆ. ರಿಲೀಫ್ ಕಮಿಟಿಗಳನ್ನು ಏನಿವೆ ಈ ಕಮಿಟಿಗಳನ್ನು ಸಾರ್ವಜನಿಕ ಕ್ಷೇತ್ರಗಳಲ್ಲಿಯೂ ನೇಮಕ ಮಾಡಬೇಕು. ಲೋಕಲ್ ಬಾಡಿಗಳು ಏನಿವೆ ಅವುಗಳೂ ಸಹ ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕು ಪ್ರತಿ ಜಿಲ್ಲೆ, ಪ್ರತಿ ತಾಲ್ಲೂಕು ಮತ್ತು ಪ್ರತಿ ಮೊಹಲ್ಲಾಗಳಲ್ಲಿಯೂ ಇಂಥಾ ಕಮಿಟಿಗಳು ಇರಬೇಕು. ಈ ಬಗ್ಗೆ ಪೋಲೀಸಿನವರಿಗೆ ಕೊಟ್ಟಿರತಕ್ಕ ಪವರ್ಸ್ ಸಾಲದು ಅವರಿಗೆ ಹೆಚ್ಚಿನ ಪವರ್ ಕೊಡಬೇಕು. ಈ ಭಿಕ್ಷುಕರಿಗೆ ದಂಡ ಮತ್ತು ಶಿಕ್ಷೆಯನ್ನು ವಿಧಿಸುವ ವಿಷಯದಲ್ಲಿ ಏನು ಈ ಮಸೂದೆಯಲ್ಲಿ ನಮೂದಿಸಿದ್ದಾರೆ ಅದನ್ನು ಇನ್ನೂ ಸಿಂಪ್ಲಿಫೈ ಮಾಡಬೇಕು.

ನೀಡಿ ಬೆಗ್ಗರ್ಸ್ ಅಂದರೆ ಕುಂಟರು, ಕುರುಡರು. ಹೆಳವರು, ಕುಷ್ಠ ರೋಗಿಗಳು ಇವರಿಗೆ ಸಮಾಜದಲ್ಲಿ ಸಹಾಯ ದೊರೆಯುವಂತಾಗಬೇಕು. ಹಿಂದಿನ ಕಂದಾಚಾರ ಪದ್ಧತಿಯ ಪ್ರಕಾರ ಇರತಕ್ಕ ಪ್ರೊಫೆಷನಲ್ ಬೆಗ್ಗರ್ಸ್ ಎಂದರೆ ದಾಸಯ್ಯ ಮುಂತಾದವರು ಏನಿದ್ದಾರೆ ಇವರೂ ಕೂಡ ಭಿಕ್ಷೆ ಬೇಡುವುದನ್ನು ನಿಲ್ಲಿಸಬೇಕು ನಮಗೆ ಬಡವರ ಬಗ್ಗೆ ಅನುಕಂಪ ಇದೆ. ಆದರೆ ಬಡತನದ ಬೆಗ್ಗಿಂಗ್ ಏನಿದೆ ಇದನ್ನು ನಿಷೇಧಿಸಬೇಕು. ಈ ಕಾನೂನನ್ನು ಎನ್‌ಫೋರ್ಸ್ ಮಾಡತಕ್ಕ ಪೋಲೀಸ್ ಫೋರ್ಸ್ ಏನಿದೆ ಅವರ ಕೈಯ್ಯಲ್ಲಿ ಈಗಿನ ಪದ್ಧತಿಯ ಪ್ರಕಾರ ಇದನ್ನು ಮಾಡುವುದಕ್ಕಾಗುವುದಿಲ್ಲ. ಪ್ರತಿ ಜಿಲ್ಲೆ, ಪ್ರತಿ ತಾಲ್ಲೂಕು ಮತ್ತು ಪ್ರತಿ ಮೊಹಲ್ಲಾಗಳಲ್ಲಿಯೂ ಲೋಕಲ್ ಕಮಿಟಿಗಳನ್ನು ಮಾಡಿ ಈ ಭಿಕ್ಷಾಟನೆಯ ವೃತ್ತಿಯನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಈ ರೀತಿ ಲೋಕಲ್ ಕಮಿಟಿಗಳನ್ನು ನೇಮಕ ಮಾಡುವಾಗ ಸಾರ್ವಜನಿಕ ಕ್ಷೇತ್ರದಲ್ಲಿರತಕ್ಕ ಎಂ. ಪಿ. ಗಳ ಮತ್ತು ಎಂ. ಎಲ್. ಎ. ಗಳನ್ನು ಆ ಕಮಿಟಿಗಳಲ್ಲಿ ಹಾಕಬೇಕು. ಆ ಕಮಿಟಿಗಳ ಮುಖಾಂತರ ಈ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಬೇಕು. ಇದರ ಜೊತೆಗೆ ಭಿಕ್ಷುಕರು ಪೋಲೀಸಿನವರ ಕೈಗೆ ಸಿಕ್ಕಿದರೆ ಅವರನ್ನು ವ್ಯಾನಿನಲ್ಲಿ ತೆಗೆದುಕೊಂಡು ಹೋಗಿ ರಿಲೀಫ್ ಸೆಂಟರುಗಳಲ್ಲಿ ೨-೩ ತಿಂಗಳು ಇಟ್ಟು ಕೊಳ್ಳುತ್ತಾರೆ. ಈ ರಿಲೀಫ್ ಸೆಂಟರುಗಳಲ್ಲಿ ಭಿಕ್ಷುಕರಿಗೆ ರಿಲೀಫ್ ವರ್ಕ್ ಮಾಡಿಸುವುದರ ಜೊತೆಗೆ "ವರ್ಕ್ ಹೌಸ್" ಸ್ಟಾರ್ಟ್ ಮಾಡಿದರೆ ಬಹಳ ಒಳ್ಳೆಯದು. ಏತಕ್ಕೆಂದರೆ ಒಳ್ಳೊಳ್ಳೆಯ ಮರಗೆಲಸವನ್ನು ಮಾಡತಕ್ಕವರು ಗಾರೆ ಕೆಲಸವನ್ನು ಮಾಡತಕ್ಕವರು ನಿರುದ್ಯೋಗಿಗಳಾಗಿ ಯತ್ನವಿಲ್ಲದೆ ಬಡತನದ ಬೇಗೆಗೆ ಸಿಕ್ಕಿ ಅವರು ಭಿಕ್ಷಾಟನೆಗೆ ಬಂದಿರುತ್ತಾರೆ. ಅಂಥವರಿಗೆ ವರ್ಕ್ ಹೌಸ್‌ಗಳನ್ನು ಸ್ಟಾರ್ಟ್ ಮಾಡಬೇಕು. ಒಳ್ಳೆಯ ವ್ಯವಸಾಯ ಮಾಡುವವರು ಭಿಕ್ಷುಕರಾಗಿ ಬಂದಿರುತ್ತಾರೆ ಅವರಿಗೆ ಒಳ್ಳೆಯ ಫಾರಂ ಹೌಸ್ ಮಾಡಬೇಕು. ಈ ರಿಲೀಫ್ ಸೆಂಟರುಗಳಿಗೆ ಬಂದ ಭಿಕ್ಷುಕರು ಏನಿದ್ದಾರೆ ಅವರಿಗೆ ವರ್ಕ್ ಹೌಸ್ ತರಪೇತಿಯನ್ನು ಕೊಟ್ಟು ಅವರು ಮತ್ತೆ ಭಿಕ್ಷಾಟನೆ ಮಾಡದಂತೆ ಮಾಡಬೇಕು ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ನಾನು ಮೊದಲೇ ಹೇಳಿದ್ದೇನೆ. ಇದಕ್ಕೆ ಹಣ ಹೆಚ್ಚಿನ ಪ್ರಮಾಣದಲ್ಲಿ ಬೇಕು ಎಂದು ಹಣ ಇಲ್ಲದೆ ಯಾವ ಕೆಲಸ ಮಾಡಲೂ ಆಗುವುದಿಲ್ಲ. ಆದ್ದರಿಂದ ಅದಕ್ಕೆ ಬೇಕಾದ ಹಣವನ್ನು ಕೂಡ ಒದಗಿಸಿಕೊಳ್ಳಬೇಕಾಗುತ್ತದೆ. ಯಾರೋ ಒಬ್ಬ ಭಿಕ್ಷುಕ ಮಾರ್ಕೆಟ್ಟಿನಲ್ಲಿರತಕ್ಕ ಒಂದು ಎಲೆಕ್ಟ್ರಿಕ್ ಪೋಲಿನಲ್ಲಿ ದುಡ್ಡನ್ನು ಇಟ್ಟಿದ್ದನ್ನು ಪೋಲೀಸಿನವರು ಕಿತ್ತುಕೊಂಡು ಹೋಗಿದ್ದಾರೆ. ಎಂದು ವರ್ತಮಾನ ಹಬ್ಬಿತ್ತು ಆದ್ದರಿಂದ ಈ ಕಾನೂನನ್ನು ಎನ್‌ಫೋರ್ಸ್ ಪೋಲೀಸಿನವರಿಗೆ ಏನು ಅಧಿಕಾರವನ್ನು ಕೊಟ್ಟಿದ್ದಾರೆ ಅದರ ಜೊತೆಗೆ ಲೋಕಲ್ ಕಮಿಟಿಗಳನ್ನು ಮಾಡಿ ಅವರಿಗೆ ಹೆಚ್ಚಿನ ಅಧಿಕಾರವನ್ನು ಕೊಡಬೇಕು. ಅವರ ಮುಖಾಂತರ ಈ ಒಂದು ಭಿಕ್ಷಾಟನೆಯ ವೃತ್ತಿಯನ್ನು ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಒತ್ತಿ ಹೇಳುತ್ತೇನೆ.

(ಶ್ರೀ ಕೆ. ಆರ್. ಶ್ರೀನಿವಾಸಲು ನಾಯುಡು)

ಈ ಮಸೂದೆಯಲ್ಲಿ ಬೆಗ್ಗರಿ ಸೆಸ್ ಹಾಕಬೇಕು ಎಂದು ಹೇಳಿದ್ದಾರೆ. ಇದರಲ್ಲಿ ಬೆಗ್ಗರಿ ಸೆಸ್ ಎಂದು ಹೇಳುವುದಕ್ಕೆ ಬದಲಾಗಿ "ಪೂರ್ ಟ್ಯಾಕ್ಸ್" "Poor tax" ಎಂದು ಹೆಸರಿಟ್ಟು ಆ ಟ್ಯಾಕ್ಸ್ ಹಾಕಿದರೆ ಒಳ್ಳೆಯದು.

ಈ ಬಡವರನ್ನು ಸಾಕಬೇಕಾದರೆ ಪೂರ್ ಟ್ಯಾಕ್ಸನ್ನು ಹಾಗಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಯಾರ ಮೇಲೆ ಈ ಟ್ಯಾಕ್ಸನ್ನು ಹಾಕಬೇಕು?

ಶ್ರೀ ಎಚ್. ಎಸ್. ಸಿದ್ದಪ್ಪ.—ಯಾರು ಯಾರು ಲೆವಿ ಕೊಡುತ್ತಾರೋ ಅವರ ಮೇಲೆ ಈ ಟ್ಯಾಕ್ಸನ್ನು ಹಾಕಬೇಕು.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯುಡು.—ಹಣ ಇಲ್ಲದೆ ಇವರನ್ನು ಸಾಕುವುದಕ್ಕಾಗುವುದಿಲ್ಲ. ಮತ್ತು ಜನರು ಕೊಡುವ ದಾನಧರ್ಮದಿಂದ ಇವರನ್ನು ಸಾಕುವುದಕ್ಕಾಗವುದಿಲ್ಲ. ಅಲ್ಲದೆ ಕೇವಲ ಸರ್ಕಾರದ ಫಂಡಿನಿಂದಲೂ ಸಹ ಇವರನ್ನು ಸಾಕುವುದಕ್ಕಾಗುವುದಿಲ್ಲ. ಆದ್ದರಿಂದ ಪೂರ್ ಟ್ಯಾಕ್ಸ್ ಹಾಕುವುದು ಒಳ್ಳೆಯದೆಂದು ಹೇಳುತ್ತೇನೆ.

ಇನ್ನು ಕ್ಲಾಸ್ 10ರಲ್ಲಿ ಬೆಗ್ಗರಿ ಸೆಸ್ ಹಾಕುವ ವಿಚಾರವನ್ನುಹೇಳಲಾಗಿದೆ.

"......shall be levied in the area within the jurisdiction of every local authority under the relevant laws relating to the levy of such taxes at the rate of three paise for every rupee of the taxes so levied. ಎಂದು ಹೇಳಿದ್ದಾರೆ. ಈ ರೀತಿ 3 ಪೈಸೆ ಹಾಕುವುದಕ್ಕೆ ಬದಲು 6 ಪೈಸೆ ಹಾಕಿದರೆ ಹೆಚ್ಚು ಹಣ ಸಂಗ್ರಹವಾಗುತ್ತದೆ ಎಂದು ನನ್ನ ಸ್ಪಷ್ಟ ಅಭಿಪ್ರಾಯ ಈ ಹಣದಿಂದ ನಾನು ಮೊದಲೇ ಹೇಳಿದಂತೆ ಕೆಲವು ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ಅಲ್ಲಿ ಇವರಿಗೆ ಕೆಲಸವನ್ನು ಒದಗಿಸಬಹುದು. ಈ ರೀತಿ ಕೆಲಸವನ್ನು ಒದಗಿಸುವುದರ ಜೊತೆಗೆ ಅಲ್ಲಿ ಇವರಿಗೆ ಹೋಮ್ಲಿ ಅಟ್‌ಮಾಸ್ಫಿಯರನ್ನು ಕ್ರಿಯೇಟ್ ಮಾಡಿದರೆ ಅವರು ಸಮಾಜದಲ್ಲಿ ಸುಧಾರಿತ ಜೀವನ ಮಾಡುವುದಕ್ಕೆ ಹೆಚ್ಚಿನ ಅವಕಾಶವಾಗುತ್ತದೆ. "Earn while you learn" (ಅರ್ನ್ ವೈಲ್ ಯು ಅರ್ನ್) ಎಂಬುದನ್ನು ಕ್ರಿಯೇಟ್ ಮಾಡಿದರೆ ಈ ಬೆಗ್ಗರ್ಸ್ ಪ್ರಾಬಂ ಕಡಿಮೆಯಾಗಬಹುದೆಂದು ನನಗನ್ನಿಸುತ್ತದೆ.

ಮುಂದೆ 16ನೇ ಸೆಕ್ಷನನಲ್ಲಿ.

Section 16;—Refusal of a beggar to go to an Institution or to a Magistrate punishable with imprisonment or fine or both. Any beggar refusing or failing to accompany a Police Officer or any officer authorised by the Government in this behalf to appear before a Judicial Magistrate or to be taken to an Institution when required under this Act, shall be punished on conviction by a Judicial Magistrate with simple imprisonment for a term which may extend to one month or with fine which may extend to fifty rupees or with both." ಎಂದು ಹೇಳಿದ್ದಾರೆ. ಈ ರೀತಿ ಜುಡಿಷಿಯಲ್ ಪವರ್ ಕೊಟ್ಟು, ಅವರಿಗೆ ಫೈನ್ ಹಾಕಿದರೆ, ಅದನ್ನು ಅವರಿಂದ ವಸೂಲಿ ಮಾಡುವುದು ಕಷ್ಟ ಏಕೆಂದರೆ ಅವರು ಮೊದಲೇ ಭಿಕ್ಷುಕರಾಗಿರುತ್ತಾರೆ ಆದಕಾರಣ ಈ ರೀತಿ ಹಾಕತಕ್ಕಂಥ ಫೈನ್ ಹಣವನ್ನು ಲ್ಯಾಂಡ್ ರೆವಿನ್ಯೂ ತರಹ ವಸೂಲಿ ಮಾಡುವುದಕ್ಕಾಗುವುದಿಲ್ಲ. ಇದರ ಬದಲು ಲೋಕಲ್ ಬಾಡೀಸ್ ಅವರೇ ಏನಾದರು ಒಂದು ತೀರ್ಮಾನ ಮಾಡಿ ಫೈನ್ ಹಾಕುವುದು ಒಳ್ಳೆಯದೆಂದು ಹೇಳುತ್ತೇನೆ. ಹಿರಿಯಕ್ಕನ ಚಾಳಿ ಮನೆ ಮಕ್ಕಳಿಗೆಲ್ಲಾ ಎಂಬ ಗಾದೆಯಂತೆ ಈ ಭಿಕ್ಷಾಟನೆ ವೃತ್ತಿ ಎಂಬುದು ದೊಡ್ಡವರಿಂದ ಚಿಕ್ಕವರಿಗೂ ಬಂದುಬಿಡುತ್ತದೆ. ನಾನು ಮೊದಲೇ ಹೇಳಿದಂತೆ ಇದು ಒಂದು ಕಲೆಯಾಗಿದೆ. ಇಂದು ನಾವು ಎಲ್ಲಿ ನೋಡಿದರೂ ಇವರು ಇರುತ್ತಾರೆ. ಇದಕ್ಕೆ ಏನು ಕಾರಣ ಎಂಬುದೂ ಮಾನ್ಯ ಸದಸ್ಯರಿಗೆ ಸಹ ಎಲ್ಲರಿಗೂ ಗೊತ್ತಿದೆ ಎಂದು ಭಾವಿಸಿದ್ದೇನೆ.

ಅಧ್ಯಕ್ಷರು:—ತಾವು ಜಾಗ್ರತೆ ಮುಗಿಸಬೇಕು.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳು ವುದೇನೆಂದರೆ, ಈ ಜನರನ್ನು ಭಿಕ್ಷಾಟನೆ ವೃತ್ತಿಯಿಂದ ತಪ್ಪಿಸಲು ಅವರಿಗೆ ಒಳ್ಳೆಯ ಕೆಲಸಗಳನ್ನು ಕಲಿಸಿ, ಆ ಮೂಲಕ ಸಂಪಾದನೆಯ ಮಾರ್ಗವನ್ನು ತೋರಿಸಿಕೊಡಬೇಕು. ಮತ್ತು ಒಳ್ಳೆಯ ಅಟ್‌ಮಾಸ್ಫಿಯರನ್ನು ಕ್ರಿಯೇಟ್ ಮಾಡಬೇಕು. ಇವರ ಜೊತೆಗೆ ಇಲ್ಲಿ ೫೦ ರೂಪಾಯಿಗಳವರೆಗೆ ಫೈನ ಹಾಕಬಹುದೆಂದು ಏನು ಹೇಳಲಾಗಿದೆ, ಅದನ್ನು ೧೫ ರೂಪಾಯಿಗಳಿಗೆ ಇಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮಂತ್ರಿಗಳು ಏನು ಒಂದು ಘನ ಉದ್ದೇಶದಿಂದ ಈ ವಿಧೇಯಕವನ್ನು ತಂದಿದ್ದಾರೋ ಅದು ಕಾರ್ಯಗತವಾಗಬೇಕಾದರೆ Poor tax (ಪೂರ್ ಟ್ಯಾಕ್ಸ್) ಹಾಕುವುದು ಒಳ್ಳೆಯದೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

'ಜೈ ಕರ್ನಾಟಕ'

†ಶ್ರೀ ಟಿ.ಎಂ. ಮಂಜುನಾಥ (ತಿಪಟೂರು) ;—ಮಾನ್ಯ ಅಧ್ಯಕ್ಷಿಣಿಯವರೇ ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಸಭೆಯ ಮುಂದೆ ಮಂಡಿಸಿರುವ ೧೯೭೩ನೇ ಇಸವಿಯ ಮೈಸೂರು ರಾಜ್ಯದ ಭಿಕ್ಷಾಟನಾ ನಿರೋಧಕ್ಕೆ ಸಂಬಂಧಿಸಿದ ವಿಧೇಯಕವನ್ನು ವಿರೋಧಮಾಡುತ್ತಾ ನಾನು ಹೇಳುವುದು ಇಷ್ಟೆ, ಈ ಭಿಕ್ಷಾಟನೆ ಎಂಬುದು ನಮ್ಮ ದೇಶದಲ್ಲಿ ಅನುಚ್ಛಾನವಾಗಿ ನಡೆದುಕೊಂಡು ಬಂದಿದೆ. ಕೆಲವರು ಇದನ್ನೇ ವೃತ್ತಿಯನ್ನಾಗಿ ಇಟ್ಟುಕೊಂಡಿದ್ದಾರೆ. ಕೆಲವರು ದಾಸಯ್ಯ ವೃತ್ತಿ ಇಟ್ಟುಕೊಂಡಿದ್ದಾರೆ. ಮತ್ತೆ ಕೆಲವರು ಜಂಗಮ ವೃತ್ತಿ ಇಟ್ಟುಕೊಂಡಿದ್ದಾರೆ ಇವರು ಸೋಮವಾರ ದಿವಸ ಭಿಕ್ಷೆ ಬೇಡುತ್ತಾರೆ, ಬುಡುಬುಡುಕೆ ವೃತ್ತಿಮಾಡುವವರು ಇದ್ದಾರೆ. ಇವರು ಹಗಲು ಹೊತ್ತು ಕೆಲವು ಮನೆಗಳ ವಿಷಯಗಳನ್ನು ಸಂಗ್ರಹ ಮಾಡಿ ಬೆಳಗಿನಜಾವ ಬಂದು ಆ ಮನೆಗಳವರನ್ನು ಹೆದರಿಸಿ ಭಿಕ್ಷೆ ಪಡೆಯುತ್ತಾರೆ. ಇವರು ಭಿಕ್ಷೆ ಕೊಡುವವರೆಗೂ ಹೋಗುವುದೇ ಇಲ್ಲ. ಈ ಒಂದು ವೃತ್ತಿ ವೇದ ಕಾಲದಿಂದಲೂ ನಡೆದುಕೊಂಡು ಬಂದಿದೆ. 'ದಯೆಯೇ ಧರ್ಮದ ಮೂಲವಯ್ಯ' ಎನ್ನುವ ಸಿದ್ಧಾಂತವನ್ನು ನಾವು ಒಪ್ಪಿಕೊಂಡಿದ್ದೇವೆ, ಆದ್ದರಿಂದ ನಾವು ದಯೆಯನ್ನು ತೋರಿಸಬೇಕಾದರೆ ಭಿಕ್ಷುಕರು ಇರಬೇಕಾಗುತ್ತದೆ. ಇಲ್ಲದಿದ್ದರೆ ಯಾವುದನ್ನೂ ಮಾಡುವುದಕ್ಕಾಗುವುದಿಲ್ಲ ಹೊಟ್ಟೆಗೆ ಅನ್ನವಿಲ್ಲದೆ ಭಿಕ್ಷೆ ಬೇಡುವವರು ಒಂದು ಗುಂಪಾದರೆ ಅಂತರಂಗದಲ್ಲಿಯೇ ಭಿಕ್ಷೆ ಕೇಳುವವರದ್ದು ಒಂದು ಗುಂಪಾಗಿದೆ. ಈ ಎರಡನೆ ಗುಂಪಿಗೆ ನಾವು ಸೇರುತ್ತೇವೆ. ಶ್ರೀಮಾನ್ ಬಸವಲಿಂಗಪ್ಪನವರನ್ನು ಒಬ್ಬರನ್ನು ಬಿಟ್ಟರೆ ನಾವೆಲ್ಲರೂ ದೇವರನ್ನು ನಮಗೆ ಒಳ್ಳೆಯದನ್ನು ಮಾಡು ಎಂದು ಕೇಳಿಕೊಳ್ಳುತ್ತೇವೆ. ಶ್ರೀಮತಿ ಇಂದಿರಾಗಾಂಧಿಯವರು ನೆನ್ನೆತಾನೆ ಮೀನಾಕ್ಷಿ ದೇವಸ್ಥಾನ ಮತ್ತು ರಾಮೇಶ್ವರ ದೇವಸ್ಥಾನಗಳಿಗೆ ಭೇಟಿ ಕೊಟ್ಟು ದೇಶದ ಜನರಿಗೆ ಒಳ್ಳೆಯದಾಗಲಿ, ನಮ್ಮ ದೇಶಕ್ಕೆ ಬಂದಿರುವ ವಿಪತ್ತನ್ನು ಹೋಗಲಾಡಿಸು ಎಂದು ದೇವರನ್ನು ಕೇಳಿಕೊಂಡಿದ್ದಾರೆ. ಇಂದಿರಾಗಾಂಧಿಯವರ ತತ್ವಗಳನ್ನು ಶ್ರೀಮಾನ್ ಬಸವಲಿಂಗಪ್ಪನವರು ಒಪ್ಪಿಕೊಳ್ಳುವುದಿಲ್ಲವೆಂದು ಕಾಣುತ್ತದೆ. ಅವರಿಗೆ ಮಂತ್ರಿ ಪದವಿಯ ಒಂದು ಕವಚ ಇರುವುದರಿಂದ, ದೇವರೇ ಇಲ್ಲ ಎಂದು ಹೇಳುವ ಶಕ್ತಿ ಅವರಿಗೆ ಬಂದಿದೆ.

ಶ್ರೀ ಎಸ್. ಹಮೀದ್ ಷಾ.—ಶ್ರೀಮಾನ್ ಬಸವಲಿಂಗಪ್ಪನವರಿಗೂ ಈ ಬಿಲ್‌ಗೂ ಏನಾದರೂ ಸಂಬಂಧವಿದೆಯೇ?

ಶ್ರೀ ಟಿ.ಎಂ. ಮಂಜುನಾಥ.—ಈ ಮಾತನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ಮಾನ್ಯ ಬಸವ ಲಿಂಗಪ್ಪನವರೇನಾದರೂ ಮಂತ್ರಿ ಪದವಿ ಬಿಟ್ಟು ಸಾಮಾನ್ಯ ಜನತೆಯ ಸ್ಥಾನದಲ್ಲಿ ಇದ್ದುಕೊಂಡು ಇದೇ ಮಾತನ್ನು ಹೇಳಿದ್ದರೆ, ಆಗ ಜನತೆ ಈತ ಒಬ್ಬ ಹುಚ್ಚ ಎಂದು ಹೆಸರು ಕೊಡುತ್ತಿದ್ದರು.

ಅಧ್ಯಕ್ಷರು.—ತಾವು ಮಸೂದೆಯ ಮೇಲೆ ಮಾತನಾಡಿ.

ಶ್ರೀ ಟಿ.ಎಂ. ಮಂಜುನಾಥ.—ನಾನು ಹೇಳುವುದೇನೆಂದರೆ, ಈ ಭಿಕ್ಷೆ ಬೇಡುವ ವೃತ್ತಿ ನಮ್ಮ ದೇಶದಲ್ಲಿ ಅನೇಕ ಕಾರಣಗಳಿಂದ ಬೆಳೆದು ಬಂದಿದೆ. ಸರ್ವೇಸಾಧಾರಣವಾಗಿ ನಾವು ಯಾವುದೇ ಸರ್ಕಲ್‌ನಲ್ಲಿ ನೋಡಿದರೂ ಸಹ ಅಲ್ಲಿ ಈ ಭಿಕ್ಷೆ ಬೇಡುವವರು ಇರುತ್ತಾರೆ ಕೆಲವು ಹೆಂಗಸರು ಎರಡು ತಿಂಗಳ ಮಗುವನ್ನು ಎತ್ತಿಕೊಂಡು ಉಪವಾಸ ಇದ್ದೇನೆ ಎಂದು ಭಿಕ್ಷೆ ಕೇಳುತ್ತಿರುತ್ತಾರೆ. ಹೊಟೆಲ್‌ಗಳ ಮುಂದೆ ಇವರು ಇರುತ್ತಾರೆ. ಇಲ್ಲಿ ''ಚೈಲ್ಡ್'' ಎಂಬ ಪದಕ್ಕೆ ಒಂದು ಡೆಫನಿಷನ್ ಹಾಕಿದ್ದೀರಿ. ಈ ಡೆಫನಿಷನ್‌ನಲ್ಲಿ ೧೬ ವರ್ಷ ವಯಸ್ಸಿನೊಳಗಿರುವ ಹುಡುಗರನ್ನು ಮತ್ತು ೧೮ ವರ್ಷ ವಯಸ್ಸಿನೊಳಗಿರುವ ಹೆಣ್ಣುಮಕ್ಕಳನ್ನು ''ಚೈಲ್ಡ್'' ಎಂದು ಕನ್ಸಿಡರ್ ಎಂದು ಮಾಡಬೇಕೆಂದು ಹೇಳಿದ್ದೀರಿ ಇಲ್ಲಿ ಹೇಳಿರುವ ಪ್ರಕಾರ ೧೬ ವರ್ಷದವರೆಗೆ ಭಿಕ್ಷೆ ಮಾಡುವುದಕೆ ಅವಕಾಶ ಕೊಟ್ಟು, ೧೭ನೇ ವರ್ಷದಲ್ಲಿ ಆ ವೃತ್ತಿ ಮಾಡಬಾರದೆಂದು ಹೇಳಿದರೆ, ಆತ ಆ ಕಸಬನ್ನು

(ಶ್ರೀ ಟಿ. ಎಂ. ಮಂಜುನಾಥ

ಬಿಡುವುದಕ್ಕೆ ಸಾಧ್ಯವೇ ಎಂಬುದನ್ನು ನೋಡಬೇಕು. ಹಳ್ಳಿಗಳಲ್ಲಿ ಹತ್ತು ವರ್ಷದ ಹುಡುಗರನ್ನು ಮನೆ ಕೆಲಸ ಮಾಡಲು ಇಟ್ಟುಕೊಂಡಿರುತ್ತಾರೆ. ಈ ರೀತಿ ಹತ್ತನೇ ವರ್ಷದಲ್ಲಿ ಮನೆ ಕೆಲಸಗಳನ್ನು ಮಾಡಲು ಶಕ್ತಿ ಇರಬೇಕಾದರೆ, ತಾವು ಮಾತ್ರ ಇಲ್ಲಿ ವಿನಾಕಾರಣ ೧೬ನೇ ವರ್ಷದವರೆಗೆ ಭಿಕ್ಷುಕ ವೃತ್ತಿ ಮಾಡಲು ಬಿಡುವುದು ಸರಿಯೋ ಎಂದು ಕೇಳುತ್ತೇನೆ. ಇದನ್ನು ಕಡಿಮೆ ಮಾಡಬೇಕೆಂದು ಹೇಳುತ್ತೇನೆ.

ಮುಂದೆ ಬೆಗ್ಗರಿ ಸೆಸ್ ಬಗ್ಗೆ ಹೇಳುತ್ತಾ

(i) tax on lands and buildings,

(ii) tax on entry of goods into the local area for consumption, use or sale therein.

(iii) tax on vehicles.

(iv) tax on professions, trades, callings and employments,

ಎಂದು ಹೇಳಿದ್ದೀರಿ. ಈ ರೀತಿ ಅನೇಕ ಬಾಬುಗಳ ಮೇಲೆ ಟ್ಯಾಕ್ಸನ್ನು ಸರ್ಕಾರದವರು ಹಾಕುತ್ತಾರೆಂದು ಜನರಿಗೆ ಗೊತ್ತಾದರೆ, ಭಿಕ್ಷೆ ಮಾಡುವ ವೃತ್ತಿಗೆ ಏತಕ್ಕೆ ಸೇರಬಾರದು ಎಂಬ ಮನಸ್ಸು ಜನರಲ್ಲಿ ಬರಬಹುದು. ಇದಕ್ಕೆ ಖರ್ಚು ಮಾಡಲು ಸರ್ಕಾರದ ಹತ್ತಿರ ಹಣ ಇಲ್ಲದಿದ್ದರೆ ಖಾಸಗಿ ಸಂಸ್ಥೆಗಳಿಗೆ ಇಂತಹ ಕೆಲಸಕ್ಕೆ ಒಂದು ಭಾಗ ಹಣವನ್ನು ತೆಗೆದಿಡಿ ಎಂದು ಹೇಳಿ. ಇಲ್ಲದಿದ್ದರೆ ಭಿಕ್ಷೆ ಮಾಡುವವರ ಸಂಖ್ಯೆ ಜಾಸ್ತಿಯಾಗಬಹುದು. ಈಗಾಗಲೇ ಪ್ರತಿಯೊಂದು ಹಳ್ಳಿಗಳಲ್ಲಿಯೂ ಸಹ ಇವರ ಸಂಖ್ಯೆ ಜಾಸ್ತಿಯಾಗುತ್ತಿದೆ. ನಮ್ಮ ತಿಪಟೂರಿನಲ್ಲಿ ಪ್ರತಿ ಸೋಮವಾರ ಈ ಭಿಕ್ಷುಕರು ಸಾಲು ಸಾಲಾಗಿ ಬಂದು ಬೆಳಗ್ಗೆ ೮ ಗಂಟೆಯಿಂದ ಮಧ್ಯಾಹ್ನ ೧೨ ಗಂಟೆಯವರೆಗೆ ಭಿಕ್ಷೆ ಬೇಡುತ್ತಾರೆ. ಇದೇ ರೀತಿ ಬೆಂಗಳೂರು ನಗರದಲ್ಲಿ ಪ್ರತಿ ಶುಕ್ರವಾರ ಇವರು ಸಾಲುಸಾಲಾಗಿ ಬಂದು ಭಿಕ್ಷೆ ಬೇಡುತ್ತಾರೆ. ಒಂದು ದಿವಸ ಅವಿನ್ಯೂ ರೋಡಿನಲ್ಲಿ ಇವರು ಓಡಿಹೋಗುತ್ತಿರುವುದನ್ನು ನೋಡಿದೆ. ಕಾರಣ ಇವರನ್ನು ಹಿಡಿಯಲು ಪೋಲೀಸ್ ವ್ಯಾನ್ ಬರುತಿತ್ತು. ಅದಕ್ಕಾಗಿ ಅವರು ರಕ್ಷಣೆ ಪಡೆಯಲು ಮಸೀದಿ ಮತ್ತು ದೇವಸ್ಥಾನಗಳಿಗೆ ಓಡಿ ಹೋಗುತ್ತಿದ್ದರು. ಈ ರೀತಿ ಇಂದು ನಮ್ಮ ಸಮಾಜದಲ್ಲಿ ನಡೆಯುತ್ತಿದೆ. ಈ ಒಂದು ವಿಧೇಯಕವನ್ನು ತರುವ ಮೊದಲು, ಇದಕ್ಕೆ ಮೂಲ ಕಾರಣವೇನು ಎಂಬುದನ್ನು ಕಂಡುಹಿಡಿದು, ನಂತರ ಅದನ್ನು ಹೋಗಲಾಡಿಸಲು ಅವಕಾಶವಾಗುವಂತಹ ಒಂದು ವಿಧೇಯಕವನ್ನು ತಂದಿದ್ದರೆ ನನಗೆ ಸಂತೋಷವಾಗುತ್ತಿತ್ತು. ಆದರೆ ಈಗ ತಂದಿರುವ ವಿಧೇಯಕದಲ್ಲಿ ಇದನ್ನು ಹೋಗಲಾಡಿಸಲು ಯಾವ ಸಂಧಾರಣೆಯೂ ಕಾಣುತ್ತಿಲ್ಲ.

ನಮ್ಮ ದೇಶದಲ್ಲಿ ಭಿಕ್ಷೆಯನ್ನು ಮಾಡಲೇಬಾರದು ಎನ್ನುವ ಜನರೂ ಇದ್ದಾರೆ. ಆದರೆ ನಮ್ಮ ದೇಶದಲ್ಲಿ ಅನೇಕ ರೀತಿಯಾಗಿ ಭಿಕ್ಷೆ ಮಾಡುವ ಜನರಿದ್ದಾರೆ. ಇದರಲ್ಲಿ ದುರುಪಯೋಗಗಳೂ ಆಗುತ್ತಿವೆ. ಇಂತಹ ಭಿಕ್ಷುಕರಿಗೆ ರಕ್ಷಣೆ ಕೊಡುವುದು ಸರಿಯಲ್ಲ. ಆದರೆ ಕೆಲವು ರೀತಿಯ ಭಿಕ್ಷುಕರು ಇರುತ್ತಾರೆ ಅವರಿಗೇನೂ ರಕ್ಷಣೆ ಇರುವುದಿಲ್ಲ ಕೆಲವರಿಗೆ ಸರಕಾರವಾಗಲೀ ಇಲ್ಲವೇ ಸಾರ್ವಜನಿಕರಾಗಲೀ ಅವರ ವಯಸ್ಸಿಗನುಗುಣವಾಗಿ ಕೆಲಸಗಳನ್ನು ಅವರಿಗೆ ಒದಗಿಸಿಕೊಡಬೇಕು ಆದರೆ ಭಿಕ್ಷುಕರಿಗೆ ಅನುಕೂಲ ಮಾಡಬೇಕೆಂದು ಜನರ ಮೇಲೆ ಒಂದು ರೀತಿ ಸೆಸ್ಸನ್ನು ಇಲ್ಲಿ ಹಾಕಬೇಕೆಂದು ತರುವುದು ಸರಿಯಲ್ಲ, ಇದನ್ನು ಸರಕಾರ ಪರಿಶೀಲಿಸಬೇಕು. ಮತ್ತು ಇದರಲ್ಲಿ ಕೆಲವು ಭಿಕ್ಷುಕರ ವಯಸ್ಸು ಇಂತಿಷ್ಟು ಇರಬೇಕೆಂದು ಇದರಲ್ಲಿದೆ. ಇದು ಸರಿಯಾಗಿಲ್ಲ. ಇದನ್ನು ಮತ್ತೊಮ್ಮೆ ಪರಿಶೀಲಿಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ

†ಶ್ರೀ ಕೆ. ಪ್ರಭಾಕರ್ (ವರ್ತೂರು) :—

ಮಾನ್ಯ ಅಧ್ಯಕ್ಷರೇ, ಭಿಕ್ಷಾಟನೆಯನು ವೃತ್ತಿ ಮಾಡತಕ್ಕದ್ದು ಸಮಾಜದ ಒಂದು ಘನತೆಯನ್ನು ಹೆಚ್ಚಿಸುತ್ತದೆ ಎನ್ನುವ ಒಂದು ಈ ಭಾವನೆಯಿಂದ ಬಿಲ್ಲನ್ನು ತಂದಿದ್ದಾರೆ, ಸಮಾಜದಲ್ಲಿರುವ ಚಾಳಿಗಳಲ್ಲಿ ಹಾಗೂ ಎಷ್ಟೋ ದುಶ್ಚಟಗಳ ಪೈಕಿ ಭಿಕ್ಷಾಟನೆಯೂ ಒಂದು ಮುಖ್ಯವಾಗಿ ಇದರಲ್ಲಿರುವ ಉದ್ದೇಶ ಈ ದೇಶದಲ್ಲಿ ಭಿಕ್ಷಾಟನೆ ಹೋಗಬೇಕು ಎನ್ನುವುದು, ಪಾಶ್ಚಿಮಾತ್ಯ ಜನಗಳು ಎಂದರೆ ಬಿಳಿಯರು ನಮ್ಮನ್ನು ದೇಶಕ್ಕೆ ಬಂದಾಗ ರೈಲ್ವೇ ಸ್ಟೇಷನ್ನುಗಳಲ್ಲಿ, ಹೋಟೆಲುಗಳಲ್ಲಿ ಕೈ ಒಡ್ಡಿ ಬೇಡುತ್ತಿರುವ ಜನರನ್ನು ನೋಡಿ ಇದೆಂತಹ ದೇಶ ಎಂದು ಅವರು ನಮ್ಮ ಕಡೆಗೆ ಬೆರಳು ತೋರಿಸಿ This appears to be

nation of Beggars ಎಂದು ಹೇಳುತ್ತಿದ್ದರು. ಆದಕ್ಕಾಗಿ ನಮ್ಮ ಸರಕಾರ ನಮ್ಮ ದೇಶದಲ್ಲಿ ಇಂದು ಭಿಕ್ಷಾಟನೆಯನ್ನು ನಿರ್ಮೂಲನ ಮಾಡಬೇಕು ಎನ್ನುವ ಒಂದು ಆಸಕ್ತಿಯಿಂದ ಇಂತಹ ಒಂದು ಬಿಲ್ಲನ್ನು ಈಗ ಇಲ್ಲಿ ತಂದು ಇಟ್ಟಿದ್ದಾರೆ ಇಂದು ಕುಷ್ಟ ರೋಗಿಗಳು ಅನೇಕರು ದೇವಸ್ಥಾನಗಳ ಮುಂದೆ ಭಿಕ್ಷೆ ಬೇಡುತ್ತಾ ಇರುತ್ತಾರೆ, ಅವರು ಅಲ್ಲಿ ದೇವರ ದರ್ಶನಕ್ಕೆಂದು ಬರುವ ಜನರ ಮೇಲೆ ಒತ್ತಾಯ ಮಾಡಿ ಭಿಕ್ಷೆ ಬೇಡುತ್ತಿರುವುದನ್ನು ನಾವು ನೋಡುತ್ತೇವೆ. ದೇವರ ದರ್ಶನಕ್ಕೆ ಹೋಗುವಾಗ ಇಂತಹ ಜನರಿದ್ದರೆ ಅವರ ಮೇಲೆ ಒಂದು ರೀತಿಯಾದ ಪರಿಣಾಮವಾಗುತ್ತದೆ. ಆದುದರಿಂದ ಇಂತಹ ಭಿಕ್ಷುಕರು ಭಿಕ್ಷೆ ಮಾಡುವುದನ್ನು ತಡೆಗಟ್ಟಬೇಕು ಎನ್ನುವುದೂ ಕೂಡ ಇದರಲ್ಲಿರುವ ಮತ್ತೊಂದು ಉದ್ದೇಶ ಇನ್ನು ಕೆಲವರು ಜೀವನ ನಡೆಸಲು ಸಾಧ್ಯವಿಲ್ಲ ಎಂದು ಅವರ ಮಕ್ಕಳನ್ನು ಬೀದಿಗೆ ಭಿಕ್ಷಕ್ಕೆ ಬಿಡುತ್ತಾರೆ. ಅವರು ತಿರಿದೂ ತಿರಿದೂ ಏನೋ ಅಷ್ಟೋ ಇಷ್ಟೋ ಭಿಕ್ಷೆ ಬೇಡಿ ಸಾಯಂಕಾಲ ಅವರ ಮನೆಗೆ ಬರುತ್ತಾರೆ, ಇವೆಲ್ಲವನ್ನೂ ನೋಡಿ ಸರಕಾರ ಭಿಕ್ಷಾಟನ ವೃತ್ತಿಯನ್ನು ರದ್ದು ಮಾಡಬೇಕೆಂದು ಇಲ್ಲಿ ಈ ಒಂದು ಮಸೂದೆಯನ್ನು ತಂದಿರುವುದು ಒಂದು ರೀತಿಯಲ್ಲೀ ಒಳ್ಳೆಯದೇ, ಇವೊತ್ತಿನ ಪರಿಸ್ಥಿತಿಯಲ್ಲಿ ದೇಶದಲ್ಲಿ ಆಹಾರದ ಅಭಾವವಿರುವ ಸನ್ನಿವೇಶದಲ್ಲಿ ಭಿಕ್ಷೆ ಬೇಡಲು ಬಂದವರಿಗೆ ಕೈ ನೀಡಿ ಅನ್ನ ನೀಡಲು ಆಗುವುದಿಲ್ಲ, ಆದರೂ ಕೆಲವು ಜನರಲ್ಲಿ ಒಂದು ನಂಬಿಕೆ ಇದೆ. ಹುಟ್ಟಿಸಿದ ದೇವರು ಹುಲ್ಲು ನೀರು ಕೊಡುವುದಿಲ್ಲವೇ ಎಂದು ಭಿಕ್ಷಾಟನೆ ಎನ್ನುವುದು ಇಂದು ದೇಶದಲ್ಲಿ ನಾನಾ ರೀತಿಯಲ್ಲಿವೆ ಇದರಲ್ಲಿ ತಾರತಮ್ಯ ಮಾಡದೆ ಭಿಕ್ಷಾಟನೆಯನ್ನು ನಿರ್ಮೂಲನಮಾಡಬೇಕು ಎನ್ನುವುದು ಮುಖ್ಯವಾದ ಉದ್ದೇಶ ಭಿಕ್ಷಾಟನೆಯನ್ನು ನಿರ್ಮೂಲ ಮಾಡುವದಕ್ಕೆ ದೇಶದಲ್ಲಿ ಇಂದು ಮೂರು ತರಹದ ವ್ಯವಸ್ಥೆ ಇದೆ ಒಂದು ಭಿಕ್ಷುಕರನ್ನು ಹಿಡಿಯುವ ಇಲಾಖೆಯವರು ಮತ್ತು ಇವರಿಗೆ ಸಹಾಯವಾಗಿರತಕ್ಕ ಪೋಲೀಸರು ಮತ್ತು ಇವರು ಹಿಡಿದಿರುವುದು ಸರಿಯೋ ಇಲ್ಲವೇ ಎಂದು ತೀರ್ಮಾನ ಕೊಡಲು ಒಂದು ನ್ಯಾಯಾಂಗ ಇದೆ. ಇವು ಮೂರು ಸಾಮರಸ್ಯವಾಗಿರುವಂತೆ ಒಂದು ಕಾನೂನು ಇರಬೇಕು. ಅನೇಕ ಕಡೆಗಳಲ್ಲಿ ಭಿಕ್ಷುಕರನ್ನು ಹಿಡಿದಿದ್ದರೂ ಅವರನ್ನು ಬಿಟ್ಟು ಬಿಡುತ್ತಾರೆ. ಇದಕ್ಕೆ ಕಾರಣ ಪೋಲೀಸರದೂ ಇದೆ ಕೆಲವರು ಇವರಿಂದ ಕಾಸನ್ನೂ ವಸೂಲು ಮಾಡಿಕೊಂಡು ಅವರನ್ನೂ ಕಂಡರೂ ಕಾಣದಂತೆ ಇರುತ್ತಾರೆ, ಇದು ಗಮನಿಸಬೇಕಾದ ವಿಚಾರ. ಭಗ್ಗರ್ ರಿಲೀಫ್ ಕೇಂದ್ರಗಳು ಒಂದು ಅಲ್ಲಲ್ಲಿ ಸರಕಾರದವರು ಮಾಡಿದ್ದಾರೆ. ಅನೇಕ ಕಡೆಗಳಲ್ಲಿ ಇದರಲ್ಲಿ ಕುಷ್ಟ ರೋಗದಿಂದ ನರಳುವವರೂ ಇರುತ್ತಾರೆ. ಇನ್ನು ಕೆಲವು ರೀತಿಯ ಅಂಗವಿಕಲರು ಹಾಗೂ ಅಂಟು ರೋಗಿಗಳು ಇರುತ್ತಾರೆ. ಕಾನೂನು ಪ್ರಕಾರ ಭಿಕ್ಷುಕರನ್ನು ಹಿಡಿಯಬೇಕೆಂದು ಇದ್ದರೂ ಇದನ್ನು ಹಿಡಿಯುವ ಪೋಲೀಸರ ವರ್ತನೆ ಸರಿಯಾಗಿರುವುದಿಲ್ಲ. Whether it is a leprosy asylum or it is a Beggar R-lief Centre ಅದರಲ್ಲಿರುವ ಕೆಲವು ಜನಗು ದೃಡಕಾಯರು ಇರುತ್ತಾರೆ. ಇವರು ಬೇರೆ ವೃತ್ತಿ ಮಾಡಲು ಅನುಕೂಲವಿದ್ದರೂ ಮಾಡದೆ ಸೋಮಾರಿಗಳಾಗಿ ಭಿಕ್ಷೆ ಮಾಡುವುದನ್ನು ಕಲಿತಿರುತ್ತಾರೆ ಇಂತಹವರನ್ನೆಲ್ಲಾ ರಿಲೀಫ್ ಕೇಂದ್ರಗಳಲ್ಲಿ ಸೇರಿಸಿದಾಗ ಅವರಿಗೆ ಬೇರೆ ವೃತ್ತಿಯ ಶಿಕ್ಷಣವನ್ನು ಕೊಟ್ಟು ಆ ನಂತರ ವಾಪಸು ಕಳುಹಿಸಬಹುದು ಕೆಲವು ಭಿಕ್ಷುಕರು ರಿಲೀಫ್ ಕೇಂದ್ರಗಳಿಂದ ವಾಪಸ್ಸು ಬಂದರೂ ಕೂಡ ಮತ್ತೆ ಭಿಕ್ಷೆ ಬೇಡುತ್ತಾ ಇರುತ್ತಾರೆ. ಇವರನ್ನೂ ಪೋಲೀಸರು ಹಿಡಿಯಲು ಹೋಗುವುದಿಲ್ಲ ಇವರಿಗೆ ಪೋಲೀಸರ ಸಹಕಾರವೂ ಇದೆ ಎನ್ನುವುದು ನಮ್ಮ ಗಮನಕ್ಕೆ ಬಂದಿದೆ, ಇದನ್ನು ತೀರ್ಮಾನ ಮಾಡುವ ನ್ಯಾಯಾಧೀಶರು ಕೂಡ ದೃಡಕಾಯರಾಗಿರುವ ಭಿಕ್ಷುಕರ ಬಗ್ಗೆ ಸರಿಯಾಗಿ ಶಿಕ್ಷಣ ಕೊಡಬಹುದು ಎಂದು ತೀರ್ಮಾನ ಕೊಡುತ್ತಾರೆ ಆದರೆ ಆದರಂತೆ ಅವರಿಗೆ ಶಿಕ್ಷಣದ ಸೌಕರ್ಯ ಸಿಗುತ್ತಿಲ್ಲಾ. ಸರಕಾರದವರೇನೋ ರಿಲೀಫ್ ಸೆಂಟರುಗಳನ್ನು ಮಾಡಿ ಅಲ್ಲಲ್ಲಿ ಆವರ ವ್ಯಾನುಗಳ ಮೂಲಕ ಭಿಕ್ಷೆ ಮಾಡುವಂತಹ ಜನರನ್ನು ಹಿಡಿದು ರಿಲೀಫ್ ಕೇಂದ್ರಗಳಿಗೂ ತರುತ್ತಾರೆ. ಇದರಲ್ಲಿ ಎರಡು ವಿಧವಾದ ಜನರು ಇರುತ್ತಾರೆ. ಕೆಲವರು ನ್ಯಾಯವಾಗಿ ಬೀದಿಯಲ್ಲಿ ಭಿಕ್ಷೆ ಬೇಡುತ್ತಾರೆ. ಇನ್ನು ಕೆಲವು ಕಡೆ ಮಕ್ಕಳನ್ನು ಅವರ ತಂದೆ ತಾಯಿಗಳು ಎಲ್ಲೋ ಇದ್ದು ಭಿಕ್ಷೆ ಬೇಡಲು ಬೀದಿಗೆ ಬಿಡುತ್ತಾರೆ, ಹೇಗಾದರೂ ಅವರಿಗೆ ಹೊಟ್ಟೆಗೆ ಹಾಕುವ ಹೊಣೆ ತಪ್ಪಿದರೆ ಸಾಕೆಂದು ಹೀಗೆ ಮಾಡುವವರೂ ಇದ್ದಾರೆ, ಇಂತಹ ವಿವಿಧ ಚಿತ್ರಗಳು ನಮ್ಮ ಮುಂದೆ ಇವೆ. ಇವೆಲ್ಲಾ ಸಮಾಜದ ಪೀಡೆಗಳು. ಇದನ್ನು ತೊಲಗಿಸಬೇಕೆಂದು ಸರಕಾರ ಇಲ್ಲಿ ಒಂದು ಕಾನೂನು ತಂದಿದೆ. ಇದರಲ್ಲಿ ನಾಲ್ಕು ಭಾಗದಿಂದ ಬಂದಿರುವ ಕಾನೂನುಗಳು ಇವೆ ಒಂದೊಂದು ಕಾನೂನು ಒಂದೊಂದು ಕಡೆ ಒಂದೊಂದು ರೀತಿ ಇದ್ದುದರಿಂದ ಇವನ್ನೆಲ್ಲಾ ಕ್ರೋಡೀಕರಿಸಿ ಏಕರೂಪವಾದ ಒಂದೇ ತರಹದ ಕಾನೂನನ್ನು ಮಾಡಬೇಕು ಎನ್ನುವ ಆಸೆಯಿಂದ ಇಲ್ಲಿ ಒಂದು ಕಾನೂನನ್ನು ನಮ್ಮ ಸರಕಾರ ಈಗ ತಂದಿದೆ. ಇಂತಹ ಕಾನೂನು ತಂದಿರುವುದನೋ ಸಮಂಜಸವಾಗಿದೆ ಎನ್ನುವುದು ಇದರಲ್ಲಿ ಉದ್ದೇಶ ನೋಡಿದರೆ ಗೊತ್ತಾಗುತ್ತದೆ. ಇದನ್ನು ಯಾರು ಅಲ್ಲಗಳೆಯುವಂತಿಲ್ಲ. ಆದರೆ ಇದನ್ನು ಮಾಡುವುದು ಬಹಳ ಕಷ್ಟ. ಇದು ಹೇಗಿದೆ ಎಂದರೆ ಗುಡುಗು ಸಿಡಿಲು ಬಂದಾಗ ಅದಕ್ಕೆ ಸ್ಟೇ ಆರ್ಡರು ತಂದರೆ ಎಷ್ಟು ಫಲವಾಗುತ್ತೋ ಅಷ್ಟೇ ಫಲ ಈಗ ತಂದಿರುವ ಕಾನೂನಿನಿಂದ ಆಗುತ್ತದೆ. ನಾವು ಈಚೆಗೆ ದೆಹಲಿಯಲ್ಲಿ

(ಶ್ರೀ ಕೆ. ಪ್ರಭಾಕರ್)

ಹೋಗಿದ್ದಾಗ ನೋಡಿದೆವು. ಒಂದು ಕಡೆ ಹೋಟಲಿನಲ್ಲಿ ತಿಂಡಿ ತೆಗೆದುಕೊಂಡು ತಿನ್ನೋಣ ಎಂದು ಕೂತರೆ ನಮ್ಮ ಮುಂದೆ ಒಂದಲ್ಲ ನಾನಾ ರೀತಿಯ ಕೈಗಳು ಬಿಕ್ಷೆಗಾಗಿ ಒಡ್ಡಿ ನಿಂತದ್ದನ್ನು ನಾವು ನೋಡಿದೆವು. ಇದನ್ನು ಕಾನೂನುಬದ್ಧವಾಗಿ ನಿರ್ಮೂಲ ಮಾಡಲು ನಿರ್ದಾಕ್ಷಿಣ್ಯವಾಗಿ ಸಂಬಂಧಪಟ್ಟ ಅಧಿಕಾರಿಗಳು ಕೆಲಸ ಮಾಡುವುದು ಬಹಳ ಕಷ್ಟವಾಗುತ್ತದೆ ಇದಕ್ಕಾಗಿ ನಾನು ಇಲ್ಲಿ ಮೇಲೆ ಹೇಳಿದ ಕೆಲವು ಉದಾಹರಣೆಗಳನ್ನು ಮಾತ್ರ ಕೊಟ್ಟೆ. ನಮ್ಮ ಸಮಾಜದಲ್ಲಿ ಕೆಲದರ ಅಭಿಪ್ರಾಯ ದಾನ ಮಾಡಬೇಕು ಎಂದು ಇರುತ್ತದೆ. ಯಾತ್ರೆ ಮಾಡಲು ಹೋಗುತ್ತಾರೆ. ದೇವರ ದರ್ಶನಮಾಡಿ ಯಾತ್ರಾ ಸ್ಥಳದಲ್ಲಿ ಹೋಗಿ ದಾನಮಾಡಿ ಬಂದರೆ ನಮಗೆ ಪುಣ್ಯ ಸಿಗುತ್ತದೆ ಎಂದು ದಾನ ಮಾಡಬೇಕು ಎಂದು ಕೆಲವು ಕಡೆ ದಾನ ಮಾಡುತ್ತಾರೆ, ಇದನ್ನು ನಾನಾ ದೇಶಗಳನ್ನು ಸುತ್ತಿ ಬಂದವರಿಂದ ಕೇಳಿ ತಿಳಿದುಕೊಂಡಿದ್ದೇವೆ ಇದರಲ್ಲಿ ಒಂದು ರೀತಿಯಾದ ಧಾರ್ಮಿಕ ನಂಬಿಕೆಯೂ ಬಂದಿದೆ. ದಾನ ಮಾಡಬೇಕು ಆದರೆ ದಾನ ಮಾಡುವುದಿಲ್ಲ ಎನ್ನುವುದಕ್ಕೆ ಬಸವಣ್ಣನವರು ಒಂದು ಕಡೆ ಈ ರೀತಿ ಹೇಳುತ್ತಾರೆ

'ಉಣ್ಣುವ ಜಂಗಮ ಬಂದರೆ ಇಲ್ಲವೆಂಬರಯ್ಯ
ಉಣದ ಲಿಂಗಕ್ಕೆ ಬೋನವ ಹಿಡಿ ಎಂಬರಯ್ಯ' ಎಂದು

3-00 P.M.

ಜಂಗಮರಿಗೆ ಮನೆ ಇಲ್ಲ, ಸಂಸಾರವಿಲ್ಲ. ಇವರು ತತ್ವ ಪ್ರಚಾರ ಮಾಡುವಂಥವರು ಇವರನ್ನು ದೇಶ ಸಾಕಬೇಕು ಎಂದು ಆಗಿನ ಕಾಲವೃತ್ತಿ ನಿಯಮ ಮಾಡಿದ್ದರು. ಅದರಲ್ಲಿ ಒಂದು ಉದ್ದೇಶವಿದೆ. ಆದರೆ ಈಗಿನ ಕಾಲದಲ್ಲಿ ತಂದೆ ತಾಯಿ ಮಕ್ಕಳು ಎಲ್ಲ ಸೇರಿಕೊಂಡು ಭಿಕ್ಷಾಟನೆಯಿಂದ ಜೀವನಮಾಡುವ ಪರಿಸ್ಥಿತಿ ಬಂದಿದೆ. ಮೊಣಕಾಲನ್ನು ಬ್ಲೇಡಿನಿಂದ ಕೊಯ್ದುಕೊಂಡು ಅಥವ ಹುಚ್ಚೆಳ್ಳೆಣ್ಣೆಯಲ್ಲಿ ಕುಂಕುಮವನ್ನು ಕಲೆಸಿ ಕಾಲಿಗೆ ಹಚಿಕೊಂಡು ಕುಂಟುತ್ತಾ ಭಿಕ್ಷೆಬೇಡಿ ಜೀವನ ಮಾಡುವ ಮಟ್ಟಕ್ಕೆ ಸಮಾಜ ಬಂದಿದೆ. ಅವನು ಇರುವ ಪರಿಸ್ಥಿತಿಯನ್ನು ನೋಡಿ ಒಂದು ಕಾಸು ಕೊಡೋಣ ಎನ್ನುವ ಭಾವನೆ ಜನರಿಗೆ ಬರುತ್ತದೆ. ದಾಸಯ್ಯ ಜಂಗಮ ಇವರು ಹವ್ಯಕವ್ಯ ಪುರುಡು ಮುಟ್ಟು ಇವುಗಳು ಬಂದಾಗ ಶುದ್ಧಿ ಮಾಡುವುದಕ್ಕೆ ಪೌರೋಹಿತ್ಯ ಮಾಡುವವರು ಇದ್ದ ಹಾಗೆ ಇರುತ್ತಾರೆ. ಪೋಲೀಸಿನವರು ಜೂಳಿಗ ತಂಬೂರಿ ಇವುಗಳನ್ನು ಕಿತ್ತು ಇಟ್ಟು ಕೊಂಡಿದ್ದು ದಾಸಯ್ಯ ಜಂಗಮ ಎಂದು ಹೇಳಿಕೊಂಡರೆ ಬಿಡುವುದಕ್ಕೆ ಅವಕಾಶವಿದ್ದು ಇನ್ನು ಮುಂದೆ ಕೆಲವರಿಗೆ ಆ ವೃತ್ತಿ ಮಾಡುವುದಕ್ಕೆ ಅವಕಾಶ ಕೊಡಬಹುದು ಎಂದು ಇದೆ ಇದರಲ್ಲಿ ಕೂಡ ಕಾಸನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿರುತ್ತದೆ. ಆದುದರಿಂದ ಸರ್ಕಾರದವರು ಈ ಬಗ್ಗೆ ಯೋಚನೆಮಾಡಬೇಕು.

ಬೆಗ್ಗರಿ ಆಕ್ಟ್ ಪ್ರಕಾರ ಜುವೆನೈಲ್ ಬೆಗ್ಗರ್ಸ್ ಕಾಲೋನಿಯಲ್ಲಿಟ್ಟು ಅವರಿಗೆ ಪಾಠ ಕಲಿಸಿಕೊಡುವುದು ಯಾವುದಾದರೂ ಒಂದು ವೃತ್ತಿಯನ್ನು ಕಲಿಸಿಕೊಡುವುದು ಕೈಗಾರಿಕೆಯಲ್ಲಿ ತರಬೇತಿ ಕೊಡುವುದು ಇಂಥವನ್ನು ಸಿಸ್ಟಮ್ಯಾಟಿಕ್ ಆಗಿ ಪಾಲಿಸಬೇಕು. ಬೆಂಗಳೂರಿನ ಹತ್ತಿರ ಒಂದು ಬಿಕ್ಷುಕರ ಕಾಲೋನಿ ಇದೆ. ಅಲ್ಲಿ ಒಂದು ಕೆರೆಯನ್ನು ಕಟ್ಟಿಸಿದ್ದಾರೆ. ತೋಟ ಮಾಡುವುದು, ಕೈಗಾರಿಕೆ, ವೀವಿಂಗ್, ಪೌಲ್ಟ್ರಿ ಇವೆಲ್ಲ ಇತ್ತು. ಈಚೆಗೆ ಪೌಲ್ಟ್ರಿ ತೆಗೆದುಬಿಟ್ಟಿದ್ದಾರೆಂದು ಕೇಳಿದ್ದೇನೆ.

ಶ್ರೀ ಟಿ. ಆರ್ ಶಾಮಣ್ಣ.—ಪೌಲ್ಟ್ರಿಯನ್ನು ಪುನಃ ಪ್ರಾರಂಭ ಮಾಡಬೇಕೆಂದು ತೀರ್ಮಾನಮಾಡಿದೆ.

ಶ್ರೀ ಕೆ. ಪ್ರಭಾಕರ್.—ಭಿಕ್ಷುರ ಮಕ್ಕಳಿಗೆ ಕೈಗಾರಿಕೆ ಅಥವಾ ಯಾವುದಾದರೂ ಒಂದು ವೃತ್ತಿಯಲ್ಲಿ ತರಬೇತಿ ಕೊಡುವ ವ್ಯವಸ್ಥೆ ಮಾಡಬೇಕು. ಒಂದು ಸಲ ಭಿಕ್ಷುಕರ ಕಾಲೋನಿಯಿಂದ ತಪ್ಪಿಸಿಕೊಂಡು ಮತ್ತೆ ಒಳಕ್ಕೆ ಹಾಕದಹಾಗೆ ಅವನು ಜೀವನ ಮಾಡುವುದಕ್ಕೆ ಅನುಕೂಲವಾಗುವಂತೆ ಒಂದು ವೃತ್ತಿಯನ್ನು ಕಲಿಸುವ ಹಾಗೆ ಮಾಡಬೇಕು. ಭಿಕ್ಷುಕರ ಕಾಲೋನಿಗೆ ಬಂದಂಥವನ ವಯಸ್ಸೆಷ್ಟು ಅವನು ಎಷ್ಟು ಕಾಲ ಅಲ್ಲೇರುತ್ತಾನೆ ಅಲ್ಲಿಂದ ತಪ್ಪಿಸಿಕೊಂಡು ಹೋದರೆ ತನ್ನ ಜೀವನವನ್ನು ಅವನು ಮಾಡಿಕೊಳ್ಳುತ್ತಾನೆಯೆ ಎನ್ನುವುದನ್ನು ನೋಡಬೇಕು ಹಣ ಖರ್ಚಾಗುತ್ತದೆ ಅನ್ನ ಹಾಕುತ್ತಾರೆ ಅಲ್ಲಿರುವ ಜನಗಳಿಗೆ ಎಲ್ಲ ಸೌಕರ್ಯಗಳನ್ನು ಕೊಟ್ಟರೆ ಭಿಕ್ಷುಕರ ಕೇಂದ್ರಗಳಲ್ಲಿಯೇ ಇರೋಣ ಎಂದು ಜನ ಭಿಕ್ಷುಕ ವೃತ್ತಿಯನ್ನು ಹಿಡಿದಾರು ಎಂದೋ ಏನೋ ಅದನ್ನು ಎರಡನೇ ಸೆಂಟ್ರಲ್ ಜೈಲ್‌ನಂತೆ ಮಾಡಿದ್ದಾರೆ. ಅಲ್ಲಿರುವವರಿಗೆ ಕೆಲವು ಸೌಕರ್ಯಗಳನ್ನು ಕೊಡುವುದು ಕಷ್ಟವಾಗುತ್ತದೆ. ಭಿಕ್ಷಾಟನೆ ಶಿಕ್ಷಾರ್ಹ ಎಂಬುದಾಗಿ ಮಾಡಬೇಕು ಮಾಡುವುದು ತಪ್ಪು ಎನ್ನುವ ರೀತಿಯಲ್ಲಿ ಪ್ರಚಾರಮಾಡುವುದಕ್ಕೆ ವ್ಯವಸ್ಥೆಯನ್ನೂ ಮಾಡ ಮತ್ತು ಭಿಕ್ಷಾಟನೆಯಿಂದ ಜೀವನ ಮಾಡುವುದು ಸೋಷಿಯಲ್ ಕ್ರೈಂ ಎಂದೂ ಬದ್ದಿಲ್ಲ ಭಿಕ್ಷಾಟನೆ

ಬೇಕು. ಶಾಲೆಗಳಲ್ಲಿನ ಪಠ್ಯ ಪುಸ್ತಕಗಳಲ್ಲಿ ಭಿಕ್ಷಾಟನೆ ಒಂದು ಅಪರಾಧ ಎನ್ನುವ ಬಗ್ಗೆ ಎಲ್ಲೂ ಬರೆದಿಲ್ಲ. ಅದೇ ರೀತಿಯಾಗಿ ದಾನ ಮಾಡುವುದು ತಪ್ಪು ಎನ್ನುವ ವಾತಾವರಣ ಬರುವ ರೀತಿಯಲ್ಲಿ ವ್ಯವಸ್ಥೆ ಮಾಡುವುದಲ್ಲದೆ ಭಿಕ್ಷೆ ನೀಡುವುದು ಸಹ ಸರಿಯಲ್ಲ ಎನ್ನುವ ಭಾವನೆ ಜನರಲ್ಲಿ ಮೂಡುವಂತೆ ಮಾಡಬೇಕು. ಭಿಕ್ಷುಕರ ಕೇಂದ್ರಗಳಲ್ಲಿನ ಚಿಕ್ಕ ಚಿಕ್ಕ ಮಕ್ಕಳಿಗೆ ಓದು ಬರಹವನ್ನು ಕಲಿಸುವುದು, ಏಬಲ್ ಬಾಡಿಡ್ ಪೀಪಲ್ ಇದ್ದವರಿಗೆ ಕೈ ತುಂಬ ಕೆಲಸ, ಹೊಟ್ಟೆ ತುಂಬ ಅನ್ನ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು ಈ ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡು ವ್ಯವಸ್ಥಿತವಾದ ರೀತಿಯಲ್ಲಿ ಮಾಡಬೇಕು. ಎಂದು ಸಲಹೆಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ) ಸನ್ಮಾನ್ಯ ಸಭಾಪತಿಗಳೇ ಭಿಕ್ಷಾಟನೆಯ ಬಗ್ಗೆ ಕೆಲವರಿಗೆ ಸ್ನೇಹಿತರು ಮಾತನಾಡಿದ್ದಾರೆ. ಅದನ್ನು ಕೇಳಿದ ನಂತರ ಮೂಲಭೂತವಾಗಿ ಅವರು ಈ ಭಿಕ್ಷಾಟನೆ ನಮಗೆ ಸಮಾಜದಲ್ಲಿ ನಮ್ಮ ದೇಶದಲ್ಲಿ ಯಾವ ರೀತಿ ತಡೆಯುಹಾಕಬೇಕು ಎನ್ನುವುದರ ಬಗ್ಗೆ ಮಾತನಾಡಿದ ಹಾಗೆ ಕಾಣಲಿಲ್ಲ. ಇದು ಅದು ಅನೂಚಾನವಾಗಿ ಬಹಳ ದಿವಸಗಳಿಂದ ಬಂದದ್ದು ಏನು ಮಾಡುವುದಕ್ಕಾಗುತ್ತದೆ ಎನ್ನುವ ಧಾಟಿಯಲ್ಲಿ ಒಬ್ಬರು ಮಾತನಾಡಿದರು. ಇನ್ನೊಬ್ಬರು ಇದು ನಮ್ಮ ದೇಶದಲ್ಲಿ ಒಂದು ವೃತ್ತಿಯನ್ನು ತಪ್ಪಿಸುವುದು ಹೇಗೆ ಎಂಬುದನ್ನು ಯೋಚನೆ ಮಾಡಬೇಕೆಂದು ಹೇಳಿದರು. ನಾನೇನಾದರೂ ಇದನ್ನು ಬೇರೆ ರೀತಿಯಲ್ಲಿ ನೋಡುತ್ತೇನೆ. ಒಂದೇ ಸಮಾಜದ ಚರಿತ್ರೆಯನ್ನು ನೋಡಿದರೆ ನನಗೆ ತಿಳಿದ ಮಟ್ಟಿಗೆ ಭಿಕ್ಷಾಟನೆ ಹಿಂದಿನ ಸಮಾಜದಲ್ಲಿ ಆದಿಮಾನವನ ಕಾಲದಲ್ಲಿ ಭಿಕ್ಷಾಟನೆ ಇರಲಿಲ್ಲ. ಮಾನ್ಯ ಮಂತ್ರಿಗಳು ಎಕನಾಮಿಕ್ಸ್ ಪಾಲಿಟಿಕ್ಸ್ ಮತ್ತು ಹಿಸ್ಟರಿ ವ್ಯಾಸಂಗ ಮಾಡಿರುವವರು. ಆದಿ ಮಾನವನ ಕಾಲದಲ್ಲಿ ಪ್ರಿಮಿಟಿವ್ ಕಮ್ಯೂನಿಸ್ಟ್ ಸ್ಟೇಜ್ ಎಂದು ಹೇಳುತ್ತಾರೆ. ಆವಾಗ ಎಲ್ಲರೂ ಒಟ್ಟಾರೆ ಸೇರಿ ತಮಗೆ ಏನು ಬೇಕಾಗಿದೆಯೋ ಅದನ್ನು ತಾವೇ ಹೋಗಿ ಗಳಿಸಿಕೊಂಡು ಬಂದು ಎಲ್ಲರೂ ಒಟ್ಟಾರೆ ತಿನ್ನುತ್ತಿದ್ದರು ಯಾರೊಬ್ಬರೂ ಒಬ್ಬರನ್ನು ಇನ್ನೊಬ್ಬರ ಮೇಲೆ ಎತ್ತಿಕಟ್ಟಿ ಅಥವಾ ಒಬ್ಬ ಇನ್ನೊಬ್ಬನನ್ನು ಶೋಷಣೆಮಾಡಿ ತಾನೊಬ್ಬ ಮಾತ್ರ ಬದುಕಬೇಕು ಎನ್ನುವ ಅಭಿಪ್ರಾಯ ಪ್ರಿಮಿಟಿವ್ ಕಮ್ಯೂನಿಸ್ಟ್ ಸ್ಟೇಜಿನಲ್ಲಿ ಇರಲಿಲ್ಲ. ಇದು ನಮ್ಮ ದೇಶದಲ್ಲಿ ಕೂಡ ಇತ್ತು ಎನ್ನುವುದು ಗೊತ್ತಾಗುತ್ತದೆ. ಮನುಸ್ಮೃತಿ ಮತ್ತು ವೇದಗಳನ್ನು ಓದಿದರೆ ಈ ವಿಚಾರ ನಮಗೆ ಗೊತ್ತಾಗುತ್ತದೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಕೂಡ ಇದೇ ರೀತಿ ಪರಿಸ್ಥಿತಿ ಇತ್ತು ಎಂದು ತಿಳಿದು ಬರುತ್ತದೆ. ಒಂದು ಕಾಲದಲ್ಲಿ ಸಮಾಜದಲ್ಲಿ ಭಿಕ್ಷಾಟನೆಯ ಪರಿಸ್ಥಿತಿ ಇರಲಿಲ್ಲ ವರ್ಗಗಳು ಇರಲಿಲ್ಲ ಎನ್ನುವುದನ್ನು ನಾನು ಹೇಳುತ್ತೇನೆ. ಭಿಕ್ಷಾಟನೆ ಬಂದದ್ದು ಯಾವಾಗ ಎಂದರೆ ಅದಗೂ ಕೂಡ ಚರಿತ್ರೆಯಲ್ಲಿ ಬರುತ್ತದೆ. ಯಾವಾಗ ವರ್ಗಗಳು ಪ್ರಾರಂಭವಾದವೋ ಆವಾಗ ಒಂದು ಮೂಲ ಇನ್ನೊಂದು ವರ್ಗವನ್ನು ಶೋಷಣೆ ಮಾಡುವುದಕ್ಕೆ ಶುರು ಮಾಡಿದ್ದರಿಂದ ಆವಾಗ ಭಿಕ್ಷಾಟನೆ ಶುರೂ ಆಯಿತು ಎಂದು ಹೇಳುತ್ತಾರೆ. ಪ್ರಪಂಚದಲ್ಲಿ ತಮಗೆಲ್ಲಾ ಗೊತ್ತಿರುವಹಾಗೆ ಸಮಾಜದಲ್ಲಿ ಎಲ್ಲಾಕಡೆಯೂ ಸಹ ನಾಲ್ಕೈದು ಸ್ಟೇಜಸ್ ಆಗಿವೆ. ಮೊದಲನೆಯದು ಪ್ರಿಮಿಟಿವ್ ಕಮ್ಯೂನಿಸ್ಟ್ ಸ್ಟೇಜ್. ನಂತರವಾದದ್ದು ಒಂದು ಗುಂಪು ಇನ್ನೊಂದು ಗುಂಪಿನಮೇಲೆ ಹೋಗಿ ಬಿದ್ದು ಜಗಳವಾಡಿ ಸೋತವರನ್ನು ಗುಲಾಮರಾಗಿ ಮಾಡಿಕೊಂಡಿದ್ದು. ತಮಗೆಲ್ಲ ಗೊತ್ತಿರುವಹಾಗೆ ಇದು ಗುಲಾಮಗಿರಿ ಪದ್ಧತಿ. ಅಲ್ಲಿಂದಲೇ ಭಿಕ್ಷಾಟನೆ ಶುರುವಾಯಿತು. ಗ್ರೀಸ್ ದೇಶದ ಚರಿತ್ರೆಯನ್ನು ತೆಗೆದುಕೊಂಡರೂ ನಮ್ಮ ದೇಶದ ಚರಿತ್ರೆಯನ್ನು ತೆಗೆದುಕೊಂಡರೂ ಕೂಡ ಇದು ಗೊತ್ತಾಗುತ್ತದೆ. ನಂತರ ಬಂದದ್ದು ಪಾಳೆಗಾರಿ ಪದ್ಧತಿ. ಅಲ್ಲಿ ಕೂಡ ಇದೇ ರೀತಿ ಇತ್ತು. ಮೂಲಭೂತವಾಗಿ ಭಿಕ್ಷಾಟನೆ ಇರುವುದಕ್ಕೆ ಕಾರಣವೇನೆಂದರೆ ಬಂಡವಾಳ ಶಾಹಿ ಸಮಾಜ ಅದಕ್ಕೆ ಮೂಲಭೂತವಾದ ಕಾರಣ ಎನ್ನುವುದನ್ನು ಯಾರೂ ಮರೆಯುವ ಹಾಗೆ ಇಲ್ಲ. ಎಲ್ಲಿಯವರೆಗೆ ಬಂಡವಾಳಶಾಹಿ ಸಮಾಜವಿರುತ್ತದೆಯೋ ಅಲ್ಲಿಯವರೆವಿಗೂ ಭಿಕ್ಷಾಟನೆ ಇದ್ದೇ ಇದ್ದೇ ಇರುತ್ತದೆ. ಈ ಭಿಕ್ಷಾಟನೆ ವೇಶ್ಯಾವೃತ್ತಿ ಮತ್ತು ಕುಡಿತ ಎಂದೆ ಇವನ್ನು ಸಮಾಜದ ಚೌಕಟ್ಟಿನೊಳಗಿನಿಂದ ತೆಗೆದು ಹಾಕಿ ಬೇರೆ ರೀತಿಯ ವ್ಯವಸ್ಥೆ ತೆಗೆದುಕೊಂಡು ಬರುತ್ತೇವೆ ಎಂದರೆ ನನ್ನ ಅಭಿಪ್ರಾಯದಲ್ಲಿ ಅದು ಸಾಧ್ಯವಿಲ್ಲದ ಮಾತು. ಸಮತಾವಾದ ಸಮಾಜವ್ಯವಸ್ಥೆ ಇದೆಯೋ ಅಲ್ಲಿ ಭಿಕ್ಷಾಟನೆ ನಡೆಯುವುದಿಲ್ಲ. ಭಿಕ್ಷಾಟನೆ ಬರುವುದಕ್ಕೆ ಮೂಲ ಭೂತ ಆಧಾರ ಬಂಡವಾಳ ಶಾಹಿಗಳು ತಾವು ಹೆಚ್ಚು ಹೆಚ್ಚು ಗಳಿಸಬೇಕು ಬೇರೆಯವರು ಇದ್ದರೆ ಏನು ಸತ್ತರೇನು ಈ ಅಭಿಪ್ರಾಯ ಅವರಲ್ಲಿದ್ದು, ತಾನು ಶ್ರೀಮಂತನಾಗಬೇಕು ಸುಖೀ ಆಗಿರಬೇಕು ತಾನು ಬಾಳಬೇಕು ಇತರರನ್ನು ಶೋಷಣೆ ಮಾಡಬೇಕು ಅಂತಹ ಸಮಾಜ ಇರಬೇಕು ಎಂದು ಅನ್ನುವಂತಹ ಮನೋಭಾವನೆ ಇರುವವರೆಗೂ ಇದನ್ನು ತಡೆದು ಹಾಕಲು ಸಾಧ್ಯವಿಲ್ಲ. ಶೋಷಣೆ ಮಾಡುವ ಸಮಾಜ ಇಟ್ಟುಕೊಳ್ಳಬೇಕಾದರೆ, ನಿರುದ್ಯೋಗ ಬಡತನ, ಭಿಕ್ಷಾಟನೆ ವೇಶ್ಯಾವೃತ್ತಿ ಕುಡಿತ ಇವು ಈ ಬಂಡವಾಳಶಾಹಿ ಸಮಾಜದ ಚೌಕಟ್ಟಿನಲ್ಲಿ ಇರುವ ವ್ಯವಸ್ಥೆ ಮತ್ತು ಅದರ ಮುಖ್ಯ ಫೀಚರ್ ಎಂದರೆ ತಪ್ಪಾಗಲಾರದು. ಎಲ್ಲಿಯವರೆಗೆ ಬಂಡವಾಳಶಾಹಿ ಸಮಾಜ ಇರುತ್ತದೆ ಅಲ್ಲಿಯವರೆಗೆ ಇವು ಇದ್ದೇ ಇರುತ್ತವೆ. ಸಮತಾವಾದ ಸಮಾಜದಲ್ಲಿ ಭಿಕ್ಷಾಟನೆಗೆ ಬಂದರೆ ಸುಟ್ಟು ಹಾಕುತ್ತಾರೆ ಎಂದು ಹೇಳುವುದು ಸುಳ್ಳು. ಸುಟ್ಟು ಹಾಕುವುದು ಇಲ್ಲ. ಅವರಲ್ಲಿರುವ ಭಿಕ್ಷಾಟನೆ ಮಾಡುವಂಥ ಅಂಶವನ್ನೇ ಕಿತ್ತು

(ಶ್ರೀ ಎಂ. ಎಸ್. ಕೃಷ್ಣನ್)

ಹಾಕಿದ ಮೇಲೆ ಬಿಕ್ಷಾಟನೆ ಯಾರು ಮಾಡುತ್ತಾರೆ? ಯಾರು ಇವತ್ತಿನದಿವಸ ಉತ್ಪಾದನೆ ಮಾಡಬೇಕಾಗಿದೆ ಅವರ ಕೈಯ್ಯಲ್ಲಿ ಉತ್ಪಾದನೆ ಮಾಡತಕ್ಕ ಯಂತ್ರಗಳು ಇರುತ್ತವೆ. ಈಗ ವರ್ಗ ಸಂಬಂಧದಲ್ಲಾ ಬದಲಾವಣೆಯಾಗಿದೆ.

. ಇನ್ನೊಂದು ಪ್ರಶ್ನೆ ಏನೆಂದರೆ ಕೆಲವರಿಗೆ ಭಿಕ್ಷಾಟನೆ ಮಾಡುವುದು ಒಂದು ತರಹ ಪರಂಪರಾನು ಗತವಾಗಿ ಬಂದಿದೆ. ಬೇರೆ ಕೆಲಸ ಮಾಡುವುದಕ್ಕೆ ಗೊತ್ತಿಲ್ಲ ಅಂಥವರಿಗೆ ಏನು ಮಾಡುವುದು? ಸಮಾಜವಾದ ಸಮಾಜದ ಹಾದಿಯಲ್ಲಿ ಅವರನ್ನು ತೆಗೆದುಕೊಂಡು ಹೋಗುವುದಕ್ಕೆ ಕಷ್ಟಪಡಬೇಕು ಈಗ ನಾವು ಸಮತವಾದ ಸಮಾಜದ ಆಸ್ತಿಭಾರ ಹಾಕಿದ್ದೇವೆ. ಆದರೆ ಆಸ್ತಿಭಾರ ಹಾಕಿದ ಆಧಾರದಮೇಲೆ ನಾವು ಹೋಗುತ್ತಾ ಇಲ್ಲ. ಆ ರೀತಿ ಶಾಸನ ತಯಾರು ಆಗಿಲ್ಲ. ಎರಡನೆ ಅಂಶ ಏನೆಂದರೆ ಅದು ಒಂದು ತಮ್ಮಾಷೆಯಾಗಿ ಕಾಣುತ್ತದೆ. ಕ್ಲಾಜ್ ೨ನಲ್ಲಿ ಬೆಗ್ಗರ್ಸ್ ಅಂತ ಹೇಳಿದರು. ಬೆಗ್ಗರ್ ಎ. ಬಿ. ಸಿ. ಡಿ. ಇ. ಎಂದು ಅಲ್ಲಿ ಹೇಳಿದ್ದಾರೆ. ಅವರು. ಆದರೆ ಪ್ರಾವಿಸೊ (೧),(೨),(೩) ಮತ್ತು (೪)ರಲ್ಲಿರುವವರು ಬೆಗ್ಗರ್ಸ್ ಅಲ್ಲ ಎಂದು ಹೇಳಿದ್ದಾರೆ. ಸರ್ಕಾರದ ಪರ್ಮಿಷನ್ ಪಡೆದಿರುವವರು ಬೆಗ್ಗರ್ ಅಲ್ಲ. ಸೆಕ್ಷನ್ (೨)ತೆಗೆದುಕೊಳ್ಳಿ, ಪ್ರಾವಿಜೋ "Provided that a person shall not be deemed to be a beggar. if he—

(i) is a religious mendicant licensed by the central Relief Committee to solicit alms in the prescribed manner"

ರಿಲೀಜಿಯಸ್ ಮೆಂಡಿಕೆಂಟ್ ಎಂದರೆ ಯಾರು? ಬೈರಾಗಿ ವೇಶವನ್ನು ಹಾಕಿ ಕೋವಿಬಟ್ಟೆ ಹಾಕಿಕೊಂಡು ಕಮಂಡಲ ಹಿಡಿದುಕೊಂಡು ರುದ್ರಾಕ್ಷಿಮಾಲೆ ಹಾಕಿಕೊಂಡು ಬಂದರೆ ಲೈಸನ್ಸ್ ಕೊಟ್ಟು ಬೆಗ್ಗರ್ ಎಂದು ಅವನನ್ನು ಕರೆಯುತ್ತೀರಿ. ರಾಮನ ಕಥೆ ಗೊತಿದೆ ರಾವಣ ಹೇಗೆ ಬಂದು ಸೀತೆಯನ್ನು ಹಿಡಿದುಕೊಂಡು ಹೋದ ಎಂಬುದು. ರಾವಣನಂಥ ಸನ್ಯಾಸಿಗಳು ಬೇಕಾದಷ್ಟು ಜನ ಇದ್ದಾರೆ ಅವರ ಬಗ್ಗೆ ಏನೂ ವ್ಯವಸ್ಥೆ ಇಲ್ಲವೋ? ಅವರ ಬಗ್ಗೆ ಏನು ಮಾಡುತ್ತೀರಿ? ಬಲಿ ಚಕ್ರವರ್ತಿ ಧರ್ಮಾತ್ಮ ಬಹಳ ಧರ್ವಿಷ್ಟ ವಾಮನ ಬಂದು ೩ಗೇಣು ಭೂಮಿ ಕೇಳಿದ ಅವನು ಒಂದು ತರಹ ಮೆಂಡಿಕೆಂಟ್. ವಾಮನಂಥ, ರಾವಣನಂಥ ಸನ್ಯಾಸಿಗಳು ಬೇಕಾದಷ್ಟು ಜನ ಸಮಾಜದಲ್ಲಿ ಇದ್ದಾರೆ ಅಂಥವರ ಬಗ್ಗೆ ಏನು ಮಾಡುವಿರಿ? ಇದೇ ರೀತಿಯಾಗಿ ಇಲ್ಲದೇ ಹೋದರೂ ಆ ರೀತಿಯಾಗಿ ಜನ ಇದ್ದಾರೆ ಮೋಸ ಮಾಡುವ ವೃತ್ತಿ ಇಟ್ಟುಕೊಂಡು ಜನಗಳಿಗೆ ಅನ್ಯಾಯ ಮಾಡುವ ಹವ್ಯಾಸದಲ್ಲಿ ಬಿದ್ದಿರುವವರು ಇದ್ದಾರೆ. ರಾಜಕೀಯ ಸನ್ಯಾಸಿಗಳು ಇದ್ದಾರೆ. ಆದರೆ ಅದು ಅವರ ಚೌಕಟ್ಟಿನಲ್ಲಿ ಬರುವುದಿಲ್ಲ ರಾಜಕೀಯ ಸನ್ಯಾಸಿಗಳು ಭಿಕ್ಷಾಟನೆಮಾಡುವ ಜನರ ಬಗ್ಗೆ ಬೇರೆ ಬಿಲ್ ತರುತ್ತೀರಿ ಎಂದು ಕಾಣುತ್ತದೆ. ಬೇರೆ ಅಡ್ಜೆಸ್ಟ್‌ಮೆಂಟ್‌ಮಾಡುವುವಕ್ಕೆ ಪ್ರಯತ್ನ ಪಡುವ ಪರಿಸ್ಥಿತಿ ಇದೆ.

ಭಿಕ್ಷುಕರನ್ನು ನೋಡಿದರೆ ಅಯ್ಯೋ ಎನ್ನಿಸುತ್ತದೆ. ರೈಲಿನಲ್ಲಿ ಹೋಗಬೇಕಾದರೆ ಊಟಮಾಡಬೇಕಾದರೆ ಅವರು ಬರುತ್ತಾರೆ ಏನಾದರೂ ಆತನಿಗೆ ಕೊಡಬೇಕು. ಬಸ್ಸಿನಲ್ಲಿ ಹೋಗುವಾಗ ಬರುತ್ತಾರೆ ೫ಪೈಸೆ ಕೊಡುತ್ತೀರಿ ಕನಿಕರ ತೋರಿಸುವುದಕ್ಕೋಸ್ಕರ ೫ ಪೈಸೆ ಹಾಕುತ್ತೀರಿ. ದರಿದ್ರ ಎದುರಿಗೆ ಬರುತ್ತಾನೆ ಎಂದು ಅನಿಸುತ್ತದೆ ಮಂತ್ರಿಗಳು ಈ ರೀತಿ ಯಾತಕ್ಕೆ ಬರಬೇಕು ಅವರನ್ನು ತೆಗೆದುಕೊಂಡು ಹೋಗಿ ರಿಲೀಫ್ ಸೆಂಟರಿನಲ್ಲಿ ಹಾಕಿ ಎಂದು ಅವರನ್ನು ಒಂದು ಚೌಕಟ್ಟಿನೊಳಗೆ ಹಾಕಿ ಅವರನ್ನು ಸರಿಪಡಿಸುವುದಕ್ಕೆ ಪ್ರಯತ್ನ ಪಡುತಿದ್ದಾರೆ. ಆದರೆ ಆ ಚೌಕಟ್ಟಿನೊಳಗೆ ಸರಿಪಡಿರಲು ಸಾಧ್ಯ ಎಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯ.

ಎರಡನೆಯ ಪ್ರಾವಿಜೊ "in the performance of any religious vow or obligation as sanctioned by a system or religion collects alms in a private or public place, without being a nuisance, or ;" ಎಂದು ಇದೆ. ಇದನ್ನು ಯಾರು ತೀರ್ಮಾನ ಮಾಡುವುದು ? ಯಾರೋ ಒಬ್ಬರು ಜಾಗದಲ್ಲಿ ಬಂದು ಭಿಕ್ಷೆ ಕೇಳಿದರೆ ನ್ಯೂಸೆನ್ಸ್ ಇಲ್ಲದೆ ಹೋದರೆ ಅವನಿಗೆ ಅವಕಾಶ ಮಾಡಬೇಕು ಎಂಬ ಅಭಿಪ್ರಾಯ ಬರುತ್ತದೆ.. ಯಾತಕ್ಕೆ ಈ ರೀತಿ ಅವಕಾಶ ಮಾಡಬೇಕು ನ್ಯೂಸೆನ್ಸ್ ಹೌದೋ ಇಲ್ಲವೋ ಎಂಬುದನ್ನು ಯಾರು ಕಂಡು ಹಿಡಿಯಬೇಕು ? ಪಬ್ಲಿಕ್‌ನಿಂದ ಅವರ ಮೇಲೆ ಕಂಪ್ಲೇಂಟ್ ಪಡೆದುಕೊಳ್ಳುತ್ತೀರಾ ? ವಿತ್ ಔಟ್ ಬೀಯಿಂಗ್ ನ್ಯೂಸೆನ್ಸ್ ಎಂದು ನೀವು ವೇಗ್‌ಆಗಿ ಹೇಳಿದ್ದೀರಿ. ಅದಕ್ಕಿಂತ ಸೆಕ್ಷನ್ ೨, (೪) ಪ್ರಾವಿಜೊನಲ್ಲಿ ನೋಡಬೇಕು. "Is a student collecting alms for the prosecution of his studies"

ಇದು ನನಗನ್ನಿಸುತ್ತದೆ, ಬಹಳ ಅಪಚಾರ ಮಾಡಿದಹಾಗೆ, ವಿದ್ಯಾರ್ಥಿ ಸಮುದಾಯಕ್ಕೆ ಅಪಚಾರ ಮಾಡಿದ ಹಾಗೆ. ಏನು ಆಗಿದೆ ಎಂದರೆ ವಿದ್ಯಾರ್ಥಿಗಳ ಹೆಸರಿನಲ್ಲಿ ಬೇಕಾದಷ್ಟು ಜನ ಬರುತ್ತಾರೆ, ವಿದ್ಯಾರ್ಥಿಗಳು ಬರುತ್ತಾರೆಂದು ಹೇಳುವುದಕ್ಕಾಗುವುದಿಲ್ಲ ಅನೇಕ ಸ್ಕೂಲ್‌ಗಳಿಂದ ಸಹಾಯ ಮಾಡಿ ಎಂದು ಬರುತ್ತಾರೆ. ನಮ್ಮ ಮನೆಗೂ ಕೆಲವು ದಿನಗಳ ಹಿಂದೆ ಜಯನಗರದಿಂದ ಇಬ್ಬರು ಬಂದಿದ್ದರು, ಜಯನಗರದ ವಿದ್ಯಾರ್ಥಿ ಸಂಘದ ಹೆಡ್ ಕಮಿಟಿ ಎಂದು ಹೇಳಿಕೊಂಡು, ಅವರೇ ಒಂದು ರಬ್ಬರ್ ಸ್ಟಾಂಪ್ ಮಾಡಿಕೊಂಡು, ಅದಕ್ಕೆ ಸೀಲ್ ಒತ್ತಿ, ಬ್ಯಾಡ್ಜ್ ಹಾಕಿಕೊಂಡು ಸಹಾಯ ಮಾಡಿ ಎಂದು ಬರುತ್ತಾರೆ ಅದೇ ಗುಂಪಿನವರು ಜಯನಗರಕ್ಕೆ ಹೋಗಿ ರಾಜಾಜಿನಗರ ವಿದ್ಯಾರ್ಥಿ ಫೆಡರೇಷನ್‌ಗೆ ಸಹಾಯ ಮಾಡಿ ಎಂದು ಹೇಳುತ್ತಾರೆ. ಈ ತರಹ ಪರಿಸ್ಥಿತಿ ಇರಬೇಕಾದರೆ, ಇಂಥ ವಿದ್ಯಾರ್ಥಿಗಳು (Collecting alms) ಎಂಬುದಲ್ಲಿ ಬರುತ್ತಾರೆ ಎಂದು ಹೇಳುತ್ತೇನೆ

ವಿದ್ಯಾರ್ಥಿಗಳು ಅಲ್ಲ ಎಂದು ಕಂಡುಹಿಡಿಯುವುದಕ್ಕೆ ಸರಿಯಾದ ಕ್ರಮ ತೆಗೆದುಕೊಂಡಿದ್ದೀರೋ ನನಗೆ ಗೊತ್ತಿಲ್ಲ. ಈ ಬಿಲ್ ನೋಡಿದರೆ ಫ್ರೀ ಫಾರ್ ಆಲ್ ಏನು ಬೇಕಾದರೂ ಮಾಡಿಕೊಂಡು ಹೋಗ ಬಹುದು ಎನ್ನುವ ಅಭಿಪ್ರಾಯ ಬರುತ್ತದೆ. ಈ ಬಿಲ್‌ನಲ್ಲಿ ಅರ್ಥಗರ್ಭಿತವಾದ ವಿಷಯಗಳು, ಮುಖ್ಯ ವಿಷಯಗಳು, ಗಹನವಾದ ವಿಷಯಗಳು ಭಿಕ್ಷಾಟನೆ ಕಿತ್ತುಹಾಕುವಂಥ ವಿಷಯಗಳು ಇವೆ ಎಂದು ನಾನು ಹೇಳುವುದಕ್ಕೆ ತಯಾರಿಲ್ಲ. ಆ ಚೌಕಟ್ಟಿನೊಳಗೆ ತಮಾಷೆಯಾದ ವಿಷಯ ಮಾತ್ರ ಬರೆದುಕೊಂಡಿರುವ ಹಾಗೆ ಇದೆಯೆಂದು ನನಗೆ ವೇದ್ಯವಾಗುತ್ತಿದೆ.

ಇನ್ನೊಂದು ಮುಖ್ಯ ವಿಷಯ. ಬೆಂಗಳೂರು ನಗರದಲ್ಲಿ ಭಿಕ್ಷುಕರನ್ನು ವ್ಯಾನ್‌ನಲ್ಲಿ ದಬದಬ ಕರೆದು ಕೊಂಡು ಹೋಗುತ್ತಾರೆ.

According to clause 3 "No person shall beg in the areas in which this Act is in force". Beggar means any person who "having no visible means of subsistence, wanders about or remains in any public place in such condition or manner as makes it likely that he exists by soliciting or receiving alms" ಎಂದು ಹೇಳಿದ್ದೀರಿ. ಇದು ಚಕ್ರಬಿಂಬ ಕೋಟೆ ತರಹ ಡೆಫನೇಷನ್ ಇದೆ. ನಿಮ್ಮ ಪಂಚವಾರ್ಷಿಕ ಯೋಜನೆಗಳು ಜಾಸ್ತಿಯಾಗುತ್ತಾ, ಜಾಸ್ತಿಯಾಗುತ್ತಾ ನಿರುದ್ಯೋಗ ಕೂಡ ಜಾಸ್ತಿಯಾಗುತ್ತಿದೆ ಈಗ ನಿರುದ್ಯೋಗ ಸಮಸ್ಯೆ ಬಗೆಹರಿಸಲು ಸಾಧ್ಯವಾಗಿಲ್ಲ. ಒಬ್ಬ ಮನುಷ್ಯ ನಿರುದ್ಯೋಗಿ ಪಬ್ಲಿಕ್ ಪ್ಲೇಸ್‌ನಲ್ಲಿ ಹರಕಲು ಷರ್ಟ್, ಹರಕಲು ಪ್ಯಾಂಟ್ ಹಾಕಿಕೊಂಡು ನಿಂತಿದ್ದರೆ ಅವನನ್ನು ಬೆಗ್ಗರ್ ರಿಲೀಫ್ ಸೆಂಟರಿಗೆ ತೆಗೆದುಕೊಂಡು ಹೋಗುತ್ತಾರೆ. ಅವನು ಪರ್ಮನೆಂಟ್ ಬೆಗ್ಗರ್ ಆಗುತ್ತಾನೆ. ಒಂದು ಸಾರಿ ಅವನನ್ನು ಕರೆದುಕೊಂಡು ಹೋದರೆ ಅವನನ್ನು ಪಂಚರಂಗಿ ಮಾಡಿ ಕಳಿಸುತ್ತಾರೆ. ಜೈಲಿನೊಳಗೆ ಪಂಚರಂಗಿ ಬಾರಕ್ಸ್ ಇದೆ ಅವನನ್ನು ಒಂದು ಸಲ ಜೈಲಿಗೆ ಹಾಕಿಬಿಟ್ಟರೆ ಜೈಲಿನಿಂದ ಹೊರಗೆ ಬಂದ ಮೇಲೆ ಮತ್ತೆ ಪುನಃ ಅವನು ಕಳ್ಳತನ ಮಾಡುವುದಕ್ಕೆ ಪ್ರಾರಂಭಮಾಡುತ್ತಾನೆ. ಎಷ್ಟೋ ಜನ ಬಿ. ಎ. ಓದಿದವರು ಪಂಚರಂಗಿಗಳಾಗಿದ್ದಾರೆ. ಒಂದು ಸಲ ಜೈಲಿನಲ್ಲಿ ಅಂತಹ ಒಬ್ಬರನ್ನು ಹೇಗೆ ಬಂದಿದ್ದೀರಿ ಎಂದು ಕೇಳಿದೆ. ಆದಕ್ಕೆ ಅವರು ಹೇಳಿದರು, ನಾನು ಕದ್ದೇ ಇರಲಿಲ್ಲ, ಒಂದು ಸಲ ಕದ್ದೆ ಎಂದು ಸುಮ್ಮನೆ ಕರೆದುಕೊಂಡು ಬಂದು ಹಾಕಿದರು. ಎಲ್ಲೂ ಕೆಲಸ ಕೊಡುವುದಿಲ್ಲ, ಏನು ಮಾಡು ವುದಕ್ಕಾಗುತ್ತದೆ, ಪ್ರತಿ ಸಲ ಕದ್ದು ಬರಬೇಕಾಗುತ್ತದೆ, ಎಂದು ಹೇಳಿದರು. ಈ ರೀತಿಯಾದ ಪರಿಸ್ಥಿತಿ ಸಮಾಜದಲ್ಲಿ ಸೃಷ್ಟನೆಯಾಗಿದೆ. ಇದು ಬಂಡವಾಳಶಾಹಿಯ ಬಹಳ ಕೆಟ್ಟ ಪ್ರತೀಕ. ಅದೇ ರೀತಿ ಒಬ್ಬ ಮನುಷ್ಯ ನಿರುದ್ಯೋಗಿ ಇರುತ್ತಾನೆ. ಅವನು ನಿಂತು ಕೊಂಡಿದ್ದರೆ ಈ ಡೆಫನೇಷನ್ ಪ್ರಕಾರ ಅವನನ್ನು ಕರೆದುಕೊಂಡು ಹೋಗಿ ಬೆಗ್ಗರ್ ರಿಲೀಫ್ ಸೆಂಟರಿಗೆ ಹಾಕುತ್ತಾರೆ. ಈಗ ಅಲ್ಲಿ ಇವರಿಗೆ ಹೆರಾಸ್‌ಮೆಂಟ್ ಜಾಸ್ತಿಯಾಗಿದೆ. ಸರಿಯಾಗಿ ಊಟ ಸಿಗುವುದಿಲ್ಲ, ಏನೇನು ವ್ಯವಸ್ಥೆ ಮಾಡಬೇಕೋ ಮಾಡ ವುದಿಲ್ಲ. ಅಲ್ಲಿ ಹೆಗ್ಗಣಗಳು ಜಾಸ್ತಿ ಇವೆ. ಅಲ್ಲಿಗೆ ಹೋದವರಿಗೆ ಏನೂ ಸಿಕ್ಕುವುದಿಲ್ಲ ಬೆಗ್ಗರ್ಸ್ ಬೇಜಾರು ಪಟ್ಟುಕೊಂಡು ಕೆಲಸ ಮಾಡದೇ ಹೋದರೆ ಅವನನ್ನು ಡಿಸಿಪ್ಲಿನ್‌ಗೆ ಒಳಪಡಿಸುತ್ತಾರೆ. ಕೆಲಸ ಮಾಡು ವುದಕ್ಕೆ ಆಗುವುದಿಲ್ಲ, ಶಕ್ತಿ ಇಲ್ಲ ಎಂದು ಹೇಳಿದರೆ, ಹೊಡೆದು ಕೆಲಸಮಾಡು ಎಂದು ಹೇಳುತ್ತಾರೆ ಈ ತರಹ ಅಮಾನುಷ ರೀತಿಯಲ್ಲಿ ಅಲ್ಲಿ ನಡೆಯುತ್ತಿದೆ. ಇಂತಹ ವರ್ತನೆ ಅಲ್ಲಿರುವುದರಿಂದ ಸ್ವೇಚ್ಛಾಚಾರ, ಲಂಚಗುಳಿತನಕ್ಕೆ ಅವಕಾಶವಾಗುತ್ತದೆ. ಸರ್ಕಾರ ಕೊಡುವುದು ಬೇರೆ ಕಡೆ ಹೋಗುತ್ತಿದೆ. ಜಿಲ್ಲಾ ಸೂಪರಿಂಟೆಂಡೆಂಡ್ ಮನೆಗಳಿಗೆ ಸಾಮಾನುಗಳನ್ನು ಸಾಗಿಸಿಕೊಂಡು ಹೋಗುತ್ತಿದ್ದಾರೆ. ಕೆಲವು ಮಂತ್ರಿ ಗಳ ಮನೆಗೂ ಸಹ ಫರ್ನಿಚರ್ ಹೋಗುತ್ತಿದೆಯೆಂದು ತಿಳಿದು ಬಂತು, ಅದು ಯಾರು ಎಂದು ಹೇಳು

(ಶ್ರೀ ಎಂ. ಎಸ್. ಕೃಷ್ಣನ್)

ವುದಕ್ಕೆ ಹೋಗುವುದಿಲ್ಲ. ಈ ರೀತಿ ಆಗಕೂಡದು ಎಂದು ಹೇಳುತ್ತೇನೆ. ಒಂದು ಚೌಕಟ್ಟಿನೊಳಗೆ ಮಾಡುವಾಗ ರಿಲೀಫ್ ಸೆಂಟರನ್ನು ಸರಿಯಾಗಿ ಮಾಡಿ. ಸೆಕ್ಷನ್ ೯ (೨)ರಲ್ಲಿ ಡಿಸಿಪ್ಲಿನ್ ವಿಚಾರ ಹೇಳಿದೆ. ಅದನ್ನು ಎನ್‌ಫೋರ್ಸ್ ಮಾಡಬೇಕಾದರೆ ಮಾನವೀಯತೆ ಇರಲಿ. ಅವರನ್ನು ದನಗಳು, ಕುರಿಗಳು, ಮೇಕೆಗಳು, ರಾಕ್ಷಸರು ಎನ್ನುವ ರೀತಿಯಲ್ಲಿ ನೋಡಿದರೆ ನೀವು ಕೂಡ ಹಾದಿ ತಪ್ಪುತ್ತೀರಿ ಎಂದು ಹೇಳುತ್ತೇನೆ.

ಇನ್ನೊಂದು ವಿಷಯ ಈ ಸಂದರ್ಭದಲ್ಲಿ ಹೇಳಬೇಕು, ಏನೆಂದರೆ, ಆರ್ಫನೇಜ್‌ನಲ್ಲಿ ೩ ಜನ ಹೆಣ್ಣು ಮಕ್ಕಳು ಸತ್ತರು ಎಂದು ಮಾನ್ಯ ಸಿದ್ದಪ್ಪನವರು ಆ ಕಥೆ ಹೇಳಿದರು. ಅಲ್ಲಿ ಆರ್ಫನ್ಸ್‌ಗೆ ಸರಿಯಾಗಿ ಊಟ ತಿಂಡಿ ಹಾಕದೆ ಕೊನೆಗೆ ಸಾಯಿಸಿಬಿಟ್ಟರು ಎಂದು ಹೇಳಿದರೆ ತಪ್ಪಾಗಲಾರದು. ಅಷ್ಟೇ ಅಲ್ಲ ಮತ್ತು ಇನ್ನು ಏನೇನೋ ಮಾಡಿದರು, ಆ ಆಫೀಸರ್ ಯಾರೋ......

[*Mr. Deputy Speaker in the Chair*]

ಶ್ರೀ ಎಚ್. ಎಸ್. ಸಿದ್ದಪ್ಪ.—ಏಕೆ ಮುಚ್ಚಿಕೊಂಡು ಹೇಳುತ್ತೀರಿ, ಗರ್ಭಿಣಿ ಮಾಡಿದರು ಎಂದು ಹೇಳಿ.

ಶ್ರೀ ಎಂ. ಎಸ್. ಕೃಷ್ಣನ್.—ಅದು ಗೊತ್ತಿದೆ. ಈ ತರಹ ನಡೆಯುತ್ತಿದೆ. ಈ ತರಹ ಪ್ರವೃತ್ತಿ ಹೋಗಬೇಕು ಎಂದು ಹೇಳುತ್ತೇನೆ. ಡಿಸಿಪ್ಲಿನ್ ಎನ್ನುವ ಈ ಡಫನಿಷನ್ ಸರಿಯಾಗಿಲ್ಲ. ಅದನ್ನು ಯೋಚನೆ ಮಾಡಿ ಮಾಡಬೇಕು.

ಕ್ಲಾಸ್ ೧೩–೧೪ರಲ್ಲಿ ಒಳ್ಳೆಯದಿದೆ. ಲೆಪ್ರಸಿ ಇರುವವರಿಗೆ ಬೇರೆ ವ್ಯವಸ್ಥೆ ಮಾಡಬೇಕು. ಇವತ್ತಿನ ದಿವಸ ಕೆಲವು ಕಡೆ ಧರ್ಮರಾಯಸ್ವಾಮಿ ದೇವಸ್ಥಾನದ ಹತ್ತಿರ ಹೋದರೆ ಲೆಪ್ರಸಿ ಜನ ಕೂತಿರುತ್ತಾರೆ. ಅವರನ್ನು ಕರೆದುಕೊಂಡು ಹೋಗುವುದಿಲ್ಲ. ಅವರಿಗೆ ಸರಿಯಾದ ವ್ಯವಸ್ಥೆ ಮಾಡಿದರೆ ಚೆನ್ನಾಗಿರುತ್ತದೆ. ರೋಗ ನಿವಾರಣೆಮಾಡುವುದಕ್ಕೆ ಪ್ರಯತ್ನಪಡಬೇಕಾಗಿದೆ. ಅವರನ್ನು ಬೆಗ್ಗರ್ಸ್ ಎಂದು ಪರಿಗಣಿಸದೆ ರೋಗನಿವಾರಣೆ ಮಾಡಬೇಕು, ಅವರನ್ನು ಪೇಶೆಂಟ್ಸ್ ಎಂದು ಪರಿಗಣಿಸಿ ಅವರಿಗೆ ಅನುಕೂಲ ಮಾಡಿಕೊಡಬೇಕಾಗಿದೆ.

ಇನ್ನು ಆಬ್‌ಸ್ಕಾಂಡಿಗ್ ಬೆಗ್ಗರ್ಸ್, ಈ ಆಬ್‌ಸ್ಕಾಂಡಿಗ್ ಬೆಗ್ಗರ್ಸ್‌ಗೆ ೩ ತಿಂಗಳು ಸಜಾ, ಫೈನ್ನು ಬೇರೆ ಹಾಕುತ್ತಾರೆ. In clause 18 you say :

> "Refusal of a beggar to go to an Institution or to a Magistrate punishable with imprisonment or fine or both......"

What do you mean by fining a beggar? The understanding is that a beggar has got money so that he can pay the fine. The whole concept is wrong.

ಕೆಲವು ಜನ ಬೆಗ್ಗರ್ಸ್ ೩ ಲಕ್ಷ, ೧೦ ಲಕ್ಷ ರೂಪಾಯಿ ಮಾಡಿಕೊಂಡಿದ್ದಾರೆ, ವೃತ್ತಿ ಮಾಡಿಕೊಂಡಿದ್ದಾರೆ ಎಂದು ಹೇಳಬಹುದು. ಆ ರೀತಿ ಯಾರೋ ಒಬ್ಬಿಬ್ಬರು ಇರಬಹುದು. ಅದನ್ನು ಜನರಾಲಿಟಿ ಮಾಡಬೇಡಿ. ಫೈನ್ ಹಾಕುವ ಪ್ರವೃತ್ತಿ ತೋರಿಸಬೇಡಿ. ಇದು ಮಾನವೀಯತೆಯ ವಿರುದ್ಧ ಸರಿಯಾದುದಲ್ಲ. ಇದನ್ನು ತೆಗೆದು ಹಾಕಬೇಕು. ಇದಕ್ಕೆ ಸಂಬಂಧಪಟ್ಟ ರಿಪೋರ್ಟನ್ನು ಲೆಜಿಸ್ಲೇಚರ್ ಮುಂದೆ ಇಡುವಂಥ ಪರಿಸ್ಥಿತಿ ಇಲ್ಲ ಎಂದು ಕಂಡುಬರುತ್ತದೆ. ಅದನ್ನು ಲೆಜಿಸ್ಲೇಚರ್ ಮುಂದೆ ಇಡಬೇಕು. ಇದು ಬಹಳ ಮುಖ್ಯವಾದ ವಿಷಯ. ಲೆಜಿಸ್ಲೇಚರ್ ಮುಂದೆ ಇಟ್ಟರೆ, ಎಷ್ಟು ಹಣ ಖರ್ಚು ಮಾಡುತ್ತಾರೆ, ಯಾವರೀತಿ ಹಣ ವ್ಯಯವಾಗಿದೆ, ಬೆಗ್ಗರ್ ಹೋಗುತ್ತಾನೆಯೇ ಇಲ್ಲವೇ, ಕ್ರಮ ಸರಿಯೇ ಇಲ್ಲವೇ ಎನ್ನುವುದನ್ನು ಪರಿಶೀಲನೆಮಾಡಿ ನಮಗೆ ಸಲಹೆಗಳನ್ನು ಕೊಡುವುದಕ್ಕೆ ಅವಕಾಶವಾಗುತ್ತದೆ. ರಿಪೋರ್ಟನ್ನು ಲೆಜಿಸ್ಲೇಚರ್ ಮುಂದೆ ಇಡಬೇಕು ಎನ್ನುವ ಅಭಿಪ್ರಾಯವನ್ನು ತೆಗೆದುಕೊಂಡು ಬರುವ ರೀತಿಯಲ್ಲಿ ಬಿಲ್ ಇರಬೇಕು, ಆ ತರಹ ಈ ಬಿಲ್ ಇಲ್ಲ. ಈ ಪರಿಸ್ಥಿತಿ ಬದಲಾವಣೆಯಾಗಬೇಕಾದರೆ ಸಹಜವಾಗಿ ಸಮತಾವಾದ ಸಮಾಜಕ್ಕೆ ಹೊಂದಿಕೊಂಡಂತೆ ಇದು ಇರಬೇಕು, ಇಲ್ಲದಿದ್ದರೆ ಆಗುವುದಿಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಂದಿರತಕ್ಕಂಥ ಈ ಭಿಕ್ಷಾಟನಾ ನಿರ್ಮೂಲನಾ ಮಸೂದೆಯನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತಾ ಆ ಬಗ್ಗೆ ಕೆಲವು ಮಾತುಗಳನ್ನು ಆಡಲಿಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಸದಸ್ಯರಾದ ಶ್ರೀ ಮಂಜುನಾಥರವರು ಈ ಬಗ್ಗೆ ಮಾತನಾಡಿದರು. ಆದರೆ ಅವರಿಗೆ ಇದರ ಮೂಲ ಉದ್ದೇಶ ಏನು ಇದೆ ಎನ್ನುವುದು ಗೊತ್ತಿಲ್ಲವೋ ಏನೋ. ಹಿಂದಿನಿಂದಲೂ ಪರಂಪರಾನುಗತವಾಗಿ ಬಂದಿರತಕ್ಕಂಥ ಒಂದು ಸಂಪ್ರದಾಯ ಏನೆಂದರೆ ಈಶ್ವರ ಬ್ರಹ್ಮಕಪಾಲದಲ್ಲಿ ಭಿಕ್ಷೆ ಬೇಡುವುದು. ಇದು ಒಂದು ನಮ್ಮ ಸಮಾಜದ ಮೇಲೆ ಬಂದಿರತಕ್ಕಂಥ ಶಾಪ. ಈ ಶಾಪವನ್ನು ವಿಮೋಚನೆ ಮಾಡುವುದಕ್ಕೆ ಒಂದು ಕ್ರಾಂತಿಕಾರಕವಾದ ಬಿಲ್ಲನ್ನು ತರುತ್ತಾರೆಂದು ನಾನು ನಿರೀಕ್ಷಣೆ ಮಾಡಿದ್ದೆ. ಆದರೆ ಇದರಲ್ಲಿ ಒಂದೆರಡು ಕ್ಲಾಸ್ ಏನು ಇದೆ ಅದನ್ನು ನೋಡಿದರೆ ಇದು ಕ್ರಾಂತಿಕಾರಕವಾದ ಬಿಲ್ಲು ಆಗುತ್ತೋ ಇಲ್ಲವೋ ಎನ್ನುವ ಸಂಶಯ ಇದೆ. ಈ ದೇಶದಲ್ಲಿ ಇಂತಹ ಸಂಪ್ರದಾಯ ಇರತಕ್ಕಂಥ ಈ ಭಿಕ್ಷಾಟನೆಯನ್ನು ನೋಡಿದರೆ ನಗೆಪಾಟಲಾಗುತ್ತದೆ. ಏತಕ್ಕೆಂದರೆ ಈ ದೇಶದಲ್ಲಿರುವ ಭಿಕ್ಷಾಟನೆಯ ಚಿತ್ರವನ್ನು ನೋಡಿದರೆ, ಸನ್ಯಾಸಿಗಳು ರುದ್ರಾಕ್ಷಿ ಮಾಲೆ ಹಾಕಿಕೊಂಡು ಮನೆಮನೆಗೆ ಹೋಗಿ ಬೇಡತಕ್ಕಂಥ ಚಿತ್ರ ನೋಡಿದರೆ, ಅವರು ಈ ರೀತಿಯಾದ ಒಂದು ಜೀವನ ಮಾಡಿಕೊಂಡು ಬೊಜ್ಜು ಬೆಳೆಸಿಕೊಂಡಿರುವುದನ್ನು ನೋಡಿದರೆ ಪಾಶ್ಚಿಮಾತ್ಯ ದೇಶದ ಜನ ನಮ್ಮನ್ನು ಆಡಿಕೊಳ್ಳುತ್ತಿದ್ದಾರೆ. ಅದನ್ನು ನಾನು ಕೂಡ ನೋಡಿದ್ದೇನೆ. ಒಂದು ಉದಾಹರಣೆ ಹೇಳುವುದಾದರೆ ಒಬ್ಬ ವೈದ್ಯರು ನನ್ನನ್ನು ಅವರ ಮನೆಗೆ ಊಟಕ್ಕೆ ಕರೆದಿದ್ದರು. ನಾನು ಅಲ್ಲಿಗೆ ಹೋದಾಗ ಅವರು ಭಾರತದ ವೈಶಿಷ್ಟ್ಯವಾದ ಒಂದು ಚಿತ್ರವನ್ನು ನನಗೆ ತೋರಿಸಿದರು. ಅದು ಯಾವುದೆಂದರೆ ಸನ್ಯಾಸಿಗಳು ರುದ್ರಾಕ್ಷಿ ಸರ ಹಾಕಿಕೊಂಡು ದೇವರ ಗುಡಿಯಲ್ಲಿ ಭಿಕ್ಷಾಟನೆ ಮಾಡುತ್ತಾ ಇರುವುದನ್ನು ಮತ್ತು ಅವರು ಮನೆಮನೆಗೆ ಹೋಗಿ ಭಿಕ್ಷೆ ಬೇಡುವ ಒಂದು ಚಿತ್ರವನ್ನೂ ಕೂಡ ತೋರಿಸಿದರು. ನಾನು ಒಬ್ಬ ಭಾರತೀಯನಾಗಿ ಅಲ್ಲಿಗೆ ಹೋಗಿದ್ದುದರಿಂದ ಆ ಚಿತ್ರವನ್ನು ನೋಡಿ ನಾನು ಅಲ್ಲಿ ಊಟ ಮಾಡಲಿಲ್ಲ. ಪ್ರೊಟೆಸ್ಟ್ ಮಾಡಿ ಬಂದಿದ್ದೇನೆ. ಆದುದರಿಂದ ಈ ಒಂದು ಬಿಲ್‌ನ್ನು ಕ್ರಾಂತಿಕಾರಕವಾದ ಬಿಲ್ಲನ್ನು ತರುತ್ತಾರೆಂದು ನಾನು ನಿರೀಕ್ಷಣೆ ಮಾಡಿಕೊಂಡಿದ್ದೆ. ಆದರೆ ಮಾನ್ಯಮಂತ್ರಿಗಳು ಇಂತಹ ಒಂದು ಬಿಲ್ಲನ್ನು ತರುವುದಕ್ಕೆ ಸಂಕೋಚಪಟ್ಟುಕೊಂಡಿದ್ದಾರೆ. ಮತ್ತು ಧಾರ್ಮಿಕ ಕ್ಲಾಸ್‌ನಲ್ಲಿ ಅನುಸರಿಸತಕ್ಕಂಥ ಭಿಕ್ಷಾಟನಾ ರೀತಿ ಒಂದು ರೀತಿ ಇದೆ. ಇದು ಪರಂಪರಾನುಗತವಾಗಿ ಬಂದಿರುವುದರಿಂದ ನಾನು ಹೇಳುತ್ತೇನೆ. ಅದು ಏನೆಂದರೆ ಅಪ್ಪ ಜೀವಂತವಾಗಿರುವಾಗಲೇ, ಆತ ಜೀವಂತನಾಗಿ ೬ ಅಡಿ ಉದ್ದ ಮತ್ತು ೧೮೦ ಪೌಂಡ್ ತೂಕ ಇದ್ದಾಗಲೇ ಭಿಕ್ಷೆಯನ್ನು ಬೇಡತಕ್ಕಂಥ ಮಗನೊಬ್ಬ ನಮ್ಮ ಅಪ್ಪನ ತಿಥಿ ಮಾಡಬೇಕು ದುಡ್ಡು ಕೊಡಿ ಎಂದು ಭಿಕ್ಷಾಟನೆ ಮಾಡುತ್ತಾರೆ, ಈ ರೀತಿ ಭಿಕ್ಷಾಟನೆ ಮಾಡಿ ಅಪ್ಪನನ್ನು ೧೬–೧೭ ಸಾರಿ ಸಾಯಿಸುತ್ತಾನೆ, ಅನಂತರ ಬರುವ ವರ್ಷ ತನ್ನ ತಾಯಿಯನ್ನು ಸಾಯಿಸುತ್ತಾನೆ. ಆದುದರಿಂದ ನಾನು ಹೇಳುವುದು ಏನೆಂದರೆ ಇಂಥಾ ಭಿಕ್ಷಾಟನೆಯನ್ನು ಹೋಗಲಾಡಿಸುವಂಥ ಒಂದು ಕ್ರಾಂತಿಕಾರಕವಾದ ಬಿಲ್ಲನ್ನು ತರಬೇಕಾಗಿತ್ತು. ಇಂಥಾ ಒಂದು ಬಿಲ್ಲನ್ನು ತಂದು ಇದನ್ನು ಮೂಲೋತ್ಪಾಟನಾ ಮಾಡಿದ ಹೊರತು ಸಮಾಜಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. ಆದುದರಿಂದ ಸಮಾಜದಲ್ಲಿ ಇಂಥಾ ಜನರನ್ನು ಏನಾದರೂ ಮಾಡಿ ಮೇಲಕ್ಕೆ ಎತ್ತಿ ಹೊರತು ಸಮಾಜಕ್ಕೆ ಒಳ್ಳೆಯ ಹೆಸರು ಬರುವುದಿಲ್ಲ. ಆದರೆ ಯಾವುದೋ ಒಂದು ಕಾಲದಲ್ಲಿ ಈ ಒಂದು ಭಿಕ್ಷಾಟನೆಯನ್ನು ಮಾಡಿ ಎರಡು ಹೊತ್ತು ಊಟ ಮಾಡಿಕೊಂಡು ಸಮಾಜಕ್ಕೆ ಬೋಧನೆ ಮಾಡತಕ್ಕಂಥ ಕಾಲ ಇತ್ತು. ಇಂದು ಆ ಕಾಲ ನಶಿಸಿ ಹೋಗುತ್ತಾ ಇದೆ. ಈವೊತ್ತಿನ ದಿವಸ ಸಮಾಜದ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ ಬೊಜ್ಜು ಬೆಳೆಸಿಕೊಂಡು ಯಾವುದೋ ಒಂದು ಮೌಢ್ಯ ಸಂಪ್ರದಾಯವನ್ನು ಅನುಸರಿಸಿಕೊಂಡು ಜೀವನ ಮಾಡುತ್ತಿದ್ದಾರೆ. ಈಗ ಅದರ ಅವಶ್ಯಕತೆ ಇಲ್ಲ. ಈ ಬಗ್ಗೆ ಈ ಬಿಲ್ಲಿನಲ್ಲಿ ಏನೂ ಹೇಳಿಲ್ಲ. ಈವೊತ್ತಿನ ದಿವಸ ಹೊರಗಡೆ ಇರತಕ್ಕಂಥ ಕುರುಡರು ಕುಂಟರು ಏನು ಇದ್ದಾರೆ ಅವರನ್ನು ಪೋಲೀಸಿನವರು ಹಿಡಿಯುತ್ತಿದ್ದಾರೇ ಹೊರತು ಈ ರಾವಣ ಸನ್ಯಾಸಿಗಳನ್ನು ಏನು ಇದ್ದಾರೆ ಅವರನ್ನು ಹಿಡಿಯುತ್ತಾ ಇಲ್ಲ. ಮತ್ತು ಆ ಬಗ್ಗೆ ಈ ಬಿಲ್ಲಿನಲ್ಲಿ ಏನೂ ಅಡಕವಾಗಿಲ್ಲ. ಆದುದರಿಂದ ಈವೊತ್ತಿನ ದಿವಸ ಸಮಾಜದಲ್ಲಿ ಎಲ್ಲ ಹಂತಗಳಲ್ಲೂ ಬದಲಾವಣೆಯಾಗಬೇಕು ಎಂದು ಹೇಳುತ್ತೇನೆ. ಇಂಥಾ ಒಂದು ಸುಧಾರಣೆ ಮಾಡುವುದಕ್ಕೆ ಒಂದು ಬಿಲ್ ತಂದಿದ್ದರೆ ನನಗೆ ತುಂಬಾ ಸಂತೋಷವಾಗುತ್ತಿತ್ತು. ಈ ಬಿಲ್‌ನಲ್ಲಿರುವ ಒಂದು ಕ್ಲಾಸ್‌ನ್ನು ಓದುತ್ತೇನೆ. ಅದರಲ್ಲಿ ಮಾನ್ಯ ಮಂತ್ರಿಗಳು ಈ ರೀತಿ ಹೇಳಿದ್ದಾರೆ.

> "Provided that a person shall not be deemed to be a beggar if he is permitted in writing by the Central Relief Committee to collect contributions in cash or kind from the public for any public institution, whether religious or secular or for the furtherance of any object for the good of the public."

(ಶ್ರೀ ಎಸ್.ಎಂ. ಶೀರನಾಳಿ ಚಂದ್ರಶೇಖರ್)

ಇದು ಒಂದೇ ಸಾಕು. ನಮ್ಮ ದೇಶದಲ್ಲಿ ಈ ಭಿಕ್ಷಾಟನೆಯನ್ನು ಸಂರಕ್ಷಣೆ ಮಾಡಲಿಕ್ಕೆ ಸಾಕು. ಈವೊತ್ತಿನ ದಿವಸ ರಾವಣ ಸನ್ಯಾಸಿಗಳು ಏನು ಮಾಡುತ್ತಿದ್ದಾರೆ ಎಂದರೆ ಕೊರಲಿಗೆ ದೇವರ ಪಟ ಕಟ್ಟಿಕೊಂಡು, ಶಂಖ ಊದಿಕೊಂಡು ಮನೆಮನೆಗೆ ಬರುತ್ತಾರೆ ಅಂಥವರನ್ನು ಸಂರಕ್ಷಣೆ ಮಾಡುತ್ತಾರೆಯೋ ಏನ್ನುವುದು ನನಗೆ ಸಂಶಯ ಬಂದಿದೆ ಹೀಗೆ ಅವರು ದೇಶದ ಪರ್ಯಾಟನೆ ಮಾಡುವುದಕ್ಕೆ ಅವಕಾಶ ಕೊಟ್ಟರೆ ಈ ಬಿಲ್ಲಿನಿಂದ ಏನು ಪ್ರತಿಫಲ ಆಗುತ್ತದೋ ಏನೋ ನನಗೆ ಗೊತ್ತಿಲ್ಲ. ಈವೊತ್ತಿನ ದಿವಸ ಧಾರ್ಮಿಕವಾಗಿ ಭಿಕ್ಷಾಟನೆ ಮಾಡಲಿಕ್ಕೆ ಅಧಿಕಾರವಿದೆ. ಆದರೆ ಧಾರ್ಮಿಕ ಹೆಸರಿನಲ್ಲಿ ಬೇಡಿ ಅವರ ಬೊಜ್ಜನ್ನು ಬೆಳೆಸಿ ಕೊಂಡು ಹೋಗುವಂಥ ಜನರು ಇದ್ದಾರೆ. ಇಂಥಾ ರಾವಣ ಸನ್ಯಾಸಿಗಳನ್ನು ರಕ್ಷಣೆ ಮಾಡುವುದು ಸರಿಯೋ ಇಲ್ಲವೋ ಅದನ್ನು ಮಾನ್ಯಮಂತ್ರಿಗಳು ಯೋಚನೆ ಮಾಡಬೇಕು. ಇದು ಅವರಿಗೆ ಬಿಟ್ಟ ವಿಚಾರ. ಅವರು ಎಲ್ಲವನ್ನೂ ತಿಳಿದುಕೊಂಡಂಥಾವರು ಅವರಿಗೆ ನಾನು ಹೆಚ್ಚು ಹೇಳಬೇಕಾಗಿಲ್ಲ. ನಿಜವಾಗಿಯೂ ಧಾರ್ಮಿಕ ಹೆಸರಿನಲ್ಲಿ ಒಂದು ಸಂಸ್ಥೆಯನ್ನು ಕಟ್ಟುವುದಾಗಲಿ ಅಥವಾ ದೊಡ್ಡದೊಡ್ಡ ಶಾಲೆಗಳನ್ನು ಕಟ್ಟುವುದಾಗಲಿ ಅಥವಾ ಸಮಾಜದ ಉನ್ನತಿಗೆ ಒಂದು ಒಳ್ಳೆಯ ಕೆಲಸ ಮಾಡುವುದಾಗಲಿ ಭಿಕ್ಷೆ ಮಾಡಿದರೆ ಅದಕ್ಕೆ ಅವಕಾಶ ಕೊಡೋಣ. ಅದು ಬಿಟ್ಟು ಧರ್ಮದ ಹೆಸರಿನಲ್ಲಿ, ದೇವರ ಹೆಸರಿನಲ್ಲಿ ಮುಖವಾಡ ಇಟ್ಟುಕೊಂಡು ಜನರಲ್ಲಿ ಬೇಡಿ ಜೀವನ ಮಾಡುವಂಥ ಜನರು ಇದ್ದರೆ ಅವರಿಗೇನಾದರೂ ಬೆಂಬಲ ಕೊಡುವಂಥ ಅವಕಾಶ ಈ ಬಿಲ್ಲಿನಲ್ಲಿ ಇದ್ದರೆ ನಿಜವಾಗಿಯೂ ಈ ಬಿಲ್ಲಿನ ಉದ್ದೇಶ ಏನು ಇದೆ ಅದು ಸಫಲವಾಗುವುದಿಲ್ಲ ಎಂದು ನಾನು ಹೇಳಬಯಸುತ್ತೇನೆ.

ಇನ್ನು ಎರಡನೇ ವಿಚಾರ ಏನೆಂದರೆ ಈ ಭಿಕ್ಷಕ್ಕಾಗಿಯೇ ಇದ್ದು ಜೀವನ ಮಾಡತಕ್ಕಂಥ ಒಂದು ವರ್ಗ ಇದೆ. ಇದನ್ನು ಮೂಲೋತ್ಪಾಟನೆ ಮಾಡಬೇಕು. ಮೊನ್ನೆ ತಾನೇ ತಾವು ಪೇಪರಿನಲ್ಲಿ ಓದಿರ ಬಹುದು. ೨-೩ ಹುಡುಗರನ್ನು ಕದ್ದುಕೊಂಡು ಹೋದರು ಎಂದು. ಇವರು ಆ ಹುಡುಗರನ್ನು ಕದ್ದುಕೊಂಡು ಹೋಗಿ ಕಣ್ಣು ತೆಗೆದು, ಕಾಲು ತೆಗೆದು ಬಿಡುತ್ತಾರೆ. ಅವರು ಬೇಡಿ ಅದರಿಂದ ಏನು ಸಂಪಾದನೆ ಆಗುತ್ತದೆ ಅದನ್ನು ಇವರಿಗೆ ತಂದುಕೊಡಬೇಕು. ಆ ಭಿಕ್ಷುಕರು ತಮ್ಮ ದಾಂಡೂಗಪೊಳಗೆ ಕೂತುಕೊಂಡು ಇಂತಹ ಒಂದು ಭಿಕ್ಷಾಟನೆಯನ್ನು ಅವರಿಂದ ಮಾಡಿಸಿ ತಮ್ಮ ಜೀವನವನ್ನು ಮಾಡುತ್ತಿದ್ದಾರೆ. ಇಂತಹ ರಾಕ್ಷಸ ಜೀವನ ಮಾಡತಕ್ಕಂಥ ಜನರಿಗೆ ಒಂದು ಶಾಸನ ಆಗಬೇಕು. ಈ ರೀತಿಯಾದಂಥ ಜೀವನ ಬರೇ ಬೆಂಗಳೂರು ಮೈಸೂರಿನಲ್ಲಿ ಮಾತ್ರವೇ ಅಲ್ಲ ಇಡೀ ದೇಶಾದ್ಯಂತ ಇದೆ. ಈ ಒಂದು ರೋಗವನ್ನು ಮೂಲೋತ್ಪಾಟನಾ ಮಾಡತಕ್ಕಂಥ ಒಂದು ಬಿಲ್ಲನ್ನು ತರಬೇಕು ಎಂದು ನಾನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಇಂಥ ವಿಚಾರ ಪರಂಪರೆಯನ್ನು ಮೂಲೋತ್ಪಾಟನೆ ಮಾಡುವ ಉದ್ದೇಶ ಈ ಬಿಲ್ಲಿನಲ್ಲಿ ಅಡಕವಾಗಬೇಕಾಗಿತ್ತು ಆದರೆ ಆ ರೀತಿ ಇದರಲ್ಲಿ ಅಡಕವಾಗಿಲ್ಲವೆಂದು ವಿಚಾರ ಮಾಡಿಕೊಳ್ಳುತ್ತೇನೆ. ಈಗಲೂ ಹಬ್ಬ ಹರಿದಿನ ಬಂದಾಗ ಪಾತ್ರೆಗಳನ್ನು ಹಿಡಿದುಕೊಂಡು ಕೆಲವರು ಮನೆಗಳಿಗೆ ಬರುವುದಕ್ಕೆ ಮಾತ್ರ ಇದು ಸೀಮಿತವಾಗಿಲ್ಲ. ಇದು ಎಲ್ಲಿಯವರೆಗೆ ಬೆಳೆದಿದೆ ಎಂದು ಹೇಳುವುದಾದರೆ ವಿದ್ಯಾರ್ಥಿಗಳೆಂದು ವೇಶ ಹಾಕಿಕೊಂಡು ಬರುತ್ತಾರೆ. ಅವರಿಗೆ ಯಾರೋ ಯಾವುದೋ ಒಂದು ಸರ್ಟಿಫಿಕೇಟ್ ಕೊಟ್ಟುಬಿಟ್ಟಿರುತ್ತಾರೆ ಅದನ್ನೇ ಉಪಯೋಗಿಸಿಕೊಂಡು ಭಿಕ್ಷೆ ಮಾಡುತ್ತಾ ಇರುತ್ತಾರೆ. ಇದನ್ನು ಮೂಲೋತ್ಪಾಟನೆ ಮಾಡುವುದಕ್ಕೆ ಈ ಬಿಲ್ಲಿನಲ್ಲಿ ಸರಿಯಾದ ಶಾಸನವನ್ನು ತಂದಿದ್ದಾರಯೇ ಎಂದು ನನಗೆ ಅನುಮಾನ ಬರುತ್ತದೆ. ಧರ್ಮದ ಹೆಸರಿನಲ್ಲಿ ಭಿಕ್ಷೆ ಮಾಡುವುದಕ್ಕೆ ಈ ಬಿಲ್ಲಿನಲ್ಲಿ ಅವಕಾಶ ಮಾಡಿಕೊಟ್ಟರೆ ಈ ಬಿಲ್ಲನ್ನು ತಂದಿರುವ ಉದ್ದೇಶ ಸಫಲವಾಗುವುದಿಲ್ಲ. ಆದ್ದರಿಂದ ಆ ಉದ್ದೇಶ ಆಗಬಾರದು. ಯಾವುದಾದರೂ ಗುರುತರವಾದ ಉದ್ದೇಶ ಇಟ್ಟುಕೊಂಡು ದೇಶದಲ್ಲಿರತಕ್ಕ ಎಲ್ಲರೂ ಜೊತೆಗೆ ಸೇರಿಕೊಂಡು ಬೇರೆಯುವರಂತೆ ನಾವು ಆಸೆ ಆಕಾಂಕ್ಷೆಗಳನ್ನು ಮತ್ತು ಒಳ್ಳೆಯ ಗುರಿಗಳನ್ನು ಇಟ್ಟುಕೊಂಡು ಗುರಿ ತಲುಪಬೇಕೆಂಬ ಉದ್ದೇಶ ಆತನಿಗೆ ಬರುವಂತೆ ಭರವಸೆ ಕೊಡತಕ್ಕಂಥ ಬಿಲ್ಲನ್ನು ತರಬೇಕೆಂದು ಕೇಳಿಕೊಳ್ಳುತ್ತೇನೆ. ಶ್ರೀಮಾನ್ ಕುಲಕರ್ಣಿ ಎಂಬುವರ ಕಾದಂಬರಿಯಲ್ಲಿ ಭಿಕ್ಷುಕರ ಸಮಸ್ಯೆಯನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಅದರಲ್ಲಿ ಬರತಕ್ಕಂಥ ಭಿಕ್ಷುಕರ ಸಮಸ್ಯೆಯನ್ನು ಎಷ್ಟು ಚೆನ್ನಾಗಿ ಹೇಳಿದ್ದಾರೆ ಎಂದು ಹೇಳುವುದಾದರೆ ಯಾವಯಾವ ಹಂತದಲ್ಲಿ ಶೋಷಣೆಯಾಗುತ್ತದೆ ಎಂಬುದನ್ನು ಹೇಳಿದ್ದಾರೆ ಸಮಾಜದಲ್ಲಿ ಎಲ್ಲಾ ಹಂತದಲ್ಲೂ ಶೋಷಣೆ ನಡೆಯುತ್ತಿವೆ. ಉದಾಹರಣೆಗೆ ಹೇಳುವುದಾದರೆ ಇದು ಹೇಗೆ ಎಂದರೆ ದೊಡ್ಡ ಮೀನು ಸಣ್ಣ ಮೀನನ್ನು ನುಂಗಿ ಜೀವನ ನಡೆಸುವ ರೀತಿಯಲ್ಲಿ ನಮ್ಮ ಸಮಾಜದಲ್ಲೂ ಕೂಡ ಇದೆಯೆಂದು ಹೇಳಬೇಕಾಗುತ್ತದೆ. ಸಮಾಜದಲ್ಲಿ ಪ್ರತಿಯೊಬ್ಬರು ಮನುಷ್ಯರು ಅವರು ನಮ್ಮಂತೆಯೇ ಬಾಳಿ ಬದುಕಬೇಕು ಎಂಬ ಉದ್ದೇಶ ಇಟ್ಟುಕೊಂಡು ಅವರಿಗೂ ಒಂದು ಭರವಸೆಯನ್ನು ಕೊಡತಕ್ಕಂಥ ಶಾಸನವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಪ್ಪ ಭಿಕ್ಷುಕನಾಗಿದ್ದರೆ ಅವರ ಪರಂಪರೆಯಲ್ಲಿ ಎಲ್ಲರೂ ಭಿಕ್ಷುಕರಾಗಿ ಇರಬೇಕೆಂಬುದು ಯಾವ ಶಾಸ್ತ್ರ ಪುರಾಣದಲ್ಲೂ ಇಲ್ಲ. ಇನ್ನು

ಒಂದು ಹೇಳುವುದಾದರೆ ರಾತ್ರಿ ಒಂದು ಕಸಬು ಮಾಡುವುದು ಬೆಳಿಗ್ಗೆ ಭಿಕ್ಷುಕ ವೃತ್ತಿ ಈ ರೀತಿ ಎಷ್ಟೋ ಜನ ಜೀವನ ಮಾಡುವವರು ಇದ್ದಾರೆ ಇದನ್ನು ತೊಲಗಿಸುವುದಕ್ಕೆ ಪ್ರಯತ್ನ ಮಾಡುತ್ತೀರೆಂದು ನಂಬಿ ಇಷ್ಟನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ).—ಸನ್ಮಾನ್ಯ ಅಧ್ಯಕ್ಷರೇ, ಈ ಭಿಕ್ಷುಕರ ಹಾವಳಿಯನ್ನು ತಡೆಗಟ್ಟತಕ್ಕ ಬಗ್ಗೆ ಮತ್ತು ಅವರ ಜೀವನವನ್ನು ಸುಗಮವಾಗಿ ಮಾಡುವುದಕ್ಕೆ ಈ ಬೆಗ್ಗರಿ ಬಿಲ್ ೧೯೭೩ ಇದನ್ನು ತಂದಿದ್ದಾರೆ. ಇದನ್ನು ನೋಡಿದರೆ ನನಗನಿಸುತ್ತದೆ ಭಿಕ್ಷುಕರನ್ನು ಉತ್ತಮ ಜನವನ್ನಾಗಿ ಮಾಡ ತಕ್ಕಂಥ ಉದ್ದೇಶ ಇದರಲ್ಲಿ ಎಷ್ಟು ಅಡಕವಾಗಿದೆ ಅಷ್ಟೇ ಇದರಲ್ಲಿ ರಾಜಕೀಯ ಉದ್ದೇಶವೂ ಅಡಕವಾಗಿದೆ ಯೆಂದು ನನಗನಿಸುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಏನು ಈ ಭಿಕ್ಷುಕರ ಸಮಸ್ಯೆ ಬಗ್ಗೆ ತಂದಿರುವ ಬಿಲ್ಲಿನಲ್ಲಿ ಹೇಗೆ ರಾಜಕೀಯ ಉದ್ದಿಶ್ಯ ಅಡಕವಾಗಿದೆ ?

ಶ್ರೀ ಎಚ್. ಎಸ್. ಸಿದ್ದಪ್ಪ.—ಮಾನ್ಯಮಂತ್ರಿಗಳು ಸಾವಧಾನವಾಗಿ ಕೇಳಿದರೆ ಹೇಳುತ್ತೇನೆ. ಶ್ರೀಮಾನ್ ಕೃಷ್ಣರವರು ಮಾತನಾಡುತ್ತಾ ಒಂದು ಡೆಫೆನಿಷನ್ ಇಲ್ಲಿ ಪ್ರಸ್ತಾಪ ಮಾಡಿದರು. ಆದರೆ ನಾನು ಮತ್ತೆ ಪುನಃ ಪ್ರಸ್ತಾಪಮಾಡಿದರೆ ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಒಂದು ಡೆಫಿನಿಷನ್‌ನಲ್ಲಿ ಹೇಳಿರುವ ಪ್ರಕಾರ "Child" means a boy who has not attained the age of sixteen years. ೧೬ ವರ್ಷದೊಳಗೆ ಅವನಿಗೆ ಎರಡು ಮಕ್ಕಳು ಆಗಿರುತ್ತಾರೆ. ಆ ಮಕ್ಕಳನ್ನು ಭಿಕ್ಷಕ್ಕೆ ಬಿಟ್ಟಿರುತ್ತಾರೆ. ಆದ್ದರಿಂದ ಭಿಕ್ಷುಕ ಯಾವುದೇ ವಯಸ್ಸಿನವನಾಗಲಿ ಭಿಕ್ಷುಕ ಭಿಕ್ಷುಕನೇ ಎಂದು ಅವನಿಗೆ ಶಿಕ್ಷೆಗೆ ಗುರಿಪಡಿಸಬೇಕು. ಸುಮಾರು ೧೪–೧೫ ವರ್ಷದ ಮೇಲೆ ಇದ್ದರೆ ಶಿಕ್ಷೆಯನ್ನು ಕೊಡುವುದರ ಬದಲು ಅವನನ್ನು ಬಿಟ್ಟುಬಿಡುವುದು ಸರಿಯಾದ ಕ್ರಮವಾಗುವುದಿಲ್ಲ. ಆದ್ದರಿಂದ ಭಿಕ್ಷುಕನ ವಯಸ್ಸು ಏನೇ ಇರಲಿ ಅವನನ್ನು ಭಿಕ್ಷುಕನೆಂದು ಪರಿಗಣಿಸ ಬೇಕು ಎಂದು ಹೇಳುತ್ತೇನೆ. ಇನ್ನು ನಮ್ಮಲ್ಲಿ ಕೆಲವು ಜಾತ್ರೆಗಳು ನಡೆಯುತ್ತವೆ ತಾವು ಅಲ್ಲಿಗೆ ಬನ್ನಿ ತೋರಿಸುತ್ತೇನೆ. ಆ ಜಾತ್ರೆಗೆ ಸಣ್ಣಸಣ್ಣ ಮಕ್ಕಳನ್ನು ಭಿಕ್ಷೆ ಬೇಡಲಿಕ್ಕೆ ಕಳುಹಿಸುತ್ತಾರೆ. ಶ್ರೀಮಾನ್ ಚಂದ್ರಶೇಖರ್‌ರವರು ಹೇಳಿದರು ಅವರು ಪಾಶ್ಚಿಮಾತ್ಯ ದೇಶಕ್ಕೆ ಹೋಗಿದ್ದಾರೆ ಅವರ ಸ್ನೇಹಿತರ ಮನೆಗೆ ಊಟಕ್ಕೆ ಹೋದಾಗ ಅವರಿಗೆ ರುದ್ರಾಕ್ಷಿ ಹಾಕಿಕೊಂಡು ಭಿಕ್ಷೆ ಬೇಡುತ್ತಿದ್ದವರ ಚಿತ್ರವನ್ನು ತೋರಿಸಿ ಈ ರೀತಿ ನಿಮ್ಮ ದೇಶದಲ್ಲಿ ಭಿಕ್ಷಾಟನೆ ನಡೆಯುತ್ತಿದೆ ಎಂದು ಹೇಳಿದರು ಎಂದು ಅವರು ಹೇಳಿದರು. ಒಂದೊಂದು ಜಾತಿಯಲ್ಲಿ ಒಂದೊಂದು ರೀತಿ ಭಿಕ್ಷೆ ನಡೆಯುತ್ತಿದೆ. ಉದಾಹರಣೆಗೆ ಹೇಳು ತ್ತೇನೆ. ಕೆಲವರು ಮಾರಮ್ಮನನ್ನು ಹೊತ್ತುಕೊಂಡು ಬರುತ್ತಾರೆ. ಹೆಂಡತಿ ಮಾರಮ್ಮನನ್ನು ಹೊತ್ತು ಕೊಂಡು ಗಂಡ ಚಾಟಿಯನ್ನು ಹಿಡಿದುಕೊಂಡು ಬರುತ್ತಾರೆ. ಆಮೇಲೆ ಆತ ಚಾಟಿಯಿಂದ ಹೊಡೆದು ಕೊಂಡು ಮೈಯಲ್ಲಿ ರಕ್ತ ಸುರಿಸಿಕೊಂಡು ಭಿಕ್ಷೆ ಬೇಡುತ್ತಿರುತ್ತಾನೆ. ಅಂಥವರ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ತಾವು ಯೋಚನೆ ಮಾಡಬೇಕು. ಇದರಲ್ಲಿ ಧರ್ಮ ಮತ್ತು ಧಾರ್ಮಿಕ ಎಂದು ಸೇರಿಸಿದ್ದೀರಿ ಧರ್ಮದ ಹೆಸರಿನಲ್ಲಿ ಭಿಕ್ಷೆ ಬೇಡುತ್ತಿರುತ್ತಾರೆ. ಇನ್ನು ಕೆಲವು ವಿಷಯಗಳನ್ನು ಹೇಳಬಯಸುತ್ತೇವೆ. ಕೆಲವು ಸಂದರ್ಭದಲ್ಲಿ ದೇವರನ್ನು ಭಿಕ್ಷೆಗೆ ಹೊರಡಿಸುತ್ತಾರೆ ಆ ದೇವರುಗಳು ಶ್ರೀಮಾನ್ ಹುಚ್ಚಮಾಸ್ತಿಗೌಡರ ವ್ಯಾಪ್ತಿಯಲ್ಲಿ ಬರುವ ದೇವರಲ್ಲ. ಮಲ್ಲಮ್ಮ, ಸಿದ್ದೇಶ್ವರ ಎಂದು ಜಾತ್ರೆ ಇನ್ನು ಒಂದು ತಿಂಗಳು ಇದೆ ಎನ್ನುವಾಗ ಆ ದೇವರುಗಳನ್ನು ತೆಗೆದುಕೊಂಡು ದೇವರ ಕೈಯ್ಯಲ್ಲಿ ಭಿಕ್ಷೆ ಬೇಡಿಸುತ್ತಾರೆ. ಇದು ಬಹಳ ಗಹನವಾದ ವಿಚಾರ. ಈ ಹಿಂದೆ ಮಾನ್ಯ ಚಂದ್ರಶೇಖರ್‌ರವರು ಹೇಳಿದ್ದರಲ್ಲಿ ಈಶ್ವರ ಬ್ರಹ್ಮನನ್ನು ಕೊಲೆ ಮಾಡುವುದಕ್ಕೆ ಹೋಗಿದ್ದರು ಎಂದು ಹೇಳಿದರು. ಕೆಲವು ಸಂದರ್ಭಗಳನ್ನು ಈಗ ಹೇಳಬೇಕಾಗುತ್ತದೆ. ಪುರಾಣಗಳಲ್ಲಿ ಹೇಳಿರುವಂತೆ ಒಂದು ಸಾರಿ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರು ಕೂಡ ಸತಿ ಅನುಸೂಯಾ ದೇವಿ ಮನೆಗೆ ಭಿಕ್ಷೆಗೆ ಹೋಗಿದ್ದರು ಎಂದು ಹೇಳಿಕೊಂಡು ಪುರಾಣಗಳನ್ನು ಹೇಳಿಕೊಂಡು ಭಿಕ್ಷೆ ಬೇಡುತ್ತಿದ್ದಾರೆ. ಹೀಗೆ ಪುರಾಣಗಳನ್ನು ಕೇಳಿಕೇಳಿ ನಮ್ಮ ಜನರು ಭಿಕ್ಷುಕರಾಗಿ ಹೆಚ್ಚುತ್ತಾ ಇರುವುದು. ಅಂಥವರನ್ನು ಮೊದಲು ಹಿಡಿಯಬೇಕು ಅಲ್ಲದೆ ಇಂಥ ಕಂತೆ ಪುರಾಣಗಳನ್ನು ಹೇಳಿಕೊಂಡು ಜೀವನ ನಡೆಸುವವರನ್ನು ಶಿಕ್ಷಿಸಬೇಕು. ಅವರು ಹೇಳುವುದು ನೀವು ಈ ದೇವರನ್ನು ಪೂಜಿಸಿದರೆ ಹಾಗೆ ಆಗುತ್ತದೆ ಎಂದು ಹೇಳಿಕೊಂಡು ಜನರನ್ನು ಸುಲಭವಾಗಿ ಜೀವನ ಸಾಗಿಸುತ್ತಾ ಬರುತ್ತಾರೆ. ಇನ್ನೊಂದು ವಿಷಯ ಹೇಳುತ್ತೇನೆ. ನನ್ನ ಜೊತೆಯಲ್ಲಿ ಬಂದರೆ ಅದನ್ನು ತೋರಿಸುತ್ತೇನೆ. ಯಾರೋ ಗಂಡಹೆಂಡತಿ ಊರಿನ ಒಂದು ಮೈಲಿ ದೂರದಲ್ಲಿ ಬಸ್ಸಿಗೆ ಹೋಗುವುದಕ್ಕೆ ಕುಳಿತಿದ್ದರು. ಆಗ ಅವರು ಎಲೆ ಅಡಿಕೆ ಹಾಕಿಕೊಳ್ಳುವುದಕ್ಕೆ ಒಂದು ಕಲ್ಲಿನಮೇಲೆ ಎಲೆಅಡಿಕೆ ಕುಟ್ಟಿ ಕೊಂಡಿದ್ದಾರೆ ಆ ಜಾಗದಲ್ಲಿ ಸ್ವಲ್ಪ ಕೆಂಪು ಬಣ್ಣವಾಯಿತು. ಅದನ್ನು ನೋಡಿದ ಒಬ್ಬ ಅರ್ಚಕ ಏನು ಮಾಡಿದ ಎಂದರೆ ಇಲ್ಲಿ ದೇವರು ಉದ್ಭವವಾಗಿದೆ ಎಂದು ಜನರಲ್ಲಿ ಪ್ರಚಾರ ಮಾಡಿ ಅಲ್ಲಿ ದೇವಸ್ಥಾನವನ್ನು

(ಶ್ರೀ ಎಚ್. ಎಸ್. ಸಿದ್ದಪ್ಪ)

ಕಟ್ಟಿಸಿ ಅದಕ್ಕೆ ಪರ್ಲ್ಲಿಂಗಮ್ಮನ ದೇವಸ್ಥಾನವೆಂದು ಹೆಸರು ಇದೆ ಆ ದೇವಸ್ಥಾನಕ್ಕೆ ಒಬ್ಬ ಅರ್ಚಕನನ್ನು ತೆಗೆದುಕೊಂಡು ಬಂದು ಇಟ್ಟಿದ್ದಾರೆ. ಆ ಅರ್ಚಕನು ಆ ದೇವಸ್ಥಾನದ ಸುತ್ತಮುತ್ತಲು ಇದ್ದ ಜಮೀನನ್ನು ತೆಗೆದುಕೊಂಡು ಅದರ ಜೊತೆಗೆ ಆ ದಾರಿಯಲ್ಲಿ ಬರುವ ಎಲ್ಲಾ ಬಸ್ಸುಗಳನ್ನು ನಿಲ್ಲಿಸಿ ಹಣವನ್ನು ವಸೂಲು ಮಾಡುತ್ತಿದ್ದಾನೆ. ಸುಮಾರು ಒಂದು ಲಕ್ಷ ರೂಪಾಯಿ ಆಸ್ತಿ ಮಾಡಿದ್ದಾನೆ ಜೊತೆಗೆ ಪ್ರತಿವರ್ಷ ಅಲ್ಲಿ ಭಿಕ್ಷುಕರು ದೇವರನ್ನು ಕರೆದುಕೊಂಡು ಬರುತ್ತಾರೆ ಇದೇ ಒಂದು ರೀತಿ ಭಿಕ್ಷುಕರ ಜಾತ್ರೆ ನಡೆಯುತ್ತಿದೆ.

ದೇವರಿಗಾಗಿ ಭಿಕ್ಷೆ ಬೇಡುವುದು ಎಂದು ಯಾವ ಪುರಾಣದಲ್ಲಿ ಯಾವ ಇತಿಹಾಸದಲ್ಲಿ ಹೇಳಿದೆ? ನನ್ನನ್ನು ಕೇಳಿದರೆ, ಒಂದೊಂದು ಸಾರಿ ಮಾನ್ಯ ಬಸವಲಿಂಗಪ್ಪನವರು ಹೇಳಿದ ಹಾಗೆ ದೇವರುಗಳಿಗೆ ರೆಸ್ಟ್ ಕೊಡು ವುದು ಒಳ್ಳೆಯದು:

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಇಲ್ಲದಾಗ, ದೇವರ ಬಗ್ಗೆ ನನ್ನ ನಂಬಿಕೆ, ಧೋರಣೆಗಳು ವಿಸು ಇವೆ ಅವುಗಳ ಬಗ್ಗೆ ಮಾನ್ಯ ಸದಸ್ಯರನೇಕರು ಇಲ್ಲಿ ಮಾತನಾಡಿದ್ದಾರೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ನಾನು ತಾವು ಇದ್ದಾಗ ಹೇಳಿದ್ದೇನೆ,

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಪುಟ್ಟಸ್ವಾಮಯ್ಯನವರು ಹೇಳಿದ್ದಾರೆ. ಶ್ರೀಮಾನ್ ಮಂಜು ನಾಥ್ ಅವರು ಹೇಳಿದ್ದಾರೆ, ಅವರುಗಳು ನಾನು ಇಲ್ಲಿ ಇದ್ದಾಗ ಹೇಳಿದರೆ ಒಳ್ಳೆಯದು. ನಾನು ದೇವ ರಿಗೆ ರಜ ಕೊಡಿ ಎಂದು ಹೇಳಲಿಲ್ಲ. ಈ ಪಟಗಳು ಏನು ಇದ್ದಾವೆ ಅವುಗಳಿಗೆ ರಜ ಕೊಡಿ ಎಂದು ಹೇಳಿ ದ್ದೇನೆ. ದೇವರು ಇದ್ದಾನೆ, ಇಲ್ಲ ಎನ್ನುವುದರ ಬಗ್ಗೆ ಇದುವರೆಗೂ ನನ್ನ ಅಭಿಪ್ರಾಯವನ್ನು ವ್ಯಕ್ತ ಪಡಿಸಿಲ್ಲ. ಮುಂದೆ ನೋಡೋಣ.

ಶ್ರೀ ಎಚ್. ಎಸ್. ಸಿದ್ದಪ್ಪ.—ಈಗಲೇ ಹೇಳಲಿಕ್ಕ ತಯಾರಿಲ್ಲವೇ ?

ಶ್ರೀ ಬಿ. ಬಸವಲಿಂಗಪ್ಪ.—ಇಲ್ಲ ದೇವರ ಬಗ್ಗೆ ಹಾಗೆ ಹೇಳಿದ್ದೇನೆ. ಹೀಗೆ ಹೇಳಿದ್ದೇನೆ ಎನ್ನುವುದರ ಬಗ್ಗೆ ಹೇಳುವುದಾದರೆ ನಾನು ಎಂದು ಆ ರೀತಿ ಹೇಳಿದ್ದು ಇಲ್ಲ. ಅದರ ಬಗ್ಗೆ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿಲ್ಲ.

ಶ್ರೀ ಎಚ್. ಎಸ್, ಸಿದ್ದಪ್ಪ.—ಹೇಳಿದ್ದೀರೋ, ಬಿಟ್ಟಿದ್ದೀರೋ, ಅದು ಈ ಸಭೆಯಲ್ಲಿ ಅನೇಕ ಸಾರಿ ಪ್ರಸ್ತಾಪವಾಗಿದೆ. ನಾನು ಅವರ ಬಗ್ಗೆ ಏನೂ ಹೇಳಲಿಕ್ಕೆ ಹೋಗಿಲ್ಲ. ಬೆಗ್ಗರ್ ಆಕ್ಟಿನಲ್ಲಿ ಭಿಕ್ಷೆ ಮಾಡುವಂಥ ದೇವರುಗಳನ್ನು ಕಂಟ್ರೋಲ್ ಮಾಡುವುದಕ್ಕೆ ಅವಕಾಶ ಮಾಡುವುದಾದರೆ ನಿಜವಾಗಿ ಬೆಗ್ಗರ್ಸ್ ಅನ್ನು ನಿರ್ಮೂಲ ಮಾಡುತ್ತಾರೆ. ಅವರನ್ನು ಸುಧಾರಣೆ ಮಾಡುತ್ತಾರೆ ಎನ್ನುವ ವಿಶ್ವಾಸ ಹುಟ್ಟುತ್ತದೆ. ಇದರೊಳಗೆ, ಮಾನ್ಯ ಸಚಿವರಿಗೆ ನಾನು ಮನವಿ ಮಾಡುತ್ತೇನೆ, ಬಾವ ಚಿತ್ರಗಳನ್ನು ದೇವರು ಆಗಿ ಪರಿಣಮಿಸತಕ್ಕ ಕೆಲವು ಸಂದರ್ಭಗಳು ಇವೆ. ತಮಗೆ ಗೊತ್ತಿರಬಹುದು. ಶನಿದೇವರ ಫೋಟೋ ಅನ್ನು ಒಂದು ತಟ್ಟೆಯನ್ನು ಇಟ್ಟುಕೊಂಡು ದೇವರು ಎಂದು ಹೇಳುತ್ತಾರೆ, ಇಂಥ ಬೆಗ್ಗರ್ಸ್ ಅನ್ನು ಮೊದಲು ನಿರ್ಮೂಲ ಮಾಡಬೇಕು. ಶನಿದೇವರ ಫೋಟೋವನ್ನು ಬಸ್‌ಸ್ಟ್ಯಾಂಡಿನಲ್ಲಿ ಮತ್ತು ಮಾರ್ಕೆಟ್ಟಿನಲ್ಲಿ ಇಟ್ಟುಕೊಂಡು ಭಿಕ್ಷೆ ಮಾಡುತ್ತಿರುತ್ತಾರೆ. ದಯಮಾಡಿ ತಾವು ಏಳುವರೆ ಗಂಟೆಯಾದ ಮೇಲೆ ವಾಚ್ ಮಾಡಿದರೆ ಗೊತ್ತಾಗುತ್ತದೆ. ಈ ರೀತಿ ಭಿಕ್ಷೆ ಬೇಡುವವರು ಸೀದಾ ಸಾರಾಯಿ ಅಂಗಡಿಗೆ ಹೋಗು ತ್ತಾರೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ನಾನು ಮೊದಲೇ ಹೇಳಿದಂತೆ ಒಂದೊಂದು ಜಾತಿ ಯಲ್ಲಿ ವಿಧವಾದ ಬೆಗ್ಗರ್ಸ್ ಇದ್ದಾರೆ. ಲಿಂಗಾಯಿತರಲ್ಲಿ ಆಯ್ಯಪ್ಪ ಎಂಬುವರು ಭಿಕ್ಷೆಗೆ ಹೋಗುತ್ತಾರೆ; ಬ್ರಾಹ್ಮಣರಲ್ಲಿ ಶ್ರಾವಣ ಶನಿವಾರ ವೆಂಕಟೇಶಾಯ ಮಂಗಳಂ ಎಂದು ಹೋಗುತ್ತಾರೆ. ಹೀಗೆ ವಿಧವಿಧ ವಾದ ಜಾತಿಯಲ್ಲಿ ವಿಧವಿಧವಾದ ಬೆಗ್ಗರ್ಸ್ ಇದ್ದಾರೆ. ಬುಡಬುಡಕಿಯವರು ಎರಡು ಹಾಲದ ಹಕ್ಕಿ ನನಗೆ ಎಲ್ಲಾ ವಿಚಾರ ಹೇಳಿದೆ, ಅದನ್ನು ಹೇಳುತ್ತೇನೆ, ಬಟ್ಟೆ ಕೊಡಿ ಎಂದು ಭಿಕ್ಷೆ ಬೇಡುವವರು ಇದ್ದಾರೆ.

ಇನ್ನು ರಾಜಕೀಯ ಭಿಕ್ಷುಕರು ಬೇರೆ ಇದ್ದಾರೆ. ತಾವು ಪಿ.ಎಚ್.ಡಿ. ಓದಿ ಇರುವವರು ತಮಗೆ ಎಲ್ಲಾ ಗೊತ್ತಿದೆ. ಆದರೂ ಇನ್ನೊಂದು ಸಾರಿ ತಮಗೆ ಗೊತ್ತಿರುವ ವಿಷಯವನ್ನು ಹೇಳಿಬಿಟ್ಟು ತಮಗೆ ಜ್ಞಾಪಕ ಮಾಡೋಣ ಎಂದು ಹೇಳುತ್ತೇನೆ, ನಮ್ಮ ಮಗನಿಗೆ ಸೀಟು ಕೊಡಿಸಿ, ಅಪಾಯಿಂಟ್‌ಮೆಂಟ್ ಕೊಡಿಸಿ, ಎಂದು ಹೇಳುವುದು ಒಂದು ತರಹದ ಭಿಕ್ಷುಕತನ. ಅದು ಸರಿಯೋ ತಪ್ಪೋ ನನಗೆ ಗೊತ್ತಿಲ್ಲ. ತಮ್ಮ ಮುಖಾಂತರ ಒಂದು ವಿಷಯವನ್ನು ಮಂತ್ರಿಗಳಿಗೆ ತಿಳಿಸುವುದೇನೆಂದರೆ, ಈ ತಮ್ಮ ಸಮಗ್ರ

ಆಕ್ಟ ಏನು ಇದೆ, ಅದನ್ನು ನೋಡಿದರೆ ಇದರೊಳಗೆ ತಾವು ಕಮಿಟಿಗಳನ್ನು ಮಾಡಬೇಕು ಎಂದು ಹೇಳಿದ್ದೀರಿ. ಈ ಕಮಿಟಿಗಳಿಗೆ Government may nominate any Member ಎಂದು ಇದೆ ಎಷ್ಟು ಜನ ಸದಸ್ಯರನ್ನು ಬೇಕಾದರೂ ಈ ಕಮಿಟಿಗೆ ಹಾಕಬಹುದು ಈ ಕಮಿಟಿಯಿಂದ ಲೋಕಲ್ ಕಮಿಟಿಯನ್ನು ಮಾಡಿಕೊಳ್ಳಬಹುದು. ಕಾನೂನಿನಲ್ಲಿರತಕ್ಕ ಅಂಶವನ್ನು ಜಾರಿ ಮಾಡಿದಾಗ ದೊಡ್ಡ ಕಮಿಟಿ ಸಣ್ಣ ಕಮಿಟಿ, ಅದಕ್ಕಿಂತ ಸಣ್ಣ ಕಮಿಟಿ ಲೋಕಲ್ ಕಮಿಟಿಗಳನ್ನು ಮಾಡಿಕೊಳ್ಳಬಹುದು ನಮ್ಮಲ್ಲಿ ರಾಜಕೀಯ ಕಮಿಟಿಗಳು ಇವೆ, ಪ್ರದೇಶ್ ಕಾಂಗ್ರೆಸ್ ಕಮಿಟಿ ಎಂದು ಇದೆ. ಅವರಲ್ಲಿ ಯಾರಿಗೂ ಸೀಟು ಸಿಕ್ಕುವುದಿಲ್ಲವೋ, ಅವರನ್ನು ಬೈಗ್ಗರ್ಸ್ ಸೆಂಟ್ರಲ್ ರಿಲೀಫ್ ಕಮಿಟಿಯಲ್ಲಿ ಸದಸ್ಯರನ್ನಾಗಿ ಮಾಡುವುದು, ಜಿಲ್ಲಾ ಕಾಂಗ್ರೆಸ್ ಕಮಿಟಿಯಲ್ಲಿ ನಾಮಿನೇಟ್ ಮಾಡುವುದು ಇದೆ ತಾಲ್ಲೂಕು ಮಟ್ಟದಲ್ಲಿ ಮಂಡಳಿ ಕಾಂಗ್ರೆಸ್ ಕಮಿಟಿ ಇದೆ, ಅಲ್ಲಿಗೆ ಧುರೀಣರನ್ನು ಇಡಬೇಕು ಹೀಗೆ ನಿಮ್ಮ ಒಂದು ರಾಜಕೀಯ ಭಿಕ್ಷಕತನವನ್ನು ಗ್ರಾಮಾಂತರ ಮಟ್ಟದಿಂದ ಬೆಳೆಸಿಕೊಂಡು ಬರುತ್ತಿದ್ದೀರಿ. ಈಗ ಭಿಕ್ಷುಕರಿಗೆ ಒದಗಿಸುತ್ತಿರುವ ಆಹಾರದಲ್ಲಿ, ಅದರ ಅರ್ಧ ದುಡ್ಡನ್ನು ತಮ್ಮ ಅಧಿಕಾರಿಗಳು ತಿನ್ನುತ್ತಾರೆ. ಅಧಿಕಾರಿಗಳು ತಿನ್ನುವುದರ ಜೊತೆಗೆ ಖಾಸಗೀ ಜನರನ್ನು ನೀವು ಪಾಲುದಾರರನ್ನಾಗಿ ಮಾಡುತ್ತಿದ್ದೀರಿ. ಈ ಒಂದು ವ್ಯವಸ್ಥೆ ನಿಮ್ಮ ಒಂದು ಕಾನೂನಿನಿಂದ ಆಗುತ್ತದೆ ಎಂದು ನನಗೆ ಕಂಡುಬರುತ್ತದೆ ಎಂದು ಹೇಳದೆ ವಿಧಿಯಿಲ್ಲ. ಸನ್ಮಾನ್ಯ ಅಧ್ಯಕ್ಷರೇ ಈ ಜಾತೀಯ ಬಿಕ್ಷುಕರನ್ನು ಹತ್ತಿಕ್ಕುವ ಬಗ್ಗೆ ಒಂದು ನಿರ್ದಿಷ್ಟವಾದ ಕಾನೂನನ್ನು ಮಾಡದೇ ಹೋದರೆ ನೀವು ಜಾತೀಯ ಭಿಕ್ಷೆಯನ್ನು ಹೆಚ್ಚಾಗಿ ಬೆಳೆಸುತ್ತೀರಿ ಎಂದು ಹೇಳದೆ ವಿಧಿಯಿಲ್ಲ. ಡೆಫಿನೆಷನ್‌ನಲ್ಲಿ ಸೆಂಟ್ರಲ್ ಕಮಿಟಿಯಿಂದ ಲೈಸೆನ್ಸ್ ಪಡೆಯುವಬಗ್ಗೆ ಹೇಳಿದ್ದೀರಿ. ಈ ಒಂದು ಮಟ್ಟದ ಆಧಾರದ ಮೇಲೆ ಭಿಕ್ಷೆ ಮಾಡುವವರಿಗೆ ಅವಕಾಶವಿದೆ. ಇದು ಸರಿಯಲ್ಲ ಇದರಿಂದ ಈ ಲೈಸೆನ್ಸ್ ಅನ್ನು ತಂದು ಕೊಡುವುದಕ್ಕೆ ಒಬ್ಬ ಪುಡಾರಿಗೆ ಅವಕಾಶ ಮಾಡಿಕೊಟ್ಟಂಥಾಗುತ್ತದೆ. ಊರು ಊರಿಗೆ ಲೈಸೆನ್ಸ್ ಕೊಡಿಸುವ ಪುಡಾರಿಗಳು ಇರುತ್ತಾರೆ. ಬಸ್ ಲೈಸೆನ್ಸ್ ಕೊಡಿಸುವುದು, ಎಲ್ಲಾ ಹಂತದಲ್ಲಿಯೂ ಪುಡಾರಿಗಳು ಇದ್ದಾರೆ. ಇದರಿಂದ ಪುಡಾರಿಗಳನ್ನು ಕ್ರಿಯೇಟ್ ಮಾಡತಕ್ಕಂಥ ಅವಕಾಶವಾಗುತ್ತದೆ. ಇದು ತಪ್ಪು. ಬೆಗ್ಗರ್ ರಿಲೀಫ್ ಕಮಿಟಿಗೆ ಏನು ಸದಸ್ಯರನ್ನು ಹಾಕುತ್ತೀರಿ ಅವರು ನೀತಿಯುತವಾದ ಜನರಾಗಿರಬೇಕು. ರಾಜಕೀಯದಲ್ಲಿರುವವರನ್ನು ಇದರೊಳಗೆ ಹಾಕುವುದು ಬೇಡ ಇದು ಸಮಾಜ ಘಾತುಕತನ ಸಮಾಜದಲ್ಲಿರತಕ್ಕ ಅನ್ಯಾಯವನ್ನು ತಡೆಗಟ್ಟುವುದಕ್ಕೆ, ನಿಮ್ಮ ಕೃಪಾಶಯದಲ್ಲಿರತಕ್ಕವರನ್ನು ಕಮಿಟಿಗೆ ಹಾಕಿಬಿಟ್ಟು ಈ ಕಮಿಟಿಗಳನ್ನೇ ಹಾಳು ಮಾಡುವುದು ಬೇಡ.

ಕಟ್ಟ ಕಡೆಯದಾಗಿ, ವಿದ್ಯಾರ್ಥಿಗಳ ಭಿಕ್ಷೆಯ ಬಗ್ಗೆ ನನ್ನ ಗೆಳೆಯರು ಅನೇಕರು ಮಾತನಾಡಿದರು. ವಿದ್ಯಾರ್ಥಿಗಳಲ್ಲಿ ಭಿಕ್ಷುಕತನವನ್ನು ಬೆಳೆಸುವುದಕ್ಕೆ ಅವಕಾಶ ಕೊಡಬೇಡಿ ವಿದ್ಯಾರ್ಥಿ ಶಬ್ದವನ್ನು ಉಪಯೋಗಿಸಿ ಕೊಂಡು ಅವರು ಭಿಕ್ಷೆಯನ್ನು ಮಾಡುವುದಕ್ಕೆ ಅವಕಾಶ ಮಾಡುವುದಾದರೆ ನಮ್ಮ ಸಮಾಜ ಎಂಥ ದೌರ್ಬಲ್ಯ ಸ್ಥಿತಿಗೆ ಹೋಗುತ್ತದೆ. ಅಲ್ಲದೆ ವಿದ್ಯಾರ್ಥಿ ಜೀವನ ಪರ್ಯಂತ ಭಿಕ್ಷೆ ಮಾಡತಕ್ಕಂಥ ಸನ್ನಿವೇಶವೂ ಆಗುತ್ತದೆ. ಆದ್ದರಿಂದ ವಿದ್ಯಾರ್ಥಿಯ ವಿದ್ಯಾಭ್ಯಾಸ ಹಾಳಾಗುವುದರ ಜೊತೆಗೆ ಸಮಾಜದಲ್ಲಿ ಅನೀತಿಯನ್ನು ಉತ್ಪತ್ತಿ ಮಾಡತಕ್ಕಂಥ ವ್ಯವಸ್ಥೆಗೆ ತಾವು ಕೈ ಹಾಕಿದ್ದೀರಿ ಎಂದು ಹೇಳಬೇಕಾಗುತ್ತದೆ. ವಿದ್ಯಾರ್ಥಿಗಳು ಸಮಾಜದಲ್ಲಿ ಉತ್ತಮ ಪ್ರಜೆಗಳಾಗಬೇಕೆಂಬ ಆಸೆ ತಮಗಿದ್ದಲ್ಲಿ ದಯಮಾಡಿ ವಿದ್ಯಾರ್ಥಿಗಳು ಭಿಕ್ಷೆ ಮಾಡುವುದನ್ನು ತಪ್ಪಿಸಬೇಕು, ವಿದ್ಯಾರ್ಥಿ ದೆಶೆಯಲ್ಲಿ ವಿದ್ಯಾರ್ಥಿಗಳು ಭಿಕ್ಷೆ ಬೇಡಲು ಅವಕಾಶ ಕೊಡಬಾರದು ಎಂದು ಇಷ್ಟನ್ನು ಹೇಳಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

4-00 P.M.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜಪೇಟೆ).—ಮಾನ್ಯ ಅಧ್ಯಕ್ಷರೇ. ಬೆಗ್ಗರ್ ರಿಲೀಫ್ ಕೇಂಪ್ರಗನ್ನು ತೆರೆದುಭಿಕ್ಷುಕರಿಗೆ ಭಿಕ್ಷಾಟನೆ ಮಾಡಲು ಅನುಕೂಲಮಾಡಿ ಕೊಡುವುದಕ್ಕೆ ಒಂದು ಸೆಸ್ಸನ್ನು ಹಾಕಬೇಕು ಎಂದು ಒಂದು ಬಿಲ್ಲನ್ನು ನಮ್ಮ ಸಮಾಜ ಕಲ್ಯಾಣ ಇಲಾಖೆಯ ಸಚಿವರು ತಂದಿದ್ದಾರೆ. ಅವರು ಈ ರೀತಿಯ ಬಿಲ್ಲನ್ನು ತರುತ್ತಾರೆಂದು ನಾನು ತಿಳಿದಿರಲಿಲ್ಲ. ಸಮಗ್ರವಾಗಿ ಭಿಕ್ಷಾಟನೆಯನ್ನು ತಪ್ಪಿಸಲು ಬಿಲ್ಲನ್ನು ತರುವರೆಂದು ನಾನು ತಿಳಿದಿದ್ದೆ. ಬಹುಶಃ ಭಿಕ್ಷುಕರ ಸಂಖ್ಯೆಯನ್ನು ಜಾಸ್ತಿ ಮಾಡಲು ಸೆಸ್ಸನ್ನು ವಸೂಲು ಮಾಡುವರು, ಅವರ ಸಂಖ್ಯೆಯನ್ನು ಬೆಳೆಸಲು ಇದೊಂದು ರೀತಿಯ ಪ್ರಯತ್ನ. ಬೇರೆ ಜನರಿಂದ ಹಣ ವಸೂಲು ಮಾಡಿ ಭಿಕ್ಷುಕರನ್ನು ಬೆಳೆಸಲು ಹೊರಟಿದ್ದಾರೆ ನಿಮ್ಮದು ಸಮಾಜವಾದಿ ಸರಕಾರ. ಭಿಕ್ಷುಕ ವೃತ್ತಿಯನ್ನು ನಿರ್ಮೂಲ ಮಾಡಬೇಕಾದ್ದು ನಿಮ್ಮ ಕರ್ತವ್ಯ. ಭಿಕ್ಷುಕರಲ್ಲಿ ಬಹುಶಃ ಎರಡು ವರ್ಗವಿದೆ. ಒಂದು ಗೌರವಸ್ಥ ಭಿಕ್ಷುಕರು, ಇನ್ನೊಂದು ಗೌರವಸ್ಥರಲ್ಲದ ಭಿಕ್ಷುಕರು. ಇದರ ಅರ್ಥ ಗೌರವಸ್ಥ ಭಿಕ್ಷುಕರು ಹಣ ವಸೂಲು ಮಾಡಲು ಯೋಚನೆ ಮಾಡುವುದಕ್ಕೆ ಬೇರೆ ವಿಧಾನವಿದೆ. ಡೊನೇಷನ್ ರೂಪವಾಗಿ ಅವರು ಜನರಿಂದ ಹಣ ವಸೂಲು ಮಾಡುವರು. ರಾಜಕಾರಣಿಗಳು, ಮಂತ್ರಿ

(ಶ್ರೀ ವಾಟಾಳ್ ನಾಗರಾಜ್)

ಗಳು, ಸೇವಾಕರ್ತರು ಮುಂತಾದವರು ಗೌರವದಿಂದ ಒಂದು ರೀತಿಯಲ್ಲಿ ಹಣ ಪಡೆಯುತ್ತಾರೆ. ಉಳಿದವರು ರಸ್ತೆಗಳಲ್ಲಿ ೫ ಪೈಸೆ ೧೦ ಪೈಸೆ ಕೊಡಿ ಎಂದು ಕಾಡುವವರು. ಇದು ಎರಡನೆಯ ವರ್ಗ. ಇವಕ್ಕೆ ನಾವೂ ನೀವೂ ಎಲ್ಲರೂ ಭಾಗಿಯಾಗಿದ್ದೇವೆ. ಭಿಕ್ಷಾಟನೆ ತಪ್ಪಿಸಲು ಸಮಿತಿ ಮಾಡುತ್ತೇವೆ, ರಿಲೀಫ್ ಕೇಂದ್ರಗಳನ್ನು ಸ್ಥಾಪಿಸುತ್ತೇವೆ, ಜನರಿಂದ ಸೆಸ್ಸನ್ನು ವಸೂಲು ಮಾಡುತ್ತೇವೆ ಎಂದು ಹೇಳುವುದನ್ನು ನೋಡಿದರೆ ಸರಕಾರ ಭಿಕ್ಷಾಟನೆಗೆ ಬೆಂಬಲ ಕೊಟ್ಟ ಹಾಗಾಗುತ್ತದೆ. ಈ ರೀತಿ ಸಮಾಜವಾದಿ ಸರಕಾರ ಮಾಡುವುದು ಸರಿಯೇ ಎಂದು ವಿಮರ್ಶಿಸಬೇಕಾಗಿದೆ. ಸರಕಾರ ಯಾವಾಗಲೂ ಒಂದು ಕ್ರಾಂತಿಕಾರಕವಾದ ಕೆಲಸ ಮಾಡಬೇಕು. ಸಂಪೂರ್ಣವಾಗಿ ಇಡೀ ರಾಜ್ಯದಲ್ಲಿ ಭಿಕ್ಷಾಟನೆಯನ್ನು ತೊಡೆದು ಹಾಕಲು ಒಂದು ಸಮಗ್ರವಾದ ಬಿಲ್ಲನ್ನು ತಂದಿದ್ದರೆ ನಾನು ನಿಜವಾಗಿಯೂ ಅದನ್ನು ಸ್ವಾಗತಿಸುತ್ತಿದ್ದೆ. ಈ ದಿವಸ ಹಾಗೆ ಮಾಡದೆ ಭಿಕ್ಷಾಟನೆ ಜಾಸ್ತಿಯಾಗಲು ಅವಕಾಶ ಕೊಡುತ್ತಿದ್ದೀರಿ. ಇದನ್ನು ಬಹಳ ದುಃಖದಿಂದ ಹೇಳಬೇಕಾಗಿದೆ. ಇಂದು ಭಿಕ್ಷುಕರೇನಿದ್ದಾರೆ ಅವರಿಗೆ ಭಿಕ್ಷೆ ಕೊಡುವವರು ಯಾರು ? ಮನೆ ಮುಂದೆ ಅವರು ಬಂದಾಗ ಮಕ್ಕಳು ತಿಂದು ಬಿಟ್ಟ ಎಂಜಲನ್ನ, ಮನೆಯವರು ತಿಂದು ಬಿಟ್ಟ ಪದಾರ್ಥ ಹಳಸಿದ ಪದಾರ್ಥಗಳು ಮುಂತಾದವನ್ನು ಇಂದು ಭಿಕ್ಷುಕರಿಗೆ ಕೊಡುತ್ತಿದ್ದಾರೆ. ಭಿಕ್ಷ ಎಂಬ ಪದವೇ ಸಮಾಜದಲ್ಲಿರಬಾರದು. ಭಿಕ್ಷೆ ಎಂಬ ಪದವನ್ನು ಕಿತ್ತೆಸೆಯಬೇಕು. ಇದರ ಬಗ್ಗೆ ಸಮಗ್ರವಾದ ಚಳವಳಿ ನಡೆಯಬೇಕಾಗಿದೆ, ಸರಕಾರ ಇದಕ್ಕೆ ಬೆಂಬಲ ನೀಡಬೇಕಾಗಿದೆ. ಶ್ರೀ ಪ್ರಭಾಕರರವರು ಮಾತನಾಡುವಾಗ ತಿಂಡಿ ತಿನ್ನುವಾಗ, ಊಟ ಮಾಡುವಾಗ, ರಸ್ತೆಯಲ್ಲಿ ಹೋಗುವಾಗ ಭಿಕ್ಷುಕರು ಬಂದು ಕಾಡುವರು ಎಂದು ಹೇಳಿದರು. ಭಿಕ್ಷೆ ಕೇಳಿದರೆ ಕೊಡುವುದು ಕೇವಲ ಒಂದು ಪೈಸೆ ಮಾತ್ರ. ಅದನ್ನು ತೆಗೆದುಕೊಂಡು ಭಿಕ್ಷುಕರು ಜೀವನ ಮಾಡಲು ಸಾಧ್ಯವೇ ? ಸಾಧ್ಯವಿಲ್ಲ. ಇದಕ್ಕಾಗಿ ಹೇಳುವುದು ಭಿಕ್ಷೆ ಎಂಬ ಪದವನ್ನು ಕಿತ್ತು ಎಸೆಯಬೇಕು ಎಂದು. ಶ್ರೀ ಬಸವಲಿಂಗಪ್ಪನವರು ಮಲ ಹೊರುವ ಪದ್ಧತಿಯನ್ನು ರದ್ದು ಮಾಡಿದ್ದೇವೆಂದು ಧೈರ್ಯವಾಗಿ ಹೇಳಿದರು. ೨೫ ವರ್ಷದ ಹಿಂದೆ ಮಹಾತ್ಮ ಗಾಂಧಿಯವರೇನು ಹೇಳುತ್ತಿದ್ದರೋ ಅದನ್ನು ಇಂದು ಮಾಡಿದ್ದಾರೆ. ಕೆಲವು ವಿಚಾರಗಳಲ್ಲಿ ವಾದ ವಿವಾದ ಇದೆ. ಅವರು ದೇವರಿಲ್ಲವೆಂದು ಹೇಳುವರು, ಕೆಲವರು ಅದನ್ನು ಒಪ್ಪುವುದಿಲ್ಲ. ಸಮಾಜ ಕಲ್ಯಾಣ ಇಲಾಖೆಯನ್ನು ವಹಿಸಿರುವಾಗ ಮಾನ್ಯ ಸಚಿವರು ಭಿಕ್ಷೆಗೆ ಅವಕಾಶವಿಲ್ಲದಂತೆ ಮಾಡಬೇಕಾಗಿತ್ತು. ಅವರೇ ಭಿಕ್ಷೆಗೆ ಹೊರಟಿದ್ದಾರೆ, ಜನರ ಹತ್ತಿರ ಸೆಸ್ ವಸೂಲು ಮಾಡಲು ಹೊರಟಿದ್ದಾರೆ. ಇದನ್ನು ನೋಡಿ ಕಣ್ಣೀರಿಡಬೇಕಾಗಿದೆ. ಭಿಕ್ಷುಕರು ಭಿಕ್ಷ ಬೇಡಲು ಅವಕಾಶ ಮಾಡಲು ಸೆಸ್ ಹಾಕುತ್ತಿದ್ದಾರೆ. ಭಿಕ್ಷಕರಿಂದ ಪೋಲೀಸರಿಗೆ ಮಾಮೂಲ ಭಿಕ್ಷುಕರಿಂದ ಅವರು ಭಿಕ್ಷೆ ಪಡೆಯುವರು. ದೇವಸ್ಥಾನದ ಮುಂದೆ ಮಠದ ಮುಂದೆ ಮನೆ ಮುಂದೆ ಭಿಕ್ಷ ಮಾಡಿ ತಂದು ಒಂದೊಂದು ಪೈಸೆಯನ್ನೂ ಕೊಡಿಟ್ಟಿರುವುದರಲ್ಲಿ ಪೋಲೀಸಿನವರಿಗೆ ಭಿಕ್ಷುಕರು ಲಂಚ ಕೊಡಬೇಕು. ಪೋಲೀಸರೂ ಕೂಡ ಒಂದು ರೀತಿಯಲ್ಲಿ ಭಿಕ್ಷುಕರು. ಹೀಗೆ ವಿವಿಧ ರೂಪದಲ್ಲಿ ಭಿಕ್ಷುಕ ವರ್ಗವಿದೆ. ಬೀದಿಯಲ್ಲಿ ಜನರ ಮುಂದೆ ನಿಂತು ಕೈಚಾಚಿ ಕೇಳುವವರದು ಒಂದು ವರ್ಗವಾದರೆ ಇನ್ನೊಂದು ವರ್ಗದವರು ಜರಿ ಪೇಟ ಕೋಟು ಹಾಕಿಕೊಂಡು ಗಂಭೀರವಾಗಿ ಗುಟ್ಟಾಗಿ ಡೊನೇಷನ್ ವಸೂಲು ಮಾಡುವರು, ಅವರು ಏರ್‌ಕಂಡೀಷನ್ ರೂಮುಗಳಲ್ಲಿ ಕುಳಿತು ರಶೀತಿ ಕೊಡುವರು. ಅವರು ಗೌರವಸ್ಥ ಭಿಕ್ಷುಕರು. ರಸೀದಿ ಕೊಡದೆ ವಸೂಲು ಮಾಡುವುದು ಒಂದು ರೀತಿಯ ಭಿಕ್ಷಾಟನೆ ಇದೆ.

ಉಪಾಧ್ಯಕ್ಷರು.—ಇದರ ಮೇಲೆ ಒಂದು ದೊಡ್ಡ ಗ್ರಂಥವನ್ನೇ ಬರೆಯಬಹುದು.

ಶ್ರೀ ವಾಟಾಳ್ ನಾಗರಾಜ್.—ಹೌದು ಶ್ರೀ ಮಲ್ಲಿಕಾರ್ಜುನಸ್ವಾಮಿಯವರ ಬಗ್ಗೆ ನನಗೆ ಗೌರವವಿದೆ, ಅವರು ಕ್ರಾಂತಿಕಾರಕವಾದ ಒಂದು ಬಿಲ್ಲನ್ನು ಈ ಬಗ್ಗೆ ತರಬೇಕಾಗಿತ್ತು. ಈಗ ಸೆಸ್ಸನ್ನು ವಸೂಲು ಮಾಡಲು ಹೊರಟಿರುವುದರಿಂದ ನಮ್ಮ ತಲೆಯಮೇಲೆ ಹೊರೆ ಬೀಳುತ್ತದೆ, ಇದರಲ್ಲಿ ಅನುಮಾನವಿಲ್ಲ. ಆದುದರಿಂದ ದಯಮಾಡಿ ಈ ಬಿಲ್ಲನ್ನು ಹಿಂದಕ್ಕೆ ತೆಗೆದುಕೊಂಡು ಮುಂದೆ ಸೇರುವ ಶಾಸನಸಭೆಯ ಅಧಿವೇಶನದಲ್ಲಿ ಒಂದು ಸಮಗ್ರವಾದ ಹೊಸ ಬಿಲ್ಲನ್ನು ತಂದು ಸಂಪೂರ್ಣವಾಗಿ ಭಿಕ್ಷಾಟನೆಯನ್ನು ನಿಲ್ಲಿಸುವುದಾಗಿ ಅವರು ಹೇಳಲಿ. ಈಗ ಆರೋಗ್ಯವಂತರೂ ಕೂಡ ಭಿಕ್ಷೆ ಮಾಡುವರು. ನಾನು ಹೇಳುವುದನ್ನೆಲ್ಲಾ ಈ ಮಸೂದೆ ವ್ಯಾಪ್ತಿಯಲ್ಲಿ ತರುವುದಕ್ಕಾಗುವುದಿಲ್ಲವೆಂದು ಮಾನ್ಯ ಉಪಾಧ್ಯಕ್ಷರು ಹೇಳಬಹುದು. ನಾನು ಹೇಳುತ್ತಿರುವುದು ಇದನ್ನು ಸಂಪೂರ್ಣವಾಗಿ ನಿಲ್ಲಿಸುವುದಕ್ಕೆ ಸರ್ವರೂ ಪ್ರಯತ್ನ ಮಾಡಬೇಕೆಂಬುದು ನನ್ನ ವಾದ. ಈ ಭಿಕ್ಷಾಟನೆಯಲ್ಲಿ ಅನೇಕ ವರ್ಗಗಳು ಹುಟ್ಟಿಕೊಂಡಿವೆ. ಕೆಲವರು ಇಲ್ಲಿ ಮಂತ್ರಿಮಂಡಲವನ್ನು ಉರುಳಿಸುವುದಕ್ಕಾಗಿ ಒಂದು ರೀತಿಯಲ್ಲಿ ಭಿಕ್ಷೆ ಎತ್ತುತ್ತಿದ್ದಾರೆ, ಇನ್ನು ಕೆಲವರು ಚುನಾವಣೆಗಳಲ್ಲಿ ಗೆದ್ದು ಬರುವುದಕ್ಕೆ ಭಿಕ್ಷೆ ಎತ್ತುತ್ತಾರೆ. ಮತ್ತೆ ಕೆಲವರು ಮಂತ್ರಿ ಮಂಡಲವನ್ನು ರಚಿಸುವುದಕ್ಕಾಗಿ ಭಿಕ್ಷೆ ಎತ್ತುತ್ತಾರೆ, ಹೀಗೆ ಇದರಲ್ಲಿ ನಾನಾ ರೂಪಗಳಿವೆ.

ಒಬ್ಬ ಮಾನ್ಯ ಸದಸ್ಯರು.—ತಾವು ಚುನಾವಣೆ ಕಾಲದಲ್ಲಿ ಏನೂ ಭಿಕ್ಷೆ ಎತ್ತುವುದಿಲ್ಲವೋ ?

ಶ್ರೀ ವಾಟಾಳ್ ನಾಗರಾಜ್.—ನಾವೊಂದು ರೀತಿಯಲ್ಲಿ ಎತ್ತುತ್ತಿದ್ದೇವೆ, ಆಡಳಿತಪಕ್ಷದವರು ಒಂದು ರೀತಿಯಲ್ಲಿ ಎತ್ತುತ್ತಿದ್ದಾರೆ, ಆದುದರಿಂದ ಇದನ್ನು ಕೇವಲ ರಸ್ತೆಯಲ್ಲಿ ಕೈಚಾಚತಕ್ಕ ಆ ಒಂದು ವರ್ಗಕ್ಕೆ ಮಾತ್ರ ಸೀಮಿತ ಮಾಡಬಾರದೆಂಬುದು ನನ್ನ ವಾದ.

MR. DEPUTY SPEAKER —By referring to all kinds of "beggary" the hon. Member is transgressing the limits of the present Bill.

ಶ್ರೀ ವಾಟಾಳ್ ನಾಗರಾಜ್.—ನಾನು ಪ್ರಾರ್ಥನೆ ಮಾಡಿಕೊಳ್ಳುವುದಿಷ್ಟೇ. ಈ ಭಿಕ್ಷಾಟನೆ ಯಾರೇ ಮಾಡಲಿ ಅದು ಇಡೀ ಸಮಾಜಕ್ಕೇ ಅಗೌರವವಾದ್ದು, ಅದು ಇಡೀ ಸಮಾಜಕ್ಕೇ ಕಳಂಕ ತರುವುದಾಗಿದೆ. ಹಾಗೇ ಈ ಭಿಕ್ಷಾಟನೆಯನ್ನು ಅದರ ಎಲ್ಲ ರೂಪುಗಳಲ್ಲೂ ತಡೆಗಟ್ಟದಿದ್ದರೆ ಇದು ಸಮಾಜವಾದಿ ಸರ್ಕಾರ ಎನ್ನಿಸಿ ಕೊಳ್ಳುವುದಕ್ಕೆ ಆಧಾರವಿರುವುದಿಲ್ಲ ಎಂದು ಹೇಳಿ ನಾನು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಜಿ. ಚನ್ನಪ್ಪ (ಮಾಗಡಿ) :— ಮಾನ್ಯ ಉಪಾಧ್ಯಕ್ಷರೇ :

ಈಗಾಗಲೇ ಭಿಕ್ಷಾಟನೆಯ ಮಸೂದೆಯ ಬಗ್ಗೆ ಮಾತನಾಡಿರತಕ್ಕ ಎಲ್ಲಾ ಸ್ನೇಹಿತರೂ ಯಾವ ಯಾವ ರೀತಿಯಲ್ಲಿ ದೇಶದಲ್ಲಿ ಈ ಭಿಕ್ಷೆ ಎನ್ನುವುದು ನಡೆಯುತ್ತಿದೆ ಎಂಬುದನ್ನು ಕೂಲಂಕಷವಾಗಿ ಚರ್ಚೆ ಮಾಡಿ ಎಲ್ಲ ವಿವರಣೆಗಳನ್ನೂ ಕೊಟ್ಟಿದ್ದಾರೆ. ಈ ಭಿಕ್ಷಾಟನೆ ಹೋಗಬೇಕು ಎಂಬುದರಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲ. ಅದು ಇಡೀ ದೇಶಕ್ಕೇ ಒಂದು ಕಳಂಕ ತರತಕ್ಕ ಒಂದು ವೃತ್ತಿ. ಈ ಭಿಕ್ಷಾಟನೆಯಿಂದಲೇ ದೇಶದಲ್ಲಿ ಈ ದರೋಡೆ, ಕಳ್ಳತನ ಮತ್ತು ಮೋಸ, ದಗಾ ಇತ್ಯಾದಿಗಳೆಲ್ಲಾ ನಡೆಯುತ್ತಿವೆ. ಆದುದರಿಂದ ಇದನ್ನು ಕಂಪ್ಲೀಟಾಗಿ ತೆಗೆದು ಹಾಕಬೇಕಾದ್ದು ಅತ್ಯಗತ್ಯ. ಇದನ್ನು ಸಂಪೂರ್ಣವಾಗಿ ನಿರ್ಮೂಲ ಮಾಡದ ವಿನಾ ಇಲ್ಲಿ ಜನರು ಸುಖವಾಗಿ ನೆಮ್ಮದಿಯಿಂದ ಬಾಳುವುದಕ್ಕಾಗುವುದಿಲ್ಲ ಆದರೆ ಈ ದಿವಸ ಎಲ್ಲಾ ವರ್ಗದಲ್ಲೂ ಈ ಭಿಕ್ಷುಕ ವೃತ್ತಿ ಹೆಚ್ಚುತ್ತಿರುವುದಾಗಿ ಕಂಡು ಬರುತ್ತಿದೆ. ಆದರೆ ಈ ಮಸೂದೆಯ ವ್ಯಾಪ್ತಿ ಇಂದ ಸಣ್ಣ ಸಣ್ಣ ಮಕ್ಕಳನ್ನು ತಪ್ಪಿಸಿರತಕ್ಕದ್ದು ಸರಿಯಲ್ಲ. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ ಎಂಬ ಗಾದೆಯೇ ನಮ್ಮಲ್ಲಿದೆ. ಹಿರಿಯರಾಗಿರತಕ್ಕವರು ಈ ಮಕ್ಕಳಿಗೆ ಈ ಚಿಕ್ಕ ವಯಸ್ಸಿನಿಂದಲೇ ಭಿಕ್ಷೆ ಎತ್ತುವುದನ್ನು ಅಭ್ಯಾಸ ಮಾಡಿಸುತ್ತಿರುವುದು ಖಂಡನೀಯವಾದ್ದು. ಇದರಿಂದ ಈ ದಿವಸ ಕೆಲವೊಂದು ವರ್ಗದ ಜನ ಕೈಗೆ ಸಿಕ್ಕಿದ ಮಕ್ಕಳನ್ನೆತ್ತಿಕೊಂಡು ಹೋಗಿ ಅವರ ಕೈಕಾಲುಗಳನ್ನು ಕಣ್ಣುಗಳನ್ನು ತೆಗೆದು ಹಾಕಿ ಅವರಿಗೆ ಭಿಕ್ಷ ಎತ್ತಲು ಅಂಗವಿಕಲರನ್ನಾಗಿ ಮಾಡುವ ಕೆಲಸಗಳು ನಡೆಯುತ್ತಿದೆಯೆಂದು ನಾನು ಕೇಳುತ್ತಿದ್ದೇನೆ. ಈ ವಿಚಾರ ಇಲ್ಲಿ ಇನ್ನೂ ಅನೇಕ ಮಾನ್ಯ ಸದಸ್ಯರ ಗಮನಕ್ಕೂ ಕೂಡ ಬಂದಿರಬಹುದು. ಆದಕಾರಣ ಅಲ್ಲಿ ೧೬ ವರ್ಷ ಮತ್ತು ೧೮ ವರ್ಷದ ವಯೋಮಿತಿಯೆನ್ನೇನು ಹಾಕಿದ್ದಾರೆ ಇದನ್ನು ತೆಗೆಯಬೇಕು. ಚಿಕ್ಕ ವಯಸ್ಸಿನವರು ಭಿಕ್ಷಾಟನೆ ಮಾಡಿದರೆ ಅದು ಶಿಕ್ಷಾರ್ಹವಾಗುವುದಿಲ್ಲ ಎಂಬುದು ಸರಿಯಲ್ಲ. ಚಿಕ್ಕ ವಯಸ್ಸಿನ ಮಕ್ಕಳನ್ನು ವೃತ್ತಿ ಶಿಕ್ಷಣದ ಶಾಲೆಗಳಿಗೆ ಸೇರಿಸಿ ಅವರಿಗೆ ಅವರ ಬುದ್ಧಿಗೆ ತಕ್ಕಂತೆ ಶಿಕ್ಷಣ ಕೊಟ್ಟು ಅವರಿಗೊಂದು ಉತ್ತಮ ಜೀವನ ನಡೆಸುವುದನ್ನು ಕಲಿಸದೇ ಬಾಲ್ಯದಲ್ಲಿಯೇ ಈ ಮಕ್ಕಳನ್ನು ಭಿಕ್ಷೆ ಮಾಡಲು ಬಿಡುವಂತೆ ಮಾಡಿರುವುದು ಅಕ್ಷಮ್ಯವಾದದ್ದು. ಇವರಿಗೆ ಯಾವುದಾದರೂ ಕೈಗಾರಿಕೆ ಅಥವಾ ಬೇಸಾಯ ವೃತ್ತಿಗಳಲ್ಲಿ ತೊಡಗುವಂತೆ ಮಾಡುವುದಲ್ಲದೆ ಈ ಭಿಕ್ಷಾಟನೆ ಎಂಬುದೊಂದು ಹೀನಾಯವಾದ ವೃತ್ತಿ ಎಂಬ ಭಾವನೆ ಅವರಲ್ಲಿ ಬೆಳೆಯುವಂತೆ ಮಾಡಬೇಕು. ಇಲ್ಲಿ ಭಿಕ್ಷವೆತ್ತುವವರಿಗೆ ೩ ತಿಂಗಳು ಶಿಕ್ಷೆ ಮತ್ತು ೩೦೦ ರೂ. ಜುಲ್ಮಾನೆಗಳನ್ನು ಹೇಳಿದ್ದಾರೆ. ಅಷ್ಟೆ ಅದನೆ ಸಾಲದು. ಬಸ್ಸುಗಳಲ್ಲಿ ಟಿಕೆಟ್ಟು ತೆಗೆದು ಕೊಡದಿರುವ ಕಂಡಕ್ಟರು ಹೇಗೆ ಶಿಕ್ಷಾರ್ಹನೋ ಹಾಗೆ ಟಿಕೆಟ್ ಇಲ್ಲದೆ ಪ್ರಯಾಣಿಕನು ಶಿಕ್ಷಾರ್ಹನೆಂದು ಹೇಳುವಂತೆ ಇಲ್ಲಿ ಭಿಕ್ಷೆ ನೀಡತಕ್ಕವರೂ ಕೂಡ ಶಿಕ್ಷಾರ್ಹರು ಎಂದು ಮಾಡಿದರೆ ಇದು ಸರಿಯಾದ್ದೆಂದು ಕಾಣುತ್ತದೆ.

ಇನ್ನು ಬೆಂಗಳೂರು ಪಕ್ಕದಲ್ಲಿ ಒಂದು ಬೆಗ್ಗರ್ಸ್ ಕಾಲೋನಿ ಎಂಬುದಿದೆ. ಅದಕ್ಕೆ ಹಿಂದೆ ಅಲ್ಲಿ ಒಂದು ಕೆರೆಯ ಹಿಂಭಾಗದಲ್ಲಿದ್ದ ಒಳ್ಳೆಯ ಫಲವತ್ತಾದ ಭೂಮಿಯನ್ನು ರೈತರಿಂದ ತಪ್ಪಿಸಿ ಅದನ್ನು ಅಕ್ವಯಿರ್ ಮಾಡಿಕೊಂಡು ಈ ಕಾಲೋನಿಗೆ ಕೊಟ್ಟರೆ ಅವರು ಅದನ್ನು ಬಳಸದೆ ಹಾಗೇ ಪಾಳು ಬಿಟ್ಟಿದ್ದಾರೆ. ಬೆಳೆಯುತಕ್ಕವನನ್ನೂ ತಪ್ಪಿಸಿದ್ದಾಯಿತು. ಇವರೂ ಬೆಳೆಯುತ್ತಿಲ್ಲ. ಹೀಗೆ ಆಗಬಾರದು. ಕೆಲವು ಚಿಕ್ಕವಯಸ್ಸಿನ ಹೆಣ್ಣು ಮಕ್ಕಳನ್ನು ಭಿಕ್ಷೆ ಎತ್ತುವುದಕ್ಕೆ ಬಿಟ್ಟಿರುವುದರಿಂದ ಅಲ್ಲಿ ಕೆಲವು ವಯಸ್ಸಾದ ತರುಣರು ಅವರಿಗೆ ಮೂರು ಕಾಸು ಆರು ಕಾಸುಗಳನ್ನು ಕೊಟ್ಟು ಅಲ್ಲಿ ಹೇಯವಾದ ಮಾತುಗಳನ್ನಾಡು

ತ್ತಿರುವುದನ್ನು ನಾನು ನೋಡಿದ್ದೇನೆ. ಇದರಿಂದ ದೇಶದಲ್ಲಿ ವ್ಯಭಿಚಾರ ಬೆಳೆಯುವುದಕ್ಕೆ ಅಸ್ಪದವಾಗುತ್ತದೆ. ಆದುದರಿಂದ ಭಿಕ್ಷ ಮಾಡತಕ್ಕವರಿಗೆ ಮತ್ತು ಕೊಡತಕ್ಕವರಿಬ್ಬರಿಗೂ ಉಗ್ರ ಶಿಕ್ಷೆಯಾಗಬೇಕೆಂದು ನಾನು ಸಲಹೆ ಮಾಡುತ್ತೇನೆ. ಆದ್ದರಿಂದ ಅಂಥ ಒಂದು ಸಮಗ್ರ ಬಿಲ್ಲನ್ನು ತರಬೇಕಾದ್ದು ಯೋಗ್ಯ. ಈ ತಿರುಪೆಯಿಂದ ದೇಶಕ್ಕೆ ಕೀರ್ತಿ ಬರುವುದಿಲ್ಲ ಇದನ್ನು ಸಂಪೂರ್ಣವಾಗಿ ತಪ್ಪಿಸಬೇಕೆಂದು ಹೇಳಿ ಈ ನಾಲ್ಕು ಮಾತುಗಳನ್ನು ಆಡಲು ನನಗೆ ಅಧ್ಯಕ್ಷರು ಅವಕಾಶ ಮಾಡಿಕೊಟ್ಟಿದ್ದಕ್ಕೆ ಅವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ (ಸಮಾಜ ವಿಕಾಸ ಮತ್ತು ಸಮಾಜ ಕಲ್ಯಾಣ ಶಾಖೆಗಳ ಮಂತ್ರಿಗಳು) —

ಮಾನ್ಯ ಉಪಾಧ್ಯಕ್ಷರೇ: ನೆನ್ನೆಯ ದಿವಸ ಈ ಒಂದು ಮಸೂದೆಯನ್ನು ಇಲ್ಲಿ ಮಂಡಿಸಿದ ಮೇಲೆ ಇದರ ಮೇಲೆ ಚರ್ಚೆಗಳು ಪ್ರಾರಂಭವಾಗಿ ಮತ್ತೆ ಅವು ಈ ದಿವಸಕ್ಕೂ ಮುಂದುವರಿದಿವೆ. ಈ ಘನ ಮನೆಯ ಸದಸ್ಯರು ಈ ಮಸೂದೆಯ ಮೇಲೆ ಚರ್ಚೆ ಮಾಡತಕ್ಕ ಕಾಲದಲ್ಲಿ ಈ ಮಸೂದೆಯ ವ್ಯಾಪ್ತಿಯಲ್ಲಿ ಬರುವ ಮತ್ತು ಬಾರದಿರುವ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಹಾಗೂ ಅವುಗಳನ್ನು ಅವರು ಬಹಳ ಮನರಂಜಿತವಾಗಿ ಹೇಳಿದ್ದಾರೆ. ಮಾರ್ಚಿ ತಿಂಗಳಿನಲ್ಲಿ ಈ ಸಭೆಯಲ್ಲಿ ಈ ಒಂದು ಮಸೂದೆಯನ್ನು ತೆಗೆದುಕೊಂಡು ಬಂದಿದ್ದೆವು. ನಾನು ನಿನ್ನೆ ದಿವಸ ಈ ಮಸೂದೆಯನ್ನು ಮತ್ತೆ ಈ ಸಭೆಯ ಮುಂದೆ ಮಂಡನೆ ಮಾಡಿದಂಥ ಸಂದರ್ಭದಲ್ಲಿ ಎರಡು ಮಾತುಗಳನ್ನು ಹೇಳುತ್ತಾ ಇದ್ದೆ. ಈ ಒಂದು ಮಸೂದೆ ಏನಿದೆಯೋ ಇದರಲ್ಲಿ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಂತೆ ಬೊಂಬಾಯಿ, ಹೈದರಾಬಾದ್ ಮದ್ರಾಸ್ ಹಾಗೂ ಮೈಸೂರಿನ ಭಾಗಗಳಲ್ಲಿರತಕ್ಕಂಥ ನಾಲ್ಕು ತರಹ ಕಾನೂನುಗಳು ಏನಿದೆಯೋ ಅವೆಲ್ಲವನ್ನೂ ಸೇರಿಸಿ ಒಂದು ಸಮಗ್ರವಾದಂಥ ಕಾನೂನನ್ನು ನಮ್ಮ ರಾಜ್ಯದಲ್ಲಿ ಜಾರಿಗೆ ತೆಗೆದುಕೊಂಡು ಬರುವುದಕ್ಕೋಸ್ಕರ ಒಂದು ಮೂಲೋದ್ದೇಶ ಆಳವಡಿಸಿದೆ. ಆದ್ದರಿಂದ ಇದೇನೂ ಹೊಸ ಕಾನೂನಲ್ಲ. ೧೯೪೪ನೇ ಇಸವಿಯಲ್ಲಿ ಹಳೆಯ ಮೈಸೂರಿನಲ್ಲಿ ಕೇವಲ ಈ ಒಂದು ಭಾಗದಲ್ಲಿ ಈ ಒಂದು ಕಾನೂನು ಜಾರಿಯಲ್ಲಿತ್ತು. ಇನ್ನುಳಿದ ಮೂರು ಭಾಗಗಳಲ್ಲಿಯೂ ಕೂಡ ಅಂದರೆ ಬೊಂಬಾಯಿನಲ್ಲಿ ೧೯೪೫ನೇ ಇಸವಿಯಲ್ಲಿ, ಹೈದರಾಬಾದ್‌ನಲ್ಲಿ ೧೯೫೦ನೇ ಇಸವಿಯಲ್ಲಿ ಹಾಗೂ ಮದ್ರಾಸ್‌ನಲ್ಲಿ ೧೯೪೫ನೇ ಇಸವಿಯಲ್ಲಿ ಈ ಬಗ್ಗೆ ಮಾಡಿರತಕ್ಕ ಕೆಲವು ಕಾನೂನುಗಳು ಇದ್ದುವು. ಇದರ ಜೊತೆಗೆ ನಮ್ಮ ರಾಜ್ಯದಲ್ಲಿಯೂ ಕೂಡ ೧೯೬೧ನೇ ಇಸವಿಯಲ್ಲಿ ಈ ಸಭೆಯಲ್ಲಿ ಇಂತಹ ಒಂದು ಮಸೂದೆಯನ್ನು ಇಡಲಾಗಿತ್ತು. ಅದು ಯಾವ ಕಾರಣದಿಂದಲೋ ಇದರ ಬಗ್ಗೆ ಒಂದು ಏಕರೂಪವಾದ ಒಂದು ಕಾನೂನಾಗುವುದಕ್ಕೆ ಅವತ್ತಿನ ದಿವಸದಲ್ಲಿ ಸಾಧ್ಯವಾಗಲಿಲ್ಲ. ಮತ್ತೆ ಈಗ ಇದನ್ನು ಒಂದು ಏಕರೂಪವಾದಂಥ ಒಂದು ಕಾನೂನನ್ನಾಗಿ ಮಾಡುವುದಕೋಸ್ಕರವಾಗಿ ಈ ಸಭೆಯ ಮುಂದೆ ಸರ್ಕಾರ ತೆಗೆದುಕೊಂಡು ಬರತಕ್ಕ ಅವಕಾಶ ದೊರಕಿತು. ಅದರ ಉದ್ದೇಶಗಳನ್ನು ಈಗಾಗಲೇ ಮಾನ್ಯ ಸದಸ್ಯರನೇಕರು ಹೇಳಿದ್ದಾರೆ. ಈಗ ಯಾರು ಭಿಕ್ಷಾಟನೆಯನ್ನು ಮಾಡುತ್ತಿದ್ದಾರೋ ಅಂತಹವರನ್ನು ಹಿಡಿದು ಅವರಿಗೆ ಒಂದು ರೀತಿಯಲ್ಲಿ ತರಪೇತನ್ನು ಕೊಟ್ಟು ಅವರಿಗೆ ಯಾವುದಾದರೂ ಕೆಲಸಗಳನ್ನು ಅಥವಾ ಕಸಬನ್ನು ಒದಗಿಸಿಕೊಟ್ಟು, ಈ ರೀತಿಯಾಗಿ ಬಿಕ್ಷಾಟನೆ ಮಾಡತಕ್ಕದ್ದು ಸರಿಯಲ್ಲವೆಂದು ಹೇಳಬೇಕಾಗಿದೆ. ಆದ್ದರಿಂದ ಈಗ ನಮಗೆಲ್ಲರಿಗೂ ಮತ್ತು ಸಾರ್ವಜನಿಕರಿಗೆ ಇರತಕ್ಕ ಜವಾಬ್ದಾರಿ ಏನೆಂದರೆ ಈ ಒಂದು ಭಿಕ್ಷಾಟನೆಯನ್ನು ತಪ್ಪಿಸತಕ್ಕಂಥಾದ್ದು. ಅದರ ಬಗ್ಗೆ ಬಿಕ್ಷುಕರಿಗೆ ತಕ್ಕ ಸೂಚನೆಗಳನ್ನು ಹೇಳತಕ್ಕಂಥಾದ್ದು, ಅದರ ಬಗ್ಗೆ ನಾವು ಈಗಾಗಲೇ ಇದರಲ್ಲಿ ಕೆಲವು ಸೂತ್ರಗಳನ್ನು ಹಾಗೂ ಕೆಲವಾರು ವಿನಾಯಿತಿಗಳನ್ನು ಕೊಟ್ಟಿದ್ದೇವೆ. ಅನೇಕ ಸದಸ್ಯರೂ ಸಹ ಅದರ ಬಗ್ಗೆ ಈಗಾಗಲೇ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಆದ್ದರಿಂದ ಇದರ ಬಗ್ಗೆ ಯಾವ ರೀತಿಯಲ್ಲಿ ಒಂದು ಏಕರೂಪವಾದಂಥ ಶಾಸನವನ್ನು ರಚನೆ ಮಾಡಬೇಕು, ಅದರ ಆಡಳಿತ ಹೇಗೆ ಇರಬೇಕೆಂಬುದನ್ನು ಯೋಚನೆ ಮಾಡಿ ಮ್ಯಾನೇಜ್‌ಮೆಂಟ್ ಆಫ್ ಇನ್‌ಸ್ಟಿಟ್ಯೂಷನ್ಸ್ ಹೇಗೆ ನಡೆದುಕೊಂಡು ಬರಬೇಕೆಂಬುದನ್ನೂ ಸಹ ಆಲೋಚಿಸಿ ಅದಕ್ಕಾಗಿ ಏನು ಕ್ರಮವನ್ನು ಅನುಸರಿಸಬೇಕೆಂದು ಪರ್ಯಾಲೋಚಿಸಿ ಅದರ ಜೊತೆಗೆ ಈ ವೃತ್ತಿಯನ್ನು ಮಾಡುವವರಿಗೆ ಏನು ಶಿಕ್ಷೆ ಕೊಡಬೇಕೆಂಬುದನ್ನೂ ಸಹ ಇದರಲ್ಲಿ ನಾವು ಹೇಳಿದ್ದೇವೆ. ಮಾನ್ಯ ಸದಸ್ಯರು ಇದರ ಬಗ್ಗೆ ಒಂದು ಮೂಲಭೂತವಾದ ಪ್ರಶ್ನೆಯನ್ನು ಎತ್ತಿದರು. ಇದು ನಮ್ಮ ದೇಶದಲ್ಲಿ ಒಂದೇ ಅಲ್ಲ, ಎಲ್ಲಾ ಧರ್ಮಗಳಲ್ಲಿಯೂ ಬೇರೆ ಬೇರೆ ದೇಶಗಳಲ್ಲಿಯೂ ಕೂಡ ಹಿಂದೆ ಒಂದು ಕಾಲದಲ್ಲಿ ಈ ಒಂದು ಭಿಕ್ಷಾಟನೆ ಮಾಡತಕ್ಕದ್ದು ಇತ್ತು. ಅದನ್ನು ಅಪರಾಧವೆಂದು ಪರಿಗಣಿಸಿ ಕೆಲವಾರು ಕಾನೂನುಗಳನ್ನು ಮಾಡುತ್ತಿದ್ದರು. ನಮ್ಮ ದೇಶದ ಇತಿಹಾಸವನ್ನು ಮತ್ತು ಬೇರೆ ಬೇರೆ ದೇಶಗಳ ಇತಿಹಾಸವನ್ನು ನಾವು ಅಧ್ಯಯನ ಮಾಡಿದ್ದೇ ಆದರೆ, ಮತ್ತು ಇತರ ದೇಶಗಳ ಚರಿತ್ರೆಯನ್ನು ನೋಡಿದ್ದೇ ಆದರೆ, ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಇದಕ್ಕೆ ಸಮಾಜದ ಹಾಗೂ ಸಮಾಜದಲ್ಲಿರತಕ್ಕ ಪದ್ಧತಿಗಳು ಮತ್ತು ಆರ್ಥಿಕ ಸನ್ನಿವೇಶಗಳು — ಇವೆಲ್ಲವೂ ಬಹಳ ಮಟ್ಟಿಗೆ ಇದಕ್ಕೆ ಮೂಲ

ಕಾರಣಗಳಾಗಿವೆಯೆಂಬುದನ್ನು ನಾವು ಒಪ್ಪಿಕೊಳ್ಳಬೇಕಾಗಿದೆ. ಏಕೆಂದರೆ, The socio-economic conditions on the one hand and exploitation by the adults on the other hand, not only conspire but compel the children and some other to resort to begging. ಹಾಗೆಯೇ ಆರ್ಥಿಕ ಮತ್ತು ಸಾಮಾಜಿಕ ಸನ್ನಿವೇಶಗಳೂ ಸಹ ಕಾರಣವಾಗಿರುತ್ತವೆ. ಅದರ ಜೊತೆಗೆ ನಮ್ಮಲ್ಲಿ ಅನೇಕ ಜನರು ಅಂಗವಿಕಲರು ಇದ್ದಾರೆ. ಕುರುಡರು, ಕುಂಟರು, ಮೂಕರು, ಮಂಕರು, ಮೂಗರು, ಕಿವುಡರು, ಹಾಗೂ ಹೆಳವರು—ಇವರನ್ನು ಸಮಾಜದಲ್ಲಿ ಏನು ಹೇಳುತ್ತೇವೆಂದರೆ, we just treat them as blossom of our society. ಸಾಮಾನ್ಯವಾಗಿ ನಾವು ಒಂದು ಹೊಳೆಯನ್ನು ದಾಟಬೇಕಾದರೆ, ಅಥವಾ ಒಂದು ನದಿಯನ್ನು ದಾಟಬೇಕಾದರೆ, ನಾವು ದೋಣಿಯನ್ನು ಉಪಯೋಗಿಸುತ್ತೇವೆ. ದೋಣಿಯಲ್ಲಿ ಮರದ ತುಂಡುಗಳನ್ನು ಇಟ್ಟಿರುತ್ತಾರೆ, ಅಲ್ಲಿ ಜನ ಜಾಸ್ತಿಯಾದರೆ ಅದರಲ್ಲಿ ಕೆಲವನ್ನು ಹೊರಗಡೆಗೆ ಇಡುತ್ತಾರೆ. ಜನ ಕಡಿಮೆಯಾದರೆ ಮತ್ತೆ ಅದರಲ್ಲಿ ಕೆಲವನ್ನು ಒಳಗೆ ಹಾಕುತ್ತಾರೆ. ಆ ರೀತಿಯಲ್ಲಿ ನಾವು ಅವರಿಂದ ಸೇವೆಯನ್ನು ಉಪಯೋಗಿಸಿಕೊಳ್ಳುತ್ತಿದ್ದೇವೆ. ಆದರೆ ಕೆಲವರು ಅವರ ಸೇವೆ ಮುಗಿದ ತಕ್ಷಣ ಅವರ ಕಡೆಗೆ ಗಮನವನ್ನು ಕೊಡುವುದೇ ಇಲ್ಲ. ಅದು ಸರಿಯಲ್ಲ. ಆದರೆ ಕೆಲವು ಕಡೆಗಳಲ್ಲಿ ತಂದೆತಾಯಿಗಳಿಗೆ ಅನ್ನ ಹಾಕದೇ ಇರುವವರೂ ಸಹ ಭಿಕ್ಷಾ ಪ್ರವೃತ್ತಿಗೆ ತೊಡಗಿರುವವರನ್ನು ನಾವು ಈ ದಿವಸ ಅನೇಕ ಸಮಾಜಗಳಲ್ಲಿ ನೋಡುತ್ತಿದ್ದೇವೆ. ಇಂಥಾದ್ದನ್ನು ಈಗ ಯಾರೂ ಕೂಡ ಮರೆಯುವಹಾಗಿಲ್ಲ. ಅಂಥಾದ್ದನ್ನು ಯಾರೂ ಕೂಡ ಸಮರ್ಥನೆ ಮಾಡುತ್ತೇನೆಂದೂ ಹೇಳುವ ಹಾಗೆ ಇಲ್ಲ. ಮಾನ್ಯ ಶ್ರೀ ಶಾಮಣ್ಣನವರು ಮತ್ತು ಶ್ರೀ ಕೃಷ್ಣಪ್ಪನವರು ಇದರಲ್ಲಿರತಕ್ಕ ಒಂದು ಮೂಲಭೂತವಾದ ಸಮಸ್ಯೆ ಅಂದರೆ ಆರ್ಥಿಕ ಸಮಸ್ಯೆಯ ವಿಷಯವಾಗಿ ಹೇಳಿದರು. ಅದನ್ನು ನಾನು ಒಪ್ಪುತ್ತೇನೆ. ನಿರುದ್ಯೋಗದ ಬಗ್ಗೆ ಬಹಳವಾಗಿ ಹೇಳಿದರು. ನಾನು ಹೇಳುವುದೇನೆಂದರೆ ಈ ಭಿಕ್ಷಾಟನೆಗೆ ಕಾರಣ ನಿರುದ್ಯೋಗವೂ ಒಂದೆಂಬುದನ್ನು ನಾನು ಒಪ್ಪಬೇಕಾಗಿದೆ. ಹಾಗೂ ಬಡತನವೂ ಕೂಡ ಒಂದು ಕಾರಣವೆನ್ನಬಹುದು. ಬಡತನಕ್ಕೆ ಎಷ್ಟೋ ರೋಗರುಜಿನಗಳು ಇದ್ದಹಾಗೆ ಭಿಕ್ಷೆಯೂ ಸಹ ಒಂದು ರೋಗವಿದ್ದಂತೆಯೇ. ಇದರ ಜೊತೆಗೆ ಇನ್‌ವಾಲಂಟರಿ ಐಡಲನೆಸ್ ಎಂಬುದಾಗಿ ನಾವೇನು ಅನೈತಿಕ ಸೋಮಾರಿತನವೆಂದು ಹೇಳುತ್ತೇವೋ ಅದೂ ಕೂಡ ಈ ಒಂದು ಭಿಕ್ಷಾಟನೆ ಮಾಡುವುದಕ್ಕೆ ಕಾರಣವೆಂದು ಹೇಳಬಹುದು. ಆದ್ದರಿಂದ ಈ ಒಂದು ಭಿಕ್ಷೆ ಎಂಬುದು ಎಲ್ಲಾ ಧರ್ಮಗಳಗೂ ಅನುಗುಣವಾಗಿ ಬಂದಿದೆ. ಮಾನ್ಯ ಶ್ರೀ ಸಿದಪ್ಪನವರೂ ಮತ್ತು ಮಾನ್ಯ ಶ್ರೀ ಮಂಜುನಾಥ್ ಅವರು ಇದರ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾರೆ. ಎಲ್ಲಾ ಧರ್ಮಗಳಲ್ಲಿಯೂ ಮೊದಲಿನಿಂದಲೂ ಭಿಕ್ಷೆ ಇತ್ತೆಂಬುದು ನಿರ್ವಿವಾದವಾಗಿದೆ. ಹಿಂದೆ ಬುದ್ಧ, ಕ್ರೈಸ್ತ, ಬಸವೇಶ್ವರರು ಹಾಗೂ ಜೊರಾಷ್ಟ್ರಿಯನ್ಸ್ ಈ ಒಂದು ಭಿಕ್ಷಾವೃತ್ತಿಗೆ ಮಾನ್ಯತೆ ಕೊಟ್ಟಿದ್ದರು. ಆದ್ದರಿಂದ ಕೆಲವರಿಗೆ ನಾವು ಇಲ್ಲಿ ಎಗ್ಸೆಂಪ್‌ಷನ್ ಕೊಟ್ಟಿದ್ದೇವೆ. ನಾನೇ ಒಂದು ನಿದರ್ಶನವನ್ನು ಈ ಸಂದರ್ಭದಲ್ಲಿ ಇಲ್ಲಿ ಕೊಡಬೇಕಾಗಿದೆ. ಒಬ್ಬ ಮನುಷ್ಯ ಅಂಗವಿಕಲನಾಗಿದ್ದರೂ ಅವನು ಆರ್ಮೋನಿಯಂ ನುಡಿಸುತ್ತಾ ಸಂಗೀತವನ್ನು ಹಾಡುತ್ತಿದ್ದ. ದೇವರ ನಾಮಗಳನ್ನು ಹಾಡುತ್ತಿದ್ದ ಒಂದು ಸನ್ನಿವೇಶವನ್ನು ನಾನೇ ನೋಡಿದೆ. ಅವನು ಒಂದು ಹಾರ್ಮೋನಿಯಂನ್ನು ಇಟ್ಟುಕೊಂಡು ಬೆಗ್ಗರ್ಸ್ ರಿಲೀಫ್ ಕಮಿಟಿ ಮೀಟಿಂಗ್ ನಡೆಯುತ್ತಿದ್ದಾಗ ಬಂದು ನನಗೆ ಲೈಸೆನ್ಸ್ ಕೊಡಬೇಕೆಂದು ಕೇಳಿದ. ಈ ವಿಚಾರ ಮಾನ್ಯ ಶ್ರೀ ಶಾಮಣ್ಣನವರಿಗೂ ಗೊತ್ತಿದೆ. ನಾನು ಹೊರಗಡೆಗೆ ಬರುವ ಸಂದರ್ಭದಲ್ಲಿ ನನ್ನ ಹತ್ತಿರ ಬಂದವನು ರಿಲಿಜಿಯಸ್ ಫೀಲಿಂಗ್ಸ್ ಇಟ್ಟುಕೊಂಡು ನನಗೆ ಲೈಸೆನ್ಸ್ ಬೇಕೆಂದು ಹೇಳಿದಾಗ ಬಹುಶಃ ಆತನಿಗೆ ಲೈಸೆನ್ಸ್ ಕೊಡದೇ ಇರುವುದಕ್ಕಾಗುವುದಿಲ್ಲವೆಂದು ನಾನಾದರೂ ಅಂದುಕೊಂಡೆ. ಅಂತಹ ರಿಲಿಜಿಯಸ್ ಮೆಂಡಿಕೆಂಟ್ಸ್ ಬಗ್ಗೆ ವಿನಾಯಿತಿ ಕೊಡಬೇಕೆಂದೆನ್ನಿಸಿತು. ಇವತ್ತಿನ ದಿವಸ ನಾವು ಬಹುಶಃ ಅನೇಕ ಆರ್ಥಿಕ ಯೋಜನೆಗಳನ್ನು ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ, ಈಗ ಯಾವ ಹಿಂದು ಬಡತನ ಈ ದೇಶದಲ್ಲಿಯೋ ಆ ಬಡತನವನ್ನ ಹೋಗಲಾಡಿಸುವುದಕ್ಕೆ ನಾವು ಪ್ರಯತ್ನಗಳನ್ನು ಮಾಡುತ್ತಾ ಇರುವಾಗ ಈ ರಾಷ್ಟ್ರದ ಪ್ರಕೃತಿದತ್ತವಾದ ಸಂಪತ್ತನ್ನು ನಾವು ವೃದ್ಧಿಮಾಡಿಕೊಂಡು ಮಾನವಶಕ್ತಿಯನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸಿಕೊಂಡು ಹೋಗಬೇಕು. ರಾಷ್ಟ್ರದ ಸಂಪತ್ತನ್ನು ಬೆಳೆಸಿಕೊಂಡು ರಾಷ್ಟ್ರದ ಆದಾಯವನ್ನು ಬೆಳೆಸಿಕೊಂಡು ಹೋದಂತೆ ಮತ್ತು ವ್ಯವಸಾಯ ಹಾಗೂ ಕೈಗಾರಿಕೆ ಕ್ಷೇತ್ರಗಳಲ್ಲಿ ಈಗ ಕ್ರಾಂತಿಯನ್ನು ಕಡಿಮೆ ಮಾಡುತ್ತಾ ಇರುವ ಹಾಗೆ ನಿರುದ್ಯೋಗದ ಕ್ರಾಂತಿಯನ್ನು ಸಹ ನಾವು ಕಡಿಮೆ ಮಾಡಬೇಕು. ವ್ಯವಸಾಯ ಮತ್ತು ಕೈಗಾರಿಕಾ ಕ್ಷೇತ್ರದಲ್ಲಿ ಕ್ರಾಂತಿಕಾರ ಬದಲಾವಣೆಯಾದರೆ ಈ ನಿರುದ್ಯೋಗ ಸಮಸ್ಯೆ ಹೋಗುತ್ತದೆ. ಆಗ ಆ ಭಿಕ್ಷಂಕರ ಹಾವಳಿ ಸಹ ಹೋಗುತ್ತದೆ ಎಂದು ನಾನು ತಿಳಿದಿದ್ದೇನೆ.

4—30 P.M.

ಶ್ರೀ ಕೋಣಂದೂರು ಲಿಂಗಪ್ಪ.—ಇವೆಲ್ಲಾ ಹೋಗುವುದಕ್ಕೆ ಎಷ್ಟು ಶತಮಾನಗಳು ಬೇಕಾಗುತ್ತವೆ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ನಾನು ಈಲ್ ಆಗುವುದಿಲ್ಲ' ಇದರಲ್ಲಿ ಮಾತನಾಡುವುದಾದರೆ ಎರಡು ಗಂಟೆಗಳ ಕಾಲ ಮಾತನಾಡಿ ಮುಗಿಸಬಹುದು. ಮಾನ್ಯ ಅಧ್ಯಕ್ಷರ, ಅನೇಕ ಮಿತ್ರರು ಇದರ ಬಗ್ಗೆ ತಮ್ಮ ತಮ್ಮ ಅಭಿಪ್ರಾಯಗಳನ್ನು ಸೂಚಿಸಿದ್ದಾರೆ. ತಾವು ರೂಲ್ಸ್‌ನ್ನು ಮಾಡತಕ್ಕ ಸಂದರ್ಭದಲ್ಲಿ ಮಾನ್ಯ ಸದಸ್ಯರು ಹೇಳಿರತಕ್ಕ ಅಭಿಪ್ರಾಯಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಎಷ್ಟು ಮಟ್ಟಿಗೆ ಸರ್ವ ಪ್ರಯತ್ನ ಮಾಡುತ್ತೇವೆಂದು ಮಾತ್ರ ಹೇಳುತ್ತೇನೆ. ಅದೇ ರೀತಿ ಮಾನ್ಯ ನಾಯುಡುರವರು ಒಂದು ವಿಷಯ ಹೇಳಿದರು. ಇದರ ಉದ್ದೇಶ ಏನಿದೆ ಅದನ್ನು ಈಡೇರಿಸುವುದಕ್ಕೆ ಕೇಂದ್ರ ಪರಿಹಾರ ನಿಧಿ ಮಾಡಬೇಕೆಂದು ನಾವು ಹೇಳುತ್ತಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಂತ್ರಿಯವರು ಹಿಂದೂ ಧರ್ಮ ದಾನ ಮಾಡುವುದನ್ನು ಮಾನ್ಯತೆ ಮಾಡಿದೆ ಎಂದು ಹೇಳಿದರು. ಅಂತರೆ ದಾನ ಕೊಡಬೇಕಾದರೆ ಅಲ್ಲಿ ಭಿಕ್ಷೆ ತೆಗೆದುಕೊಳ್ಳುವವರು ಒಬ್ಬರು ಇರಬೇಕಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಆದ್ದರಿಂದ ಈ ಭಿಕ್ಷಾಟನೆಯ ಹಾವಳಿಯನ್ನು ತಪ್ಪಿಸುವುದಕ್ಕೋಸ್ಕರವಾಗಿ ನಾವು ಈ ಒಂದು ಬಿಲ್ಲನ್ನು ತಂದಿದ್ದೇವೆ. ಇದರಲ್ಲಿ ಸ್ಥಾನಿಕ ಸಮಿತಿಗಳನ್ನು ಮಾಡಿ ಕೇಂದ್ರದ ಆಶ್ರಯದಲ್ಲಿ ಇಟ್ಟುಕೊಂಡಿರಬೇಕೆಂದು ಇದೆ. ಸಾಮಾನ್ಯವಾಗಿ ಎಲ್ಲಾ ಸದಸ್ಯರು ಸಹ ಈ ಸೆಸ್ ಹಾಕತಕ್ಕದು ಸರಿಯಲ್ಲವೆಂದು ಹೇಳಿದರು. ಬಹುಶ. ೧೯೬೬ನೇ ಇಸವಿಯಲ್ಲಿ ಮಾಡಿದಂತಹ ಕಾನೂನಿನಲ್ಲಿ ಹಾಗೂ ೧೯೪೪ನೇ ಇಸವಿಯಲ್ಲಿ ಮಾಡಿದಂತಹ ಕಾನೂನಿನಲ್ಲಿ ಸಹ ಇದು ''ಟ್ಯಾಕ್ಸೇಶನ್'' ಎಂದು ಇತ್ತು. ಆಗ ಒಂದು ರೂಪಾಯಿ ಮೇಲೆ ೬ ಪೈಸೆ ಹಾಕಬೇಕೆಂದು ಮಾಡಿದ್ದರು. ಅದನ್ನು ಈಗ ಮೂರು ಪೈಸೆಗೆ ಇಳಿಸಿದ್ದೇವೆ. ಅದನ್ನು ಫಿನಾನ್ಸಿಯಲ್ ಮೆಮಾರಂಡಂನಲ್ಲಿ ಹೇಳಿದ್ದೇವೆ. ನಮಗೆ ಈ ಭಿಕ್ಷಾಟನೆಯಲ್ಲಿ ಎಷ್ಟು ಜನ ಇದ್ದಾರೆ ಎಂಬ ಅಂಕಿ ಅಂಶ ಸಿಗಲಿಲ್ಲ. ನಗರಸಭೆ ಮತ್ತು ಪುರಸಭೆಗಳವರು ನಮಗೆ ಸಹಕಾರ ಇದ್ದರಲ್ಲಿ ಕೊಟ್ಟರೆ ಮಾತ್ರ ಇದನ್ನು ಮಾಡಬಹುದು. ಏಕೆಂದರೆ ಬೆಗ್ಗರ್ಸ್‌ನ್ನು ಒಂದೇ ಕಡೆಯಲ್ಲಿ ಕಂಡುಹಿಡಿಯುವುದು ಕಷ್ಟ.

ಶ್ರೀ ಟಿ.ಎಂ. ಮಂಜುನಾಥ.—ಮೂರು ಪೈಸೆ ಪ್ರಕಾರ ಎಷ್ಟು ಹಣ ಒಟ್ಟು ಬರುತ್ತದೆ ಎಂದು ಲೆಕ್ಕ ಹಾಕಿದ್ದೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—ಅವರ ಅಂಕಿ ಅಂಶ ಸಿಕ್ಕಿದಮೇಲೆ ಅದನ್ನು ಲೆಕ್ಕ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇದರಲ್ಲಿ ಟ್ಯಾಕ್ಸ್ ಆನ್ ಬಿಲ್ಡಿಂಗ್ಸ್, ಆನ್ ಎಂಟ್ರಿ ಆಫ್ ಗೂಡ್ಸ್ ಇತ್ಯಾದಿ ಅನೇಕ ವಿಚಾರಗಳ ಮೇಲೆ ಹಾಕಬಹುದು ಎಂದು ಹೇಳಿದ್ದೇವೆ

ಆದ್ದರಿಂದ ಅಬೇಟರ್ಸ್‌ಗೆ ಒಂದು ಪನಿಷ್‌ಮೆಂಟ್ ಇರಬೇಕು ಎಂದು ಒಂದು ಕಾನೂನು ತಂದಿದ್ದೇವೆ. ವಿಧಾನಪರಿಷತ್ತಿನಲ್ಲಿ ಕೂಡ ಈ ಭಿಕ್ಷುಕರ ಸಮಸ್ಯೆಯ ಬಗ್ಗೆ ಒಂದು ನಾನ್ ಆಫಿಷಿಯಲ್ ರೆಜಲ್ಯೂಷನ್ ಚರ್ಚೆಗೆ ಬಂದಿದ್ದಾಗ ಅಲ್ಲಿಯ ಮಾನ್ಯ ಸದಸ್ಯರು ಅಬೇಟರ್ಸ್‌ಗೆ ಒಂದು ಶಿಕ್ಷೆಯನ್ನು ವಿಧಿಸುವಂತಹ ವ್ಯವಸ್ಥೆ ಮಾಡಬೇಕೆಂದು ಹೇಳಿದ್ದರು. ಆದ್ದರಿಂದ ಹಿಂದೆ ನಿಂತು ಭಿಕ್ಷಾಟನೆ ಮಾಡುವುದಕ್ಕೆ ಮಕ್ಕಳನ್ನು ಪ್ರಚೋದನೆ ಮಾಡತಕ್ಕವರು ಶಿಕ್ಷಾರ್ಹರು ಎನ್ನುವ ವಿಷಯವನ್ನು ಇದರಲ್ಲಿ ಪ್ರಸ್ತಾಪ ಮಾಡಿದ್ದೇವೆ. ಚಿಲ್ಡ್ರನ್ಸ್ ಆಫ್ ಆಕ್ಟ್‌ನಲ್ಲಿ ಒಪ್ಪಿಕೊಂಡಿರುವ ಪ್ರಕಾರ ೧೬ ವರ್ಷದ ಹುಡುಗರು ಮತ್ತು ೧೮ ವರ್ಷದ ಹುಡುಗಿಯರನ್ನು ಮಕ್ಕಳು ಎಂದು ಪರಿಗಣಿಸುವುದರಿಂದ ಅದನ್ನು ಇದರಲ್ಲಿ ಹಾಕಿದ್ದೇನೆ. ಅವರ ವಯಸ್ಸನ್ನು ಕೆಳಗೆ ಇಳಿಸುವುದಕ್ಕೆ ಆಗುವುದಿಲ್ಲ.

ಶ್ರೀ ಟಿ.ಎಂ. ಮಂಜುನಾಥ.— ೧೮ ವರ್ಷದ ಹೆಣ್ಣು ಮಕ್ಕಳು ಭಿಕ್ಷೆ ಬೇಡುತ್ತಾರೆ ಎಂದರೆ ಅದಕ್ಕಿಂತ ಹೆಚ್ಚು ಏನಿದೆ ? ಅದನ್ನು ಕಡಿಮೆ ಮಾಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಸ್ವಾಮಿ.—೧೬ ಮತ್ತು ೧೮ ವರ್ಷದ ವಯೋಮಿತಿಯನ್ನು ಗೊತ್ತು ಮಾಡಲು ಎಕ್ಸ್‌ಪರ್ಟ್‌ಗಳ ಸಲಹೆಯನ್ನು ತೆಗೆದುಕೊಂಡು ಕೇಂದ್ರದ ಕಾನೂನಿನಲ್ಲಿ ಅಳವಡಿಸಿರುವುದರಿಂದ ಅದನ್ನು ಕಡಿಮೆ ಮಾಡುವುದಕ್ಕೆ ಬರುವುದಿಲ್ಲ. ಇಷ್ಟು ಮಾತ್ರ ಈ ಮಾನ್ಯ ಸದಸ್ಯರು ಏನು ಅಭಿಪ್ರಾಯಗಳನ್ನು ಸೂಚಿಸಿದ್ದಾರೆ ಆ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ರೂಲ್ಸ್ ಮಾಡತಕ್ಕ ಸಂದರ್ಭದಲ್ಲಿ ಡಿಲಿಗೇಟೆಡ್ ಲೆಜಿಸ್ಲೇಷನ್ ಆಗತಕ್ಕಂಥಾ ಸಂದರ್ಭದಲ್ಲಿ ರೂಲ್‌ನಲ್ಲಿ ಯಾವ

ಯಾವ ಅಂಶಗಳನ್ನು ಅಳವಡಿಸುವುದಕ್ಕೆ ಸಾಧ್ಯವಿದೆಯೋ ಅದನ್ನು ಮಾಡುತ್ತೇವೆ, ಇಷ್ಟು ಮಾತ್ರ ಮಾನ್ಯ ಸದಸ್ಯರು ಮಾಡಿದ ದರ್ಜೆಗೆ ಉತ್ತರ ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

MR. DEPUTY SPEAKER.—I will now put the consideration motion to the vote of the House. The question is :

"That the Mysore Prohibition of Beggary Bill, 1973 be take into consideration."

The motion was adopted

Clause—2

MR. DEPUTY SPEAKER :—For clause 2 there are amend ments by hon. Member Sri T.R. Shamanna.

SRI T. R. SHAMANNA (forb) ;—I move the following amendements

"That page 3 in sub-clause (2) (iv) at the end of the clause the following shall be added"

"who has necessary identification-student certificate from the Head of the Educational Institution."

"That at page 3 after sub-clause (e) the following new clause as (f) shall be inserted.

"(f) persons eating from used dining leaves thrown eatable at marriage choultries and other place where people are fed and dining leaves are thrown"

MR. DEPUTY SPEAKER.—Amendments moved ;

"That at page 3 in sub-clause (2) (iv) at the end of the clause the following shall be added ;

"who has necessary identification-student certisficate from the Head of the Educational Institution".

"(f) persons eating from used dining leaves thrown eatables at marriages choultries and other places where people are fed and dining leaves are thrown."

†ಶ್ರೀ ಟಿ, ಆರ್. ಶಾಮಣ್ಣ.—ಇಲ್ಲಿ ನಮಗೆ ಕೊಟ್ಟಿರತಕ್ಕ ಮಸೂದೆಯಲ್ಲಿ ಡೆಫಿನಿಷನ್‌ನಲ್ಲಿ ಭಿಕ್ಷುಕರು ಎನ್ನುವುದಕ್ಕೆ ಕೆಲವರಿಗೆ ವಿನಾಯಿತಿಯನ್ನು ಕೊಟ್ಟಿದ್ದಾರೆ. ಈ ವಿನಾಯಿತಿಯಲ್ಲಿ 'is a student collecting alms for the presecution of his studies' ಎಂದು ಹೇಳಿದ್ದಾರೆ. ಆದ್ದರಿಂದ ಅವನು ವಿದ್ಯಾರ್ಥಿಯಾಗಿರಲಿ, ವಿದ್ಯಾರ್ಥಿಯಾಗಿಲ್ಲದಿರಲಿ ನಾನು ವಿದ್ಯಾರ್ಥಿ ಎಂದು ಸಾರ್ವಜನಿಕರಿಂದ ದುಡ್ಡು ಕಲೆಕ್ಟ್ ಮಾಡುತ್ತಾನೆ, ಆದ್ದರಿಂದ ಅವನು ವಿದ್ಯಾರ್ಥಿ ಎನ್ನುವುದಕ್ಕೆ ಒಂದು ಆಧಾರ ಬೇಕಾಗುತ್ತದೆ. ಈ ಕಾರಣದಿಂದ 'is a student collecting alms for the prosecution of students' ಎನ್ನುವ ಕಡೆ "who has necessary identification-student certificate from the Head of the Educational Institution" ಎನ್ನುವ ತಿದ್ದುಪಡಿಯನ್ನು ಸೇರಿಸಬೇಕು ಎಂದು ನಾನು ಈ ತಿದ್ದುಪಡಿಯನ್ನು ತಂದಿದ್ದೇನೆ, ಏತಕ್ಕೆಂದರೆ ಅನೇಕ ಜನ ಸುಲಭವಾಗಿ ಹಣ ಸಿಕ್ಕುತ್ತದೆ ಎಂದು ಹುಡುಗರು ೭ನೇ ಸ್ಟ್ಯಾಂಡರ್ಡ್‌ನಲ್ಲಿ ಓದುತ್ತಿದ್ದೇನೆ, ನಾನು ೮ನೇ ಸ್ಟ್ಯಾಂಡರ್ಡಿನಲ್ಲಿ ಓದುತ್ತಿದ್ದೇನೆ ಎಂದು ಹಣವನ್ನು

(ಶ್ರೀ ಟಿ. ಆರ್. ಶಾಮಣ್ಣ)

ಕಲೆಕ್ಟ್ ಮಾಡುವುದಕ್ಕೆ ಬಂದರೆ ಆಗ ಸ್ವಲ್ಪ ಕಷ್ಟವಾಗುತ್ತದೆ. ಆದ್ದರಿಂದ ಅವನ್ನು ವಿದ್ಯಾರ್ಥಿ ಎಂದು ಒಂದು ಐಡೆಂಟೆಫಿಕೇಷನ್ ಸರ್ಟಿಫೀಕೇಟ್ ಇಟ್ಟುಕೊಂಡಿದ್ದರೆ ಒಳ್ಳೆಯದು ಎನ್ನುವ ಉದ್ದೇಶದಿಂದ ನಾನು ಇದನ್ನು ತಂದಿದ್ದೇನೆ, ಅವನು ವಿದ್ಯಾರ್ಥಿ ಎನ್ನುವುದಕ್ಕೆ ಯಾವುದಾದರೂ ಒಂದು ಗುರುತು ಇರಬೇಕಾಗುತ್ತದೆ ಎನ್ನುವ ಉದ್ದೇಶದಿಂದ ನಾನು ಈ ತಿದ್ದುಪಡಿಯನ್ನು ತಂದಿದ್ದೇನೆ. ಇದನ್ನು ಮಾನ್ಯ ಮಂತ್ರಿಗಳು ಒಪ್ಪಿಕೊಳ್ಳಬೇಕು ಎಂದು ಹೇಳುತ್ತೇನೆ.

ಎರಡನೆಯದಾಗಿ ಈ ಮಸೂದೆಯಲ್ಲಿ

> Solicits or receives alms in a public place whether or not under any pretence such as singing, dancing, fortune telling, performing tricks, or selling articles."

